ಶ್ರೀ ಅಂಜನಮೂರ್ತಿ (ವಸತಿ ಸಚಿವರು) : ಚರ್ಚೆ ಮಾಡಲಿಲ್ಲ. ಆದರೆ ಆಗಲೇ ಅದು ಅನುಮೋದನೆಯಾಗಿದೆ.

ಅಧ್ಯಕ್ಷರು : ಆಗಿದೆ. ಅವರ ವಸತಿ ಇಲಾಖೆ ಮೇಲೆ ಯಾರೂ ಮಾತನಾಡಲಿಲ್ಲ. ಆದ್ದರಿಂದ, ಯಾರೂ ಮಾತನಾಡಲಿಲ್ಲವೆಂದು ಹೇಳಿ ಮಾಡಿದ್ದಾರೆ. ಅದು ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇರಲಿಲ್ಲ. ವಸತಿ ಕಾರ್ಯಚಟುವಟಿಕೆ ಒಂದು ವರ್ಷ ಪೂರ್ತಿ ಸ್ಥಗಿತ ಆಗಿರುವುದರಿಂದ ನಾವು ಯಾರೂ ಮಾತನಾಡಲಿಲ್ಲ. ನೀವೇನೂ ಮಾತನಾಡಲಿಲ್ಲ, ನಾನು ಉತ್ತರ ಕೊಡುವುದು ಏನೂ ಇಲ್ಲವೆಂದು ಮಂತ್ರಿಗಳು ಒಂದು ನಿಮಿಷದಲ್ಲಿ ಮುಗಿಸಿದರು.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಅಧ್ಯಕ್ಷರೇ, ವಸತಿ ಇಲಾಖೆ ಇದೆ ಎನ್ನುವುದೇ ಗೊತ್ತಿರಲಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರು.....

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ವಸತಿ ಇಲಾಖೆ......

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನು ಇದುವರೆಗೆ ನಮ್ಮ .... ಹಣ ಕೊಡುತ್ತಿದ್ದೇವೆ ಈ ಸಾರಿ.

ಅಧ್ಯಕ್ಷರು : ಈಗ ಮಾನ್ಯ ಕಂದಾಯ ಸಚಿವರು ಬೇಡಿಕೆ ಮೇಲೆ ಬಹಳ ಬ್ರೀಫ್ ಆಗಿ ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

5. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ (ಬೇಡಿಕೆಗಳ ಸಂಖ್ಯೆ 14, 7, 13, 12, 11, 27, 28, 24, 20, 8, 22, 3, 26, 15, 5, 21, 2, 4, 19 ಮತ್ತು 25)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ ತಾವು ಉತ್ತರ ಕೊಡಲಿಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಿನ್ನೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಈ ಭೂಕಬಳಿಕೆಗೆ ಸಂಬಂಧಪಟ್ಟಂಥ ವಿಷಯದಲ್ಲಿ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಕೈಗೆತ್ತಿಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಡಿಸಿರತಕ್ಕಂಥ ಹಿನ್ನೆಲೆಯಲ್ಲಿ ಅದರ ವಿಚಾರದಲ್ಲಿ ಈ ಕಂದಾಯ ಇಲಾಖೆಗೆ ಸಂಬಂಧಪಟ್ಟಂಥದ್ದನ್ನು ಸೇರಿಸುವುದರಿಂದ ಅದರ ಮಹತ್ವ ಕಡಿಮೆಯಾಗುತ್ತದೆನ್ನುವ ದೃಷ್ಟಿಯಲ್ಲಿ ಅವರು ಮಾತನಾಡಿದರು. ಆದರೆ, ಕೆಲವರು ಮಾನ್ಯ ನಾರಾಯಣಸ್ವಾಮಿ ಅವರೆಲ್ಲರೂ ಕೂಡ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿರುವುದರಿಂದ, ಅದನ್ನು ನಾನು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆಂದು ಹೇಳಿದಾಗ, ಇಲ್ಲ, ಇದು ವಿತ್ತೀಯ ಕಲಾಪಗಳು ಮುಗಿದನಂತರ ನಾನು ಇದಕ್ಕಾಗಿ ಪ್ರತ್ಯೇಕವಾಗಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲಿಕ್ಕೆ

ಅವಕಾಶ ಕಲ್ಪಿಸಿಕೊಡುತ್ತೇನೆ ಎಂದು ಹೇಳಿದ್ದಾರೆ ಮತ್ತು ವಿರೋಧ ಪಕ್ಷದ ಎಲ್ಲಾ ಹಿರಿಯ ಶಾಸಕರು ಮತ್ತು ಶಾಸಕರುಗಳೆಲ್ಲ ಈ ಸಂದರ್ಭದಲ್ಲಿ ತಾವು ಅದನ್ನು ಪ್ರಸ್ತಾಪ ಮಾಡುವುದು ಅಷ್ಟು ಔಚಿತ್ಯ ಅಲ್ಲ ಅನ್ನುವಂಥ ಪ್ರಶ್ನೆಯನ್ನೆತ್ತಿದ್ದರಿಂದ, ನಾನು ನಿನ್ನೆ ಆ ವಿಚಾರಗಳ ಬಗ್ಗೆ ದೀರ್ಘವಾಗಿ ಮಾತನಾಡಲಿಲ್ಲ. ತಾವು ಅಪ್ಪಣೆ ಕೊಡಿಸುವುದಾಗಿದ್ದರೆ, ವಿತ್ತೀಯ ಕಲಾಪಗಳು ಆದ ನಂತರ ಈ ನಿಯಮ 69ರ ಕೆಳಗೆ ತಾವು ಅವಕಾಶವನ್ನು ಕಲ್ಪಿಸಿಕೊಡುತ್ತೀರಿ ಅಂದರೆ ಆ ಭಾಗವನ್ನು ನಾನು ಕೈಬಿಡುತ್ತೇನೆ. ಇಲ್ಲದೇ ಇದ್ದರೆ, ಮತ್ತೆ ಹೇಳಬೇಕಾಗುತ್ತದೆ. ಆ ಭಾಗವನ್ನು, ಎಲ್ಲಾ ಒಪ್ಪುವುದಾದರೆ ಸರಿ, ಧನ್ಯವಾದಗಳು ಸನ್ಮಾನ್ಯ ಅಧ್ಯಕ್ಷರೆ. ನಾನು ನಂತರ ನಿಯಮ 69ರ ಸಂದರ್ಭದಲ್ಲಿ ಅದರ ವಿಚಾರಗಳನ್ನು ಹೇಳಲಿಕ್ಕೆ ಇಷ್ಟಪಡುತ್ತಿದ್ದೇನೆ. ಈ ಭೂಕಂದಾಯ ಇಲಾಖೆ ತಮಗೆ ಗೊತ್ತಿದ್ದಂತೆ ಒಂದು ಮಾತೃ ಇಲಾಖೆ. ಇದಕ್ಕೆ ತನ್ನದೇ ಆಗಿರತಕ್ಕಂಥ ಮಹತ್ವ ಮತ್ತು ಘನತೆ ಇರುವುದನ್ನು ತಾವು ಕಂಡಿದ್ದೀರಿ. ಹಿಂದೆ ಕೌಟಿಲ್ಯನ ಕಾಲದ ಅರ್ಥಶಾಸ್ತ್ರದಿಂದ ಹಿಡಿದು ಇಲ್ಲಿಯವರೆಗೆ ರಾಜ್ಯಭಾರವನ್ನು ಮಾಡಿದಂಥ ಎಲ್ಲಾ ರಾಜರುಗಳು, ಮಹಾರಾಜರುಗಳು ಮತ್ತು ಆಡಳಿತ ನಡೆಸಿದಂಥ ರಾಜ್ಯಗಳು ತಮ್ಮದೇ ಆಗಿರತಕ್ಕಂಥ ರೀತಿಯಲ್ಲಿ ಭೂಮಾಪನ ಕಾರ್ಯವನ್ನು ಮಾಡಿ ಆ ಕಾಲದಲ್ಲಿ ಭೂಕಂದಾಯ ಒಂದೇ ಒಂದು ದೊಡ್ಡ ಆದಾಯ ಅಂತ ಹೇಳಿ ಪರಿಗಣಿಸಿರತಕ್ಕಂಥಾದ್ದು ಇತ್ತು. ಆದರೆ, ಸರ್ಕಾರ ಪ್ರಜಾಪ್ರಭುತ್ವದ ಅನುಷ್ಠಾನಕ್ಕೆ ಒಳಗಾಗಿ ಅದರ ಮೂಲಕ ಸಂಸದೀಯ ವ್ಯವಹಾರಗಳ ನಡೆವಳಿಕೆಗಳಾದ ಮೇಲೆ ಅದಕ್ಕೆ ಒಂದು ಸಾಮಾಜಿಕ ಜವಾಬ್ದಾರಿ ಮತ್ತು ಸಾಮಾಜಿಕ ನ್ಯಾಯ ಕೊಡತಕ್ಕಂಥದ್ದು ಮತ್ತು ಅಭಿವೃದ್ಧಿ ಪರವಾದಂಥ ಕೆಲಸಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು ಎನ್ನುವಂಥ ಮಾತುಗಳು ಬಂದ ನಂತರ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮೊದಲಾದಂಥ ಎಲ್ಲಾ ವಿಷಯಗಳಲ್ಲಿಯೂ ಕೂಡ ಸರ್ಕಾರ ತನ್ನದೇ ಆದಂಥ ಜವಾಬ್ದಾರಿಯನ್ನು ನಿರ್ವಹಿಸಬೇಕು ಎನ್ನುವಂಥ ಒಂದು ರಾಜಕೀಯ ಇಚ್ಛಾಶಕ್ತಿ ಮತ್ತು ಅಭಿಪ್ರಾಯಗಳು ಮೂಡಿಬಂದ ನಂತರ ಇವತ್ತು ನೂರು ಪಟ್ಟು ಆ ಅಧಿಕಾರ ನಡೆದಿದೆ. ಅಂದರೆ, ಈ ರೀತಿಯಾದಂತ ಕೆಲಸಕಾರ್ಯಗಳನ್ನು ಸರ್ಕಾರದಿಂದ ನಿರೀಕ್ಷೆ ಮಾಡುವಂಥಾದ್ದು ಕೂಡ ಇದೆ. ಅದಕ್ಕಾಗಿ ಶಾಸನ ಸಭೆಗಳು ರಚನೆಯಾಗಿದೆ. ಶಾಸನಕ್ಕೆ ಅನುಗುಣವಾದಂಥ ರೀತಿಯಲ್ಲಿ ಸರ್ಕಾರ ಕೆಲಸ ಮಾಡಬೇಕಾಗಿರುವುದರಿಂದ ಬರುತ್ತಾ ಬರುತ್ತಾ ಅಭಿವೃದ್ಧಿ ಇಲಾಖೆಗಳಿಗೆ ಹೆಚ್ಚು ಪ್ರಾಧಾನ್ಯತೆ ಉಂಟಾಗುತ್ತಾ, ಕಂದಾಯ ಇಲಾಖೆಯಲ್ಲಿ ಭೂ ಕಂದಾಯ 10 ಎಕರೆಗಿಂತ ಕಡಿಮೆ ಇರತಕ್ಕಂಥವರು ಭೂ ಕಂದಾಯವನ್ನು ಮಾಫಿ ಮಾಡಿರತಕ್ಕಂಥದ್ದು, ಇವೆಲ್ಲವೂ ಬಂದ ನಂತರ ಜಿಲ್ಲಾ ಪಂಚಾಯಿತಿಗಳ ಅಸ್ತಿತ್ವ ಮತ್ತು ಅಧಿಕಾರದ ವಿಕೇಂದ್ರೀಕರಣದ ನಂತರ ಮೇಲ್ನೋಟಕ್ಕೆ ಜಿಲ್ಲಾಧಿಕಾರಿಗಳ ಕಛೇರಿಯ ಮಹತ್ವ ಕಡಿಮೆಯಾಗಿದೆ ಅಂತ ಹೇಳಿ ತೋರುಗಾರಿಕೆಗೆ ಅಥವಾ ಮೇಲುಗಾಣಿಕೆಗೆ ಕಂಡು ಬಂದರೂ ಕೂಡ ಮತ್ತು ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಯಲ್ಲಿ ಒಂದು ಆಡಳಿತ ಆ ಆಡಳಿತಕ್ಕೆ ಜವಾಬ್ದಾರ ಜಿಲ್ಲಾಧಿಕಾರಿ ಎಂದು ಹೇಳಿ ಅದು ನಿರ್ಣಯವಾಗಿರುವುದರಿಂದ ಅದು ಕಾನೂನಿನ ಪರಿಪಾಲನೆಯಾಗಿರಬಹುದು, ಶಾಂತಿ ಭಂಗವಾದಾಗ ಕೈಗೊಳ್ಳುವಂಥ ಕ್ರಮಗಳಾಗಿರಬಹುದು, ಚಲನಚಿತ್ರ ಮೊದಲಾದಂಥ ವಿಚಾರಗಳಲ್ಲಿ ನಿಯಂತ್ರಣ ಮಾಡತಕ್ಕಂಥದ್ದಾಗಬಹುದು, ಪ್ರವಾಹ, ಬೆಂಕಿ ಅನಾಹುತ ಅಥವಾ ಪ್ರಕೃತಿ ವಿಕೋಪಕ್ಕೆ ಸಂಬಂಧಪಟ್ಟಿರುವಂತ ವಿಚಾರಗಳಾಗಿರಬಹುದು ಅಥವಾ ದೊಡ್ಡ ಬೇರೆ ಬೇರೆ ರಾಜ್ಯಗಳಿಂದ ಬರದಂಥ ಅಥವಾ ವಿದೇಶದಿಂದ ಬಂದಿರತಕ್ಕಂಥ ಗಣ್ಯರ ಅಥವಾ ರಾಜ್ಯದಲ್ಲೇ

ಇರತಕ್ಕಂಥ ಗಣ್ಯರನ್ನು ಸ್ವಾಗತ ಮಾಡುವಂಥ ಪರಿಪಾಲಿಸುವಂಥ ಶಿಷ್ಟಾಚಾರದ ವಿಚಾರಗಳಿರಬಹುದು, ಅದೆಲ್ಲದಕ್ಕೂ ಕೂಡ ಜಿಲ್ಲಾಧಿಕಾರಿಯೇ ನೇರವಾಗಿ ಹೊಣೆ ಮತ್ತು ಜವಾಬ್ದಾರ ಎನ್ನುವಂಥ ಕಾರಣ ಇರುವುದರಿಂದ ಆತನಿಗೆ ಶಾಸನದತ್ತವಾಗಿರತಕ್ಕಂಥ ಅನೇಕ ಅಧಿಕಾರಗಳಿರುವುದರಿಂದ ಮತ್ತೆ, ಆ ಇಲಾಖೆಗೆ ಕಾಯಕಲ್ಪವನ್ನು ಕೊಡತಕ್ಕಂಥದ್ದು, ಆ ಘನತೆಯಿಂದ ನಡೆಯುವ ಕೆಲಸವನ್ನು ಮಾಡಬೇಕೆನ್ನುವುದರಲ್ಲಿ ಪ್ರಕೃತಿ ವಿಕೋಪ ನಿಧಿಗೆ ಸಂಬಂಧಪಡುವಂತೆ ಕಳೆದ 4 ವರ್ಷಗಳಿಂದ ಬರಗಾಲ ಇದ್ದದ್ದು ಸನ್ಮಾನ್ಯ ಅಧ್ಯಕ್ಷರೆ, ತಮಗೇ ಗೊತ್ತಿದೆ. ಅದು ಬೆನ್ನಿಗೆ ಬಿದ್ದ ಸಹೋದರರಂತೆ ನಮ್ಮ ಕರ್ನಾಟಕ ರಾಜ್ಯಕ್ಕೆ ಕಳೆದ 3–4 ವರ್ಷಗಳಿಂದ ಈ ರೀತಿಯಾದಂಥ ಬರಗಾಲಕ್ಕೆ ತುತ್ತಾದಂಥ ಪ್ರದೇಶದಲ್ಲಿ ಸರ್ಕಾರ ಅದನ್ನು ಸರಿಯಾದಂಥ ರೀತಿಯಲ್ಲಿ, ಕೇಂದ್ರ ಸರ್ಕಾರದ ನೆರವಿನ ಆಹಾರ ಧಾನ್ಯವನ್ನು ಪಡೆಯುವುದರ ಮೂಲಕ, ಅದಕ್ಕೆ ಮಾನದಂಡಗಳನ್ನು ರೂಪಿಸುವುದರ ಜೊತೆಗೆ ಉದ್ಯೋಗ ಸೃಷ್ಟಿಯನ್ನು ಮಾಡತಕ್ಕಂಥದ್ದು ಹಾಗೂ ಅದು ಖಾಯಂ ಆಗಿ ಕೆಲವು ಸ್ವತ್ತುಗಳನ್ನು ನಿರ್ಮಾಣ ಮಾಡತಕ್ಕಂಥದ್ದು (ಅಸೆಟ್ಸ್‌ಕ್ರಿಯೇಷನ್) ಈ ತರಹದ ದೃಷ್ಟಿಯಿಂದ ಕೆಲಸವನ್ನು ಮಾಡಿದೆ. ಕಳೆದ ವರ್ಷದಲ್ಲಿ 2004–05ರಲ್ಲಿ ಒಂದು ಸ್ವಲ್ಪ ಮಳೆ ಬಂದಿದ್ದರೂ ಕೂಡ ಬೇರೆ 3 ವರ್ಷಗಳಿಗೆ ಹೋಲಿಸಿದಾಗ ಒಳ್ಳೆಯ ಮಳೆ ಬಂದಿದೆ ಎಂದು ಅನ್ನಿಸಿದ್ದರೂ ಕೂಡ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ನಾವು ಬಯಸಿದಂಥ ರೀತಿಯಲ್ಲಿ ಇಳುವರಿ ಬರಲಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ಕುಡಿಯುವ ನೀರಿನ ಬರಗಾಲ ಎನ್ನುವಂಥದ್ದು ಹೆಚ್ಚಾಗಿ ಕಂಡು ಬಂದದ್ದರಿಂದ ಅದನ್ನು ನಿರ್ವಹಿಸಬೇಕಾಗಿರತಕ್ಕಂಥಾದ್ದು ನಮ್ಮ ಆದ್ಯ ಕರ್ತವ್ಯವಾಗಿತ್ತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರು ತಮ್ಮ ಎಲ್ಲ ಸಮಸ್ತ ಶಕ್ತಿಯನ್ನು ಕೂಡ ಇದರ ಕಡೆಗೆ ವಿನಿಯೋಗ ಮಾಡಿ ಕುಡಿಯುವ ನೀರಿನ ಸಮಸ್ಯೆಗೆ ಕೇಂದ್ರ ಸರ್ಕಾರದಿಂದಲೂ ಹೆಚ್ಚು ಹಣವನ್ನು ತರುತ್ತಾ, ಆ ಬಗ್ಗೆ ಬೇಡಿಕೆಯನ್ನು ಇಟ್ಟಾಗ ಮಾನ್ಯ ನಮ್ಮ ಸಹೋದ್ಯೋಗಿಯಾದಂಥ ಡಾ: ಮಹದೇವಪ್ಪನವರು ಎಲ್ಲ ವಿವರಗಳನ್ನು ತಮಗೆ ಒದಗಿಸಿಕೊಡುತ್ತಾರೆ. ಅವರಿಗೆ ಪೂರಕವಾದಂಥ ರೀತಿಯಲ್ಲಿ ಪ್ರಕೃತಿ ವಿಕೋಪ ನಿಧಿಯಿಂದ ನಾವು ಹಣ ಕೊಡತಕ್ಕಂಥದ್ದನ್ನು ಮಾಡಿದ್ದೇವೆ. ಕುಡಿಯುವ ನೀರಿಗಾಗಿಯೇ 73 ಕೋಟಿ ರೂಪಾಯಿಗಳನ್ನು ಕಳೆದ ಸಾಲಿನಲ್ಲಿ ಕೊಡತಕ್ಕಂಥದ್ದು ಮತ್ತು ಅವರಿಗೆ ಸಹಕಾರಿಯಾಗಿ ನಮ್ಮ ಕಡೆಗೆ ಹೇಳುತ್ತಾರೆ. 'ಹಿಟ್ಟಿನಲ್ಲಿ ಒಂದಷ್ಟು ಉಪ್ಪಿನ ಹರಳು' ಅಂತಹೇಳಿ. ಅದು ರುಚಿಯಾಗಿರಲಿಕ್ಕೆ ಬೇಕಾದಂಥ ರೀತಿಯಲ್ಲಿ ಪ್ರಕೃತಿ ವಿಕೋಪ ನಿಧಿಯಿಂದಲೇ ನಮ್ಮ ಎಲ್ಲ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಿಕ್ಕಾಗುವುದಿಲ್ಲ. ಆ ಎಲ್ಲ ಕಾರ್ಯಕ್ರಮಗಳ ಅನುಷ್ಠಾನದ ಜೊತೆ ಜೊತೆಗೂ ಕೂಡ ನಾವು ಕೆಲವು ಸಹಕಾರವನ್ನು ಕೊಡತಕ್ಕಂಥದ್ದು ಏನಿದೆ ಅದು, ಪೈಪ್‌ಲೈನ್ ಹಾಕುವಂಥದ್ದು, ಅಥವಾ ವಿದ್ಯುಚ್ಛಕ್ತಿ ಇಲಾಖೆಗೆ ದುಡ್ಡು ಕೊಡುವಂಥದ್ದು, ಅಂದರೆ ಅದರ ಎನರ್‌ಜೈಜೇಷನ್‌ಗೆ ಬೇಕಾಗಿರತಕ್ಕಂಥಾದ್ದು, ಈ ವಿದ್ಯುಚ್ಛಕ್ತಿಯನ್ನು ಕೂಡಲೇ, ಆ ಪಂಪ್‌ಸೆಟ್‌ಗಳಿಗೆ ಕುಡಿಯುವ ನೀರಿನ ಮೋಟಾರ್‌ಗಳಿಗೆ ಕಲ್ಪಿಸಿಕೊಡತಕ್ಕಂಥದ್ದರ ಬಗ್ಗೆ ಸುಮಾರು 73 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಇದರಲ್ಲಿ ನಾವು ಕಳೆದ ಬಾರಿ ಬಹಳ ದಾರುಣವಾದಂಥ ಪರಿಸ್ಥಿತಿ ಇತ್ತು ಎನ್ನುವುದಕ್ಕೆ 284 ಗ್ರಾಮಗಳಿಗೆ ಹಾಗೂ 37 ನಗರಗಳಿಗೆ ಟ್ಯಾಂಕರ್ ಮೂಲಕವಾಗಿ ನೀರನ್ನು ಒದಗಿಸಲಾಗಿತ್ತು. ಅದಕ್ಕೆ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಕೂಡ ಈ ಗ್ರಾಮಗಳಿಗೆ ಸಂಬಂಧಪಟ್ಟಂತೆ ಹಣವನ್ನು ಕೊಟ್ಟಿದ್ದಾರೆ. ನಾವೂ ಹಣವನ್ನು ಕೊಟ್ಟಿರತಕ್ಕಂಥದ್ದಾಗಿದೆ. ಅದೇ

ರೀತಿಯಾಗಿ, ಬೀಜವನ್ನು ಕಳೆದುಕೊಂಡಿರತಕ್ಕಂಥ ರೈತಾಪಿ ಜನಗಳಿಗೆ ಅದರಲ್ಲಿಯೂ ಕೂಡ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನಾವು ಅನುಕೂಲವನ್ನು ಮಾಡಿಕೊಡಬೇಕು, ಕಳೆದ 3 ವರ್ಷಗಳಿಂದ ಬೀಜ ಸಂಪೂರ್ಣವಾಗಿ ಇಲ್ಲದಂಥ ಪರಿಸ್ಥಿತಿಯಾಗಿದೆ, ಎಂದು ಹೇಳಿದ್ದರಿಂದ, 2004 ಮತ್ತು 2005ರ ಸಾಲಿನಲ್ಲಿ 67 ಕೋಟಿ ರೂಪಾಯಿಗಳನ್ನು ಶೇಕಡಾ 50ರಷ್ಟು ರಿಯಾಯತಿಯಲ್ಲಿ ಅವರಿಗೆ ಬೀಜವನ್ನು ಬಿತ್ತಲಿಕ್ಕೆ ಮತ್ತು ಅನುಕೂಲವನ್ನು ಕಲ್ಪಿಸಿಕೊಡಲಿಕ್ಕೆ ಹಣವನ್ನು ನಾವು ಒದಗಿಸಿಕೊಟ್ಟಿದ್ದೇವೆ. ಇದೇರೀತಿಯಾಗಿ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಆಹಾರಧಾನ್ಯವನ್ನು ಖರ್ಚು ಮಾಡುವುದಕ್ಕೆ ನಮಗೆ ಕೇಂದ್ರ ಸರ್ಕಾರದವರು ಕೂಡ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು. 2003–04ರ ಸಾಲಿನಲ್ಲಿ ಉಳಿದಿರತಕ್ಕಂಥ ಆಹಾರಧಾನ್ಯವನ್ನು ಭರಿಸಿಕೊಳ್ಳುವುದಕ್ಕೆ ಒಪ್ಪಿಗೆ ಕೊಟ್ಟಂಥ ಹಿನ್ನೆಲೆಯಲ್ಲಿ, ನಾವು ಹೆಚ್ಚು ಉದ್ಯೋಗ ಸೃಜನೆ ಕೆಲಸ ಕಾರ್ಯಗಳನ್ನು ಕೈಗೊಳ್ಳಲಿಕ್ಕೆ ಸಾಧ್ಯವಾಯಿತು. ತಮಗೆಲ್ಲ ಗೊತ್ತಿದ್ದಂತೆ ಸುನಾಮಿ ದುರಂಥ ಆಗಿರುವಂಥದ್ದು, ಪ್ರಥಮ ಬಾರಿಗೆ ಭಾರತ ದೇಶದಲ್ಲಿ ಅದರಲ್ಲಿ ತಮಿಳುನಾಡಿನಲ್ಲಿ ವ್ಯಾಪಕವಾಗಿರತಕ್ಕಂಥ ಈ ಸುನಾಮಿಯ ಅನಾಹುತವಾಗಿದ್ದರಿಂದ, ನಮ್ಮ ಭಾಗದಲ್ಲಿ ಕೇವಲ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಕಡೆಗೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಕೆಲವು ಮೀನುಗಾರರ ದೋಣಿಗೆ ತೊಂದರೆಯಾಗಿರುವುದನ್ನು ಕಂಡ ಮೇಲೆ, ನಮ್ಮ ಇಡೀ ಭಾರತ ದೇಶದ ಜನತೆ ಈ ಸುನಾಮಿ ಸಂತ್ರಸ್ಥರಿಗೆ, ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಬೇರೆ ಕಡೆ ಈ ರೀತಿಯ ನಷ್ಟಕ್ಕೆ ಒಳಗಾದಂಥ ರಾಜ್ಯಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಹೇಳಿ ಅದರಲ್ಲಿ ಕನ್ನಡಿಗರು ಹೆಚ್ಚು ಸಹಾಯವನ್ನು ನಮಗೆ ಕೊಟ್ಟಂಥ ಕಾರಣಕ್ಕಾಗಿಯೇ ನಮ್ಮ ಇಲಾಖಾವತಿಯಿಂದ ಸುಮಾರು 20 ಕೋಟಿ ರೂಪಾಯಿಗಳನ್ನು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಕೊಟ್ಟಿದ್ದೇವೆ. ತಮಿಳುನಾಡಿಗೆ ಎರಡು ಕೋಟಿ ರೂಪಾಯಿಗಳನ್ನು, ಆಂಧ್ರ ಪ್ರದೇಶಕ್ಕೆ ಒಂದು ಕೋಟಿ ರೂಪಾಯಿ, ಅಂಡಮಾನ್ ಮತ್ತು ನಿಕೋಬಾರ್‌ಗೆ ಒಂದು ಕೋಟಿ, ಕೇರಳಕ್ಕೆ 50 ಲಕ್ಷ, ಲಕ್ಷದ್ವೀಪಕ್ಕೆ 50 ಲಕ್ಷ, ಪಾಂಡಿಚೇರಿಗೆ 50 ಲಕ್ಷ ಒಟ್ಟಿನಲ್ಲಿ 25.50 ಲಕ್ಷ ರೂಪಾಯಿಗಳನ್ನು ನಾವು ಸುನಾಮಿ ಸಂತ್ರಸ್ಥರಿಗೆ ಸಂಬಂಧಪಟ್ಟಂತೆ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಹಾಗೂ ಪಕ್ಕದಲ್ಲಿರುವ ರಾಜ್ಯಗಳಿಗೆ ಕೊಟ್ಟಿದ್ದೇವೆ. ಅದರ ಜೊತೆಗೆ ತಮಿಳುನಾಡಿಗೆ 99.3 ಮೆಟ್ರಿಕ್ ಟನ್‌ನಷ್ಟು ಆಹಾರದ ಪದಾರ್ಥಗಳನ್ನು, ಅಂಡಮಾನ್ ಮತ್ತು ನಿಕೋಬಾರ್‌ಗೆ 322.578 ಮೆಟ್ರಿಕ್ ಟನ್‌ನಷ್ಟು ಆಹಾರದ ಪದಾರ್ಥಗಳನ್ನು, ಪಾಂಡೀಚೆರಿಗೆ 47 ಮೆಟ್ರಿಕ್ ಟನ್‌ನಷ್ಟು, ಶ್ರೀಲಂಕಾಕ್ಕೆ 22 ಮೆಟ್ರಿಕ್ ಟನ್‌ನಷ್ಟು, ಒಟ್ಟಿನಲ್ಲಿ 490.58 ಮೆಟ್ರಿಕ್ ಟನ್‌ನಷ್ಟು ಪದಾರ್ಥಗಳನ್ನು ದೈನಂದಿನ ಉಪಯೋಗಕ್ಕೆ ಬರುವಂಥದ್ದು, ಅದು ವೇಸ್ಟ್ ಆಗಿರಬಹುದು, ಕುಡಿಯುವ ನೀರಿನ ಬಾಟಲಿಗಳು ಆಗಿರಬಹುದು, ಟವಲ್‌ಗಳು ಆಗಿರಬಹುದು, ಮತ್ತು ಅಲ್ಲಿರತಕ್ಕಂಥ ಸೊಳ್ಳೆಗಳ ಕಾಟದಿಂದ ಅವರು ಮುಕ್ತರಾಗಬೇಕೆಂದು ಓಡಮಸ್ ಮೊದಲಾದ ಕೆಲವು ಔಷಧಗಳನ್ನು ಕೂಡಾ ಕಳುಹಿಸುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಇದಕ್ಕಾಗಿ ಕರ್ನಾಟಕದ ಜನತೆ ಕೊಟ್ಟಿರತಕ್ಕಂಥ ಈ ಒಂದು ಸಹಾಯಕ್ಕಾಗಿ ಪ್ರಧಾನ ಮಂತ್ರಿಗಳೇ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಕನ್ನಡ ನಾಡಿನ ಜನತೆ ಇಡೀ ಭಾರತ ದೇಶದ ಜನತೆ ಒಂದು ಎನ್ನುವಂಥ ಕಲ್ಪನೆಯ ಮೂಲಕ ಮಾಡಿದಂಥ ಈ ಸಹಾಯವನ್ನು ಈ ಸರ್ಕಾರ ಅತ್ಯಂತ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತದೆ, ಮತ್ತು ನಮ್ಮ ಕನ್ನಡಿಗರು ಎಷ್ಟು ಉದಾರಿಗಳು ಎನ್ನುವುದು ಇದರ ಮೂಲಕ ವ್ಯಕ್ತವಾಗುತ್ತದೆ. ಅದನ್ನು ಅತ್ಯಂತ ಜಾಗೃತರಾಗಿ ಮತ್ತು ದಕ್ಷತೆಯಿಂದ ತ್ವರಿತಗತಿಯಿಂದ ನಿರ್ವಹಿಸಿರತಕ್ಕಂಥ ನಮ್ಮ

ಅಧಿಕಾರಿಗಳನ್ನೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಇಲಾಖೆಗೆ ಸಂಬಂಧಪಡುವಂಥ ಅನೇಕ ವಿಷಯಗಳಲ್ಲಿ ಮುಖ್ಯವಾಗಿರುವಂಥದ್ದು ನಾವು ಈ ವರ್ಷ ಮಾಡಿರುವಂಥ ಕೆಲಸ ಕಾರ್ಯಗಳು. ಈ ಕೆಲಸ ಕಾರ್ಯಗಳಿಗೆ ಸಂಬಂಧಪಟ್ಟಂತೆ ಬಹಳ ಮುಖ್ಯವಾದಂಥ ಒಂದು ನಿರ್ಧಾರ ನಾವು ತೆಗೆದುಕೊಂಡಿದ್ದು, 1.5.2005ರಿಂದ ಸರ್ವೆ ಇಲಾಖೆಯನ್ನು ಕಂದಾಯ ಇಲಾಖೆಗೆ ನಾವು ಸೇರ್ಪಡೆ ಮಾಡಿದೆವು. ಇದೊಂದು ಚರಿತ್ರಾರ್ಹವಾಗಿರತಕ್ಕಂಥ ವಿಷಯ. ತೋಡರಮಲ್ಲನ ಕಾಲದಲ್ಲಿ ಸರ್ವೆ ಆಗಿರುವಂಥದ್ದನ್ನು ಕಂಡಿದ್ದೇವೆ, ಈಸ್ಟ್ ಇಂಡಿಯಾ ಕಂಪನಿಯಲ್ಲಿ ಸರ್ವೇ ಆಗಿರುವುದು ಕಂಡಿದ್ದೇವೆ, ವಿಜಯನಗರದ ಅರಸರ ಕಾಲದಲ್ಲಿ ಮತ್ತು ಅದರಲ್ಲಿ ಕೆಳದಿ ಅರಸರು ಕೂಡ ಶಿವಮೊಗ್ಗದ ಆ ಭಾಗದಲ್ಲಿ ಮಾಡಿರತಕ್ಕಂಥ ಕೆಲಸಗಳನ್ನು ನಾವು ಕಂಡಿದ್ದೇವೆ. ಇಂಥ ಸಂದರ್ಭದಲ್ಲಿ 1–5–2005ರಿಂದ ಸರ್ವೇ ಇಲಾಖೆಯನ್ನು ಕಂದಾಯ ಇಲಾಖೆಗೆ ಸೇರ್ಪಡೆ ಮಾಡಿಕೊಳ್ಳುವುದರ ಮೂಲಕವಾಗಿ ಅವರು ನೇರವಾಗಿ ಜವಾಬ್ದಾರರಾಗಿರಬೇಕು ಮತ್ತು ಪೋಡಿ ಪ್ರಕರಣಗಳು ಸುಮಾರು 22 ಲಕ್ಷದಷ್ಟು ಹಾಗೆಯೇ ಇದ್ದಂಥ ಕಾರಣಕ್ಕಾಗಿ ಅವುಗಳನ್ನು ಬಗೆಹರಿಸಬೇಕು ಎನ್ನುವ ಒಂದು ತವಕದಿಂದ ಈ ಹೊಸ ಕಾಯಕಲ್ಪವನ್ನು ಈ ಇಲಾಖೆಗೆ ಕೊಡುತ್ತಾ, ಇಲ್ಲಿ ಸುಮಾರು 2,64,600 ಮೂಲ ಸರ್ವೆ ರೆಕಾರ್ಡ್‌ಗಳು ಇವುಗಳನ್ನು ನಾವು ಈಗಾಗಲೇ ಮೈಕ್ರೋ ಫಿಲಂ ಮಾಡಿದ್ದೇವೆ, ತಮಗೆ ಗೊತ್ತಿದ್ದಂತೆ ನಮ್ಮಲ್ಲಿ 100, 150, ವರ್ಷಗಳ ಹಳೆಯ ರೆಕಾರ್ಡ್‌ಗಳಿವೆ. ಅವು ಹಾಳಾಗಿ ಹೋಗುತ್ತವೆ, ಕೈಯಲ್ಲಿ ಹಿಡಿದಾಕ್ಷಣ ಅವು ಪುಡಿ ಪುಡಿಯಾಗಿ ಹೋಗುವಂಥ ಪರಿಸ್ಥಿತಿಯಲ್ಲಿ ಇವೆ. ಇಂಥದ್ದನ್ನು ನಾವು ಮೈಕ್ರೋ ಫಿಲಂ ಮಾಡುವುದರಿಂದ ಅವುಗಳನ್ನು ಕಾಯ್ದಿರಿಸಿಕೊಳ್ಳಬಹುದು ಎನ್ನುವ ಕೆಲಸವನ್ನು ನಾವು ಮಾಡಿದ್ದೇವೆ. ಇದೇರೀತಿಯಾಗಿ ಸುಮಾರು ನಗರ ಪ್ರದೇಶಗಳಲ್ಲಿ ಸಿಟಿ ಸರ್ವೆ ಆಗಬೇಕಾದುದು ಬಹಳ ಮುಖ್ಯ. ಮುಂಬೈ ಪ್ರಾಂತ್ಯಕ್ಕೆ ಸೇರಿದಂಥ ಜಿಲ್ಲೆಗಳಲ್ಲಿ ಇದು ವ್ಯವಸ್ಥಿತವಾಗಿರತಕ್ಕಂಥ ನಗರ ಪ್ರದೇಶಗಳು ಸರ್ವೇ ಆಗಿರತಕ್ಕಂಥ ದಾಖಲೆಗಳಿವೆ. ಅದು ಆ ನಾಲ್ಕು ಜಿಲ್ಲೆಗಳಲ್ಲಿ ಇದೆ. ಆದರೆ ನಮ್ಮ ಭಾಗದಲ್ಲಿ, ಮದ್ರಾಸ್ ಪ್ರಾಂತ್ಯಕ್ಕೆ ಸೇರಿದಂಥ, ಹೈದರಾಬಾದ್ ನಿಜಾಮಶಾಹಿಯಿಂದ ಬಂದಿರತಕ್ಕಂಥ ಪ್ರಾಂತ್ಯಗಳ ಜಿಲ್ಲೆಗಳಲ್ಲಿ ಮತ್ತು ಕರ್ನಾಟಕದ ದಕ್ಷಿಣ ಭಾಗದಲ್ಲಿ ಇಷ್ಟು ವ್ಯವಸ್ಥಿತವಾದಂಥ ರೀತಿಯಲ್ಲಿ ಸಿಟಿ ಸರ್ವೆ ಆಗಿರತಕ್ಕಂಥದು ಬಹಳ ಕಡಿಮೆ. ಅದಕ್ಕಾಗಿ ಸಿಟಿ ಸರ್ವೇ ಮಾಡಬೇಕಾಗಿದೆ ಎಂದು ಈಗ 48 ಪಟ್ಟಣಗಳಲ್ಲಿ ಈ ವಿಚಾರಗಳನ್ನು ನಡೆಸಿ ಸುಮಾರು 33,702 ಖಾತೆ ಬದಲಾವಣೆಗಳನ್ನು ನಾವು ಮಾಡಿ ಕೊಟ್ಟಿದ್ದೇವೆ. ವ್ಯಾಪಕವಾದ ರೀತಿಯಲ್ಲಿ ಈ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಇದರ ಜೊತೆಗೆ ಅಂತರ್‌ರಾಜ್ಯದ ಗಡಿಗಳು ಏನು ಇವೆ, ಗಡಿಗಳನ್ನು ಗುರುತಿಸತಕ್ಕಂಥದ್ದರ ಬಗ್ಗೆ ಈಗಾಗಲೇ ನಿರ್ದಿಷ್ಟವಾದಂಥ ಮಾಪನಗಳು ಇವೆ, ನಿರ್ದಿಷ್ಟವಾದಂಥ ನಿಯಮಾವಳಿಗಳು ಇವೆ. ಇದಾದರೂ ಕೂಡ ಕೆಲವು ಕಡೆ ಆಗಿಲ್ಲ ಎನ್ನುವ ಕಾರಣಕ್ಕಾಗಿ ತಮಿಳುನಾಡು ಮತ್ತು ನಮ್ಮ ನಡುವೆ ಇರತಕ್ಕಂಥ ಅಂತರ್‌ರಾಜ್ಯದ ಸರ್ವೆಯನ್ನು ಮಾಡಿ 13,61,390 ಎಕರೆ ಜಮೀನಿನಷ್ಟು ತಮಿಳುನಾಡು–ಕರ್ನಾಟಕದ ಗಡಿಗೆ ಸಂಬಂಧ ಇರತಕ್ಕಂಥ ಸರ್ವೆಯ ವಿಚಾರದಲ್ಲಿ ಪರಿವೀಕ್ಷಣಾ ಕಾರ್ಯವನ್ನು ನಾವು ಈಗ ನಡೆಸುತ್ತಿದ್ದೇವೆ. ಅಲ್ಲಿನ ತಮಿಳುನಾಡಿನ ಅಧಿಕಾರಿಗಳು ನಮ್ಮ ಅಧಿಕಾರಿಗಳು ಕುಳಿತು ಮಾಡಿರತಕ್ಕಂಥ ಈ ಸರ್ವೆಯ ವಿಚಾರದಲ್ಲಿ ಪರಿವೀಕ್ಷಣೆಯನ್ನು ಪರಾಮರ್ಶೆ ಮಾಡತಕ್ಕಂಥ ಕೆಲಸವನ್ನು ಕೂಡ ನಾವು ಪ್ರಾರಂಭ ಮಾಡಿದ್ದೇವೆ. ಅದೇ ರೀತಿಯಾಗಿ 72 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಮಳವಳ್ಳಿ ತಾಲ್ಲೂಕಿನಲ್ಲಿ

ಪ್ರಾಯೋಗಿಕವಾಗಿ ಎಲ್ಲಾ ದಾಖಲೆಗಳನ್ನು ಗಣಕೀಕರಣಕ್ಕೆ ಒಳಪಡಿಸಿದ್ದೇವೆ. ಈಗ ನೂರಕ್ಕೆ ತೊಂಬತ್ತರಷ್ಟು ಅಂಥ ಗಣಕೀಕರಣದ ಕೆಲಸ ಮುಕ್ತಾಯವಾಗಿದೆ. ಈ ಪ್ರಯೋಗದ ಹಿನ್ನೆಲೆಯಲ್ಲಿ ಆದಂಥ ಅನುಭವ ನಿಜವಾಗಿಯೂ ಕೂಡ ಒಳ್ಳೆಯ ಅನುಭವವಾಗಿದೆ. ಇದು ಒಂದು ಅತ್ಯುತ್ತಮವಾಗಿರತಕ್ಕಂಥದ್ದು. ನಾವು ಟೋಟಲ್ ಸರ್ವೆ ಮಾಡತಕ್ಕಂಥದ್ದರ ಕೆಲಸದ ಮಿಷನರಿಗಳನ್ನು ತಂದಿರತಕ್ಕಂಥದ್ದು ಕೂಡ ಆಗಿದೆ. ಬಹಳ ನಿಖರವಾಗಿ ಕಂಪ್ಯೂಟರ್ ಮೂಲಕವಾಗಿ ಪ್ರಿಂಟ್ ಔಟ್ ಬರುವಂಥ ರೀತಿಯಲ್ಲಿ ಬೆಟ್ಟಗುಡ್ಡಗಳ ಸರ್ವೆ ಕೆಲಸಗಳನ್ನು ನಡೆಸುತ್ತಿದ್ದೇವೆ. ಇದನ್ನು ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಅನ್ವಯಿಸದರೆ ಸರ್ವೆ ವಿಚಾರದಲ್ಲಿ ನಿಖರವಾದ ಮಾಹಿತಿಗಳನ್ನು ಪಡೆಯಲಿಕ್ಕೆ ಸಾಧ್ಯತೆಯಾಗುತ್ತದೆಂದು ಹೇಳಿ ಅದಕ್ಕಾಗಿ ಯೋಜನ ಆಯೋಗಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಹಣಕಾಸಿನ ನೆರವನ್ನು ಕೊಡಬೇಕೆನ್ನುವಂಥ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಸಕಾರಾತ್ಮಕವಾದಂಥ ಉತ್ತರ ಯೋಜನಾ ಆಯೋಗದ ಉಪಾಧ್ಯಕ್ಷರಿಂದ ಬಂದಿರುವುದರಿಂದ ಇನ್ನೂ ಸ್ವಲ್ಪ ದಿವಸಗಳಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿ ಮಾಡಿದಂಥ ಪ್ರಾಯೋಗಿಕವಾದಂಥ ಗಣಕೀಕರಣದ ಈ ಕೆಲಸವನ್ನು ಬೇರೆ ಕಡೆಗೆ ಕೂಡ ಪ್ರಾರಂಭ ಮಾಡುತ್ತೇವೆ. ಇದೇ ಸಂದರ್ಭದಲ್ಲಿ 2286 ಗುತ್ತಿಗೆ ಆಧಾರದ ಅಂದರೆ ಗುತ್ತಿಗೆ ಆಧಾರದ ಅನ್ನುವುದಕ್ಕಿಂತ ಲೈಸನ್ಸ್ ಮೂಲಕವಾಗಿ ಪರವಾನಗಿ ಪಡೆದಿರತಕ್ಕಂಥ ಸರ್ವೇಯರ್‌ಗಳನ್ನು ಕಳೆದ ಸರ್ಕಾರದಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಅಂದರೆ ಸುಮಾರು 22 ಲಕ್ಷದಷ್ಟು ಪೋಡಿ ಪ್ರಕರಣಗಳು ಇರುವಂಥ ಕಾರಣಕ್ಕಾಗಿಯೇ ಇವುಗಳ ವಿಲೇವಾರಿ ಆಗಬೇಕಾದ ಜರೂರತ್ತು ಇದೆ. ನಮ್ಮ ಇಲಾಖೆಯಲ್ಲಿರುವ ಸರ್ವೆಯರ್‌ಗಳು ಬೇರೆ ಬೇರೆ ಇಲಾಖೆಯಲ್ಲಿ ನಿಯೋಜನೆ ಮೇಲೆ ಹೋಗಿದ್ದಾರೆ, ಅದು ರಾಷ್ಟ್ರೀಯ ಹೆದ್ದಾರಿಯ ಕೆಲಸವಾಗಿರಬಹುದು, ಸಣ್ಣ ನೀರಾವರಿ ಅಥವಾ ದೊಡ್ಡ ನೀರಾವರಿ ಇಲಾಖೆಗೆ ಸಂಬಂಧಪಟ್ಟದ್ದಾಗಿರಬಹುದು, ಅಥವಾ ಕೆಐಎಡಿಬಿ ಗೆ ಸಂಬಂಧಪಟ್ಟಿದ್ದಾಗಿರಬಹುದು, ಈ ರೀತಿಯಾಗಿ ನಿಯೋಜನೆ ಮೇಲೆ ಹೋಗಿರತಕ್ಕಂತ ಸರ್ವೆಯರ್ ಎಲ್ಲರನ್ನೂ ಕೂಡ ನಾವು ನಮ್ಮ ಮಾತೃ ಇಲಾಖೆಗೆ ವಾಪಸ್ ತೆಗೆದುಕೊಂಡಿದ್ದೇವೆ. ಈ 2286 ಜನರು ಗುತ್ತಿಗೆ ಆಧಾರದ ಮೇಲೆ ಅಥವಾ ಪರವಾನಗಿ ಆಧಾರದ ಮೇಲೆ ಏನು ಕೆಲಸ ಮಾಡುತ್ತಿದ್ದರು, ಇವರ ವಿರುದ್ಧವಾಗಿ ಕೆಲವರು ಹೈಕೋರ್ಟಿಗೆ ಹೋಗಿ ದಾವೆಯನ್ನು ಹೂಡಿದ್ದರಿಂದ ಅವರೊಂದು ತಡೆಯಾಜ್ಞೆಯನ್ನು ಕೊಟ್ಟಿದ್ದರು. ಈ ಸರ್ಕಾರ ಆ ತಡೆಯಾಜ್ಞೆಯನ್ನು ತೆರವುಗೊಳಿಸಿ ಅವರಿಗೆ ಈಗಾಗಲೇ ಕೆಲಸವನ್ನು ಕೊಟ್ಟಿದ್ದೇವೆ. ಇದರ ಮೂಲಕವಾಗಿ ಅವರಿಗೆ ನಿರ್ದಿಷ್ಟವಾದ ಸಂಬಳವನ್ನು ಕೊಡತಕ್ಕಂಥದ್ದಲ್ಲ. ಯಾವುದೇ ದೃಷ್ಟಿಯಿಂದ ಅವರು ಸರ್ಕಾರಿ ನೌಕರರು ಕೂಡ ಅಲ್ಲ. ಅವರು ಕೇವಲ ಪರವಾನಗಿಯನ್ನು ಪಡೆದಿರತಕ್ಕಂಥವರು. ಈ ವಿಚಾರದಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಈ ದಿವಸವೂ ಕೂಡ ಈ ಸರ್ವೆ ಮಾಡುತ್ತಿದ್ದಂಥ ಅನೇಕ ಸರ್ವೆಯರ್‌ಗಳನ್ನು ಕರೆದುಕೊಂಡು ಬಂದು ಅವರ ಕಷ್ಟ ಸುಖಗಳನ್ನು ನಮಗೆ ಮನವಿ ಕೊಡುವುದರ ಮೂಲಕವಾಗಿ ತಿಳಿಸಿದ್ದಾರೆ. ಈಗ ಅಲ್ಲಿ ಕೆಲವು ಸರ್ವೆ ಮಾಡಿದಂಥ ಜನ ವಿವಾದಕ್ಕೆ ಸಂಬಂಧಪಟ್ಟಿದ್ದು ಬಂದಾಗ ಅವರಿಗೆ 300 ರೂಪಾಯಿ ಫೀ ಯನ್ನು ಕೊಡುತ್ತೇವೆ. ಅದಕ್ಕೆ ಅವರು ನಮಗೆ ಬಹಳ ಕಡಿಮೆ ಸಂಖ್ಯೆಯಲ್ಲಿ ವಿವಾದಗಳು ಬರುತ್ತವೆ, ಸಾವಿರ, ಎರಡೂಸಾವಿರ ರೂಪಾಯಿಗಳನ್ನು ದುಡಿಯಲಿಕ್ಕೆ ಸಾಧ್ಯವಾಗುತ್ತಿಲ್ಲ, ಆದುದರಿಂದ ನಮಗೆ ಖಾಯಂ ಮಾಡಬೇಕು ಎನ್ನುವಂಥ ಮಾತನ್ನು ಅವರು ಹೇಳಿದರು, ಆದರೆ ಖಾಯಂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ನೀವು ಪರವಾನಗಿಯ ಲೈಸೆನ್ಸ್‌ದಾರರು ಎನ್ನುವ ಮಾತನ್ನು ಕೂಡ ಅವರಿಗೆ ತಿಳಿಸಿದ್ದೇನೆ. ಅವರ ಕಷ್ಟವನ್ನು ಪರಿಹಾರ ಮಾಡಲಿಕ್ಕೆ ಇನ್ನೊಂದು ವಾರದೊಳಗೆ ನಾನೊಂದು ಸಭೆಯನ್ನು ಮಾಡಿ ಅವರನ್ನೂ ಕೂಡ ಕರೆಸಿ ಅವರಿಗೆ ಕನಿಷ್ಠ 2000 ರೂಪಾಯಿ ಸಿಗುವಂಥ ರೀತಿಯಲ್ಲಾದರೂ ಕೂಡ ಆ ಪರವಾನಿಗೆದಾರರನ್ನು ಮರು ನೇಮಕಾತಿ ಅಂದರೆ ಮರು ವರ್ಗಾವಣೆಯನ್ನು ಮಾಡುವುದರ ಮೂಲಕವಾಗಿ ಕ್ರಮ ಕೈಗೊಳ್ಳತಕ್ಕ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ರಾಜ್ಯ ಸರ್ಕಾರ ಪ್ರವಾಹಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರಕ್ಕೆ ಕೊಟ್ಟಂಥ ನಮ್ಮ ಬೇಡಿಕೆ ಏನಿತ್ತು 1598 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೆವು. ಆದರೆ ಕೇಂದ್ರ ಸರ್ಕಾರದಿಂದ ಬಂದಂಥ ಅಧ್ಯಯನ ತಂಡದವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಅವರು ಭೇಟಿಯನ್ನು ಕೊಡಲಿಲ್ಲ ಮತ್ತು ಅದರ ಬಗ್ಗೆ ಶಿಫಾರಸ್ಸು ಕೂಡ ಮಾಡಲಿಲ್ಲ, ಕೇಂದ್ರ ಸರ್ಕಾರದಿಂದ ನಮಗೆ ಹಣ ಬರಲಿಲ್ಲ. ಆದರೆ 1138 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರವೇ ತನ್ನ ಸಂಪನ್ಮೂಲದಿಂದ ಬಿಡುಗಡೆ ಮಾಡುವುದರ ಮೂಲಕವಾಗಿ ನಮಗೆ ಸಹಾಯವನ್ನು ಮಾಡಿತು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಸಂಪನ್ಮೂಲಗಳ ಇತಿಮಿತಿಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳ ಜಿಲ್ಲೆಗಳಿಗೆ ದುರಸ್ತಿ ಕೆಲಸಕ್ಕಾಗಿ ಅನುಕೂಲವನ್ನು ನಾವು ಕಲ್ಪಿಸಿಕೊಟ್ಟಿದ್ದೇವೆ. ಅದಕ್ಕಾಗಿ ನಾನು ಹಣಕಾಸಿನ ಇಲಾಖೆಯನ್ನು ಅಭಿನಂದಿಸುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೇ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೋಕಿನಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿ ಆಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಹಾಗೆಯೇ, ಈ ವಿಚಾರವನ್ನು ಮಾನ್ಯ ವೈಜನಾಥ್ ಪಾಟೀಲ್‌ರವರೂ ಕೂಡ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಹಸಿರುಗುಂಡಿ ಮತ್ತು ದೂರಂಪಲ್ಲಿ ಎನ್ನತಕ್ಕಂಥ ಗ್ರಾಮಗಳಲ್ಲಿ ಪದೇ ಪದೇ ಭೂಕಂಪದ ಕಂಪನಗಳು ಆಗುತ್ತವೆ. ಆದ್ದರಿಂದ, ಸನ್ಮಾನ್ಯ ಅಧ್ಯಕ್ಷರೆ, ಒಟ್ಟಿನಲ್ಲಿ ನಮಗೆ ವಹಿಸಿಕೊಟ್ಟಿರತಕ್ಕಂಥ ಈ ಎಲ್ಲಾ ಕೆಲಸ ಕಾರ್ಯಗಳನ್ನು ನಾವು ಅತ್ಯಂತ ಪ್ರಾಮಾಣಿಕವಾದಂಥ ರೀತಿಯಲ್ಲಿ ಮತ್ತು ದಕ್ಷತೆಯಿಂದ ನಿರ್ವಹಿಸಿದ್ದೇನೆ. ಹಾಗೆಯೇ ಧಾರ್ಮಿಕದತ್ತಿ ಇಲಾಖೆಗೆ ಸಂಬಂಧಪಡುವಂಥ ರೀತಿಯಲ್ಲಿಯೂ ಕೂಡ, ಅಂದರೆ, ಪ್ರವಾಸಸೌಧಕ್ಕೋಸ್ಕರ ತಿರುಪತಿಯಲ್ಲಿ 3.60 ಕೋಟಿ ರೂಪಾಯಿಗಳನ್ನು ಕೊಟ್ಟು ಈಗಾಗಲೇ ಅಲ್ಲಿನ ಕಟ್ಟಡ ಕೆಲಸ ಮುಕ್ತಾಯ ಹಂತಕ್ಕೆ ಬಂದಿದೆ. ಮತ್ತೆ ಪಂಡರಾಪುರಕ್ಕೆ ಕನ್ನಡಿಗರು ಅವನು ಕಾನಡಿ ವಿಠ್ಠಲ ಎಂಬ ಕಾರಣಕ್ಕಾಗಿ ಹೆಚ್ಚು ಹೋಗುತ್ತಾರೆ ಎಂಬ ಕಾರಣಕ್ಕಾಗಿ ಈ ಬಾರಿ 80 ಲಕ್ಷ ರೂಪಾಯಿ ವೆಚ್ಚದಲ್ಲಿ ಕನ್ನಡಿಗರಿಗೆ ಛತ್ರ ಕಟ್ಟಿಸುವುದಕ್ಕಾಗಿ ಕ್ರಮ ತೆಗೆದುಕೊಂಡಿದ್ದೇವೆ. ಹಾಗೆಯೇ ಮಂತ್ರಾಲಯದಲ್ಲಿರುವ ನಮ್ಮ ಛತ್ರದ ಕೋಣೆಗಳ ದುರಸ್ತಿ ಮತ್ತು ನವೀಕರಣ ಕೆಲಸಕ್ಕಾಗಿ 16 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತೆ ಹಂಪೆಯಲ್ಲಿ ಒಂದು ಅತಿಥಿ ಗೃಹವನ್ನು ಕಟ್ಟಲಿಕ್ಕೆ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ದೇವಸ್ಥಾನಗಳ ಎಲ್ಲಾ ವಿವರಗಳು ಮತ್ತು ಪಂಚಾಂಗದ ಪ್ರಕಾರ ಬರತಕ್ಕಂಥ ಹಬ್ಬಹರಿದಿನಗಳು, ಉತ್ಸವಗಳು ಮತ್ತು ವಿಶೇಷ ಸಂದರ್ಭ ಕುರಿತಾಗಿ ವೆಬ್‌ಸೈಟ್ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ದೇವಾಲಯಗಳ ಬಗ್ಗೆ ಒಂದು ಮಾಹಿತಿ ಪುಸ್ತಕವನ್ನು ಅತ್ಯಂತ ಸುಂದರವಾಗಿ ಮುದ್ರಿಸಲಾಗಿದೆ. ಇದನ್ನು ಇಷ್ಟರಲ್ಲಿಯೇ ಮಾನ್ಯ ರಾಜ್ಯಪಾಲರು ಬಿಡುಗಡೆ ಮಾಡತಕ್ಕಂಥವರು ಇದ್ದಾರೆ. ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸುಮಾರು 50 ದೇವಸ್ಥಾನಗಳಲ್ಲಿ ಸರ್ವೆ ಮಾಡತಕ್ಕಂಥ

ಕೆಲಸ ಮಾಡಿ ಅಲ್ಲಿಯ ಭೂಮಿಯನ್ನು ಕಬಳಿಸಿರತಕ್ಕಂಥವರು ಯಾರ್‍ಯಾರು ಎನ್ನತಕ್ಕಂಥದನ್ನು ಪತ್ತೆ ಹಚ್ಚತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕಕ್ಕೆ ಸಂಬಂಧಪಟ್ಟಂತೆ ಸರ್ಕಾರ 25 ಕೋಟಿ ರೂಪಾಯಿ ಕೊಟ್ಟಿದೆ, 75 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಲೋಕೋಪಯೋಗಿ ಸಚಿವರು ಇದರ ಬಗ್ಗೆ ಐದಾರು ಬಾರಿ ಭೇಟಿ ಕೊಟ್ಟು ಈ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಅದೇ ರೀತಿಯಾಗಿ ನಂಜನಗೂಡಿನಲ್ಲಿ ಕೂಡ ಸುಮಾರು 10 ಕೋಟಿ ರೂಪಾಯಿ ಕೆಲಸ ಈಗಾಗಲೇ ಮುಕ್ತಾಯದ ಹಂತದಲ್ಲಿ ಬಂದಿರತಕ್ಕಂಥಾದ್ದು ಇದೆ. ಒಟ್ಟಿನಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂಥ ಎಲ್ಲಾ ಕೆಲಸ ಕಾರ್ಯಗಳನ್ನು ಬಹಳ ತೃಪ್ತಿಕರವಾಗಿ ನಾವು ಮಾಡಿದ್ದೇವೆ ಎಂಬುದಕ್ಕಿಂತಲೂ ಹೆಚ್ಚಾಗಿ, ಇದಕ್ಕೆ ಒಂದು ಹೊಸ ಆಯಾಮವನ್ನು ಕೊಡಬೇಕೆಂಬ ಪ್ರಯತ್ನವನ್ನು ನಾವು ಮಾಡಿದ್ದೇವೆ. (ಇ)–ಗೌರ್ನೆನ್ಸ್ ವಿಚಾರದ ಬಗ್ಗೆ ಹೇಳುವುದಾದರೆ 2 ಕೋಟಿ ಪಹಣಿ ಪತ್ರಿಕೆಗಳನ್ನು 70 ಲಕ್ಷ ಕುಟುಂಬಗಳಿಗೆ ನಾವು ಪ್ರತಿ ವರ್ಷ ಕೊಡತಕ್ಕಂಥಾದ್ದು ಏನಿದೆ, ಅದಕ್ಕೆ 15 ರೂಪಾಯಿಗಳಿಂದ 10 ರೂಪಾಯಿಗೆ ಇಳಿಸತಕ್ಕಂಥದನ್ನು ಪ್ರಾಯಶಃ ಸಚಿವಸಂಪುಟ ಸಭೆಯಲ್ಲಿ ಒಪ್ಪಿಗೆಯನ್ನು ಪಡೆದ ನಂತರ ಅದನ್ನು ನಾನು ಇಷ್ಟರಲ್ಲಿಯೇ ಪ್ರಕಟಣೆ ಮಾಡುತ್ತೇನೆ. ಒಟ್ಟಿನಲ್ಲಿ (ಇ)–ಗೌರ್ನೆನ್ಸ್‌ಗೆ ಸಂಬಂಧಪಟ್ಟಂತೆ ನಾವು 5000 ಕಿಯಾಸ್ಕ್‌ಗಳನ್ನು ಮಾಡುವುದರ ಮೂಲಕವಾಗಿ ಗ್ರಾಮೀಣ ಮಟ್ಟದಲ್ಲಿ ಪಹಣಿ ಪತ್ರಗಳನ್ನು ಕೊಡುವುದಕ್ಕಾಗಿ ಈ ಒಂದು ಕೆಲಸವನ್ನು ಮಾಡಿದ್ದೇವೆ. ದಯವಿಟ್ಟು, ಸದನದಲ್ಲಿರತಕ್ಕಂಥ ಎಲ್ಲಾ ನಮ್ಮ ಶಾಸಕ ಮಿತ್ರರನ್ನು ನಾನು ಪ್ರಾರ್ಥನೆ ಮಾಡುವುದೇನೆಂದರೆ, ನಮ್ಮ ವಿತ್ತೀಯ ಬೇಡಿಕೆಗಳನ್ನು ಸಭೆಯ ಮುಂದೆ ಏನು ಮಂಡಿಸಿದ್ದೇವೆ, ಅದಕ್ಕೆ ತಾವು ಪೂರ್ಣವಾದಂಥ ಅನುಮತಿಯನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಕಂದಾಯ ಇಲಾಖೆಯ ಬೇಡಿಕೆ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಈ ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಬ್ರೀಫ್ ಆಗಿ ಎಲ್ಲವನ್ನೂ ಹೇಳಿದ್ದಾರೆ ಬಿಡಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಕೆಲವು ಭೂಪರಿವರ್ತನೆ ಬಗ್ಗೆ ಅವತ್ತು ನಾನು ಪ್ರಸ್ತಾಪ ಮಾಡಿದ್ದೆ. ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರತಕ್ಕಂಥ ವಿಷಯವನ್ನು ನಾನು ಓದಿದೆ. ಕಂದಾಯ ಇಲಾಖೆ ಬಗ್ಗೆ ಕೆಲವು ಸದಸ್ಯರು ಮಾತನಾಡುವಾಗ ಆನೆಯ ಬಾಲವನ್ನು ಮುಟ್ಟಿ ಅದೇ ಆನೆ ಎಂದು ತಿಳಿದುಕೊಂಡಿದೆ ಎಂದು ಮಾರ್ಮಿಕವಾಗಿ ಈ ವಿಚಾರ ಹೇಳಿದ್ದಾರೆಂದು ಹೇಳಿದರು. ಬಹುಶಃ ಆನೆಯ ಬಾಲವನ್ನು ಮುಟ್ಟಿದರೆ ಕರೆಂಟ್ ಶಾಕ್ ಹೊಡೆಯುತ್ತದೆ. ಇವತ್ತು ರೆವಿನ್ಯೂ ಇಲಾಖೆಯ ಕಾರ್ಯದರ್ಶಿಯವರ ಕಛೇರಿಗೆ ಹೋಗಬೇಕಾದರೆ ಕೈಯಲ್ಲಿ ಕಾಸು ತೆಗೆದುಕೊಂಡು ಹೋಗಿ ಅಲ್ಲಿರತಕ್ಕಂಥವರನ್ನು ಬಿಸಿ ಮಾಡದೇ ಹೋದರೆ ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಈಗ ಕೇವಲ ಕ್ಲಾರಿಫಿಕೇಷನ್ ಕೇಳಿ. ಅವೆಲ್ಲವನ್ನೂ ಹೇಳುವುದಕ್ಕಿಂತ ಕೇವಲ ಕ್ಲಾರಿಫಿಕೇಶನ್ ಮಾತ್ರ ಕೇಳಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಭೂ ಪರಿವರ್ತನೆಗೋಸ್ಕರ 12 ಇಲಾಖೆಗಳಿಗೆ ಹೋಗತಕ್ಕಂಥ ಅವಶ್ಯಕತೆ ಇಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಇವತ್ತು ಭೂ ಪರಿವರ್ತನೆಗೆ 12 ಇಲಾಖೆಗೆ ಅರ್ಜಿ ಹಾಕಬೇಕಾಗಿದ್ದರೆ ಇವತ್ತಿನದಿವಸ ಭೂ ಮಾಫಿಯಾ ಪರವಾಗಿ ಆ ಒಂದು ಕಾನೂನು ಇದೆ ಎಂದು ಹೇಳುತ್ತೇನೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಎರಡು, ಐದು ಗುಂಟೆ ಮತ್ತು ಅರ್ಧ, ಒಂದು ಎಕರೆ ಜಮೀನು ಹೊಂದಿರತಕ್ಕಂಥ ಸಾಮಾನ್ಯ ರೈತ ಭೂ ಪರಿವರ್ತನೆ ಮಾಡಿಸುವುದಕ್ಕೆ 12 ಇಲಾಖೆಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಇದನ್ನು ಹಿಂದಿನ ಸರ್ಕಾರದಲ್ಲಿ ಸನ್ಮಾನ್ಯ ಸೋಮಶೇಖರ್‌ರವರು ಸಚಿವರಾಗಿದ್ದಾಗ ರೈತರ ಭೂ ಪರಿವರ್ತನೆಯನ್ನು ಸರಳೀಕರಣಗೊಳಿಸುವುದಕ್ಕೋಸ್ಕರ ಕೇವಲ 45 ದಿನಗಳಲ್ಲಿ ಭೂ ಪರಿವರ್ತನೆ ಮಾಡಬೇಕೆಂದು ಒಂದು ಆದೇಶವನ್ನು ಮಾಡಿದ್ದರು. ಈ ಒಂದು ಆದೇಶದ ವಿರುದ್ಧವಾಗಿ ಇವತ್ತಿನದಿವಸ 120 ದಿನ ಬೇಕಾಗಿದೆ. ಹಾಗೆಯೇ ರೈತ ನಾಲ್ಕು ತಿಂಗಳ ಕಾಲ ಕಾಯಬೇಕಾಗಿದೆ. ಈಗ ಮತ್ತೊಂದು ಆದೇಶ ಮಾಡಿ ಅದಕ್ಕೆ ಒಂದು ಸಮಿತಿಯನ್ನು ಮಾಡಿದ್ದಾರೆ. ಆ ಸಮಿತಿಯಲ್ಲಿ 12 ಇಲಾಖೆಯ ಅಧಿಕಾರಿಗಳು ಪ್ರತಿವಾರ ಜಿಲ್ಲಾ ಕೇಂದ್ರಗಳಲ್ಲಿ ಸಭೆ ಸೇರಬೇಕು. ಈ ಅಧಿಕಾರಿಗಳು ತಾಲ್ಲೂಕು ಕೇಂದ್ರಗಳಲ್ಲಿ ಸಿಗುವುದಿಲ್ಲ......

ಅಧ್ಯಕ್ಷರು : ಮಾನ್ಯ ನಾರಾಯಣಸ್ವಾಮಿಯವರೆ, ನೀವು ಬೇಡಿಕೆಯ ಮೇಲೆ ಒಂದು ಗಂಟೆಗಿಂತ ಹೆಚ್ಚು ಮಾತನಾಡಿದ್ದೀರಿ.

ಶ್ರೀ ಎ. ನಾರಾಯಣಸ್ವಾಮಿ : ತಾವು ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ಖಂಡಿತ ಧನ್ಯವಾದಗಳನರ್ಪಿಸುತ್ತೇನೆ.

ಅಧ್ಯಕ್ಷರು : ತಮಗೆ ಏನಾದರೂ ಕ್ಲಾರಿಫಿಕೇಷನ್‌ಗೆ ಅವರು ಉತ್ತರ ಕೊಡದಿದ್ದರೆ ಮತ್ತೊಂದು ಸಾರಿ ಬೇಕಾದರೆ ಕೇಳಿ. ಆದರೆ, ನೀವು ಮತ್ತೊಂದು ಸಾರಿ ಭಾಷಣ ಆರಂಭ ಮಾಡಿದರೆ ಹೇಗೆ?

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಾಮಾನ್ಯ ರೈತನ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕಾಗಿತ್ತು. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂಬುದು ನನ್ನ ಭಾವನೆಯಾಗಿದೆ. ಇದರ ಜೊತೆಯಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಈಗಾಗಲೇ ಭೂಪರಿವರ್ತನೆ ಆಗಿದ್ದು, ಇದಕ್ಕೆ ಹಣವನ್ನೂ ಸಹ ಕಟ್ಟಿ ಆದೇಶಕ್ಕೆ ಕಾಯುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕೆಂದು ಮತ್ತು ಈಗಾಗಲೇ ಏನು ಅರ್ಜಿಗಳು ಪೆಂಡಿಂಗ್ ಇವೆ ಇದರ ಬಗ್ಗೆ ಅಂದರೆ, ಈಗಾಗಲೇ ಅರ್ಜಿ ಕೊಟ್ಟು ಅದರ ಬಗ್ಗೆ ವರದಿಯಾಗಿರುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಮಂತ್ರಿಯವರು ಹೇಳಲಿಲ್ಲ. ಮತ್ತೆ ಈ ರಾಜ್ಯದಲ್ಲಿ ಗ್ರಾಮಠಾಣ ಮತ್ತು ಪುರಸಭೆಗಳಲ್ಲಿ ಈಗಾಗಲೇ ನೋಂದಾವಣಿ ಕೆಲಸ ನಿಂತು ಹೋಗಿದೆ. ರೆವಿನ್ಯೂ ಇಲಾಖೆಯ ಕಂದಾಯ ಭೂಮಿ ನೋಂದಾವಣಿ ಆಗುತ್ತಿದೆ. ಆದರೆ ಗ್ರಾಮಠಾಣಗಳದ್ದು ಭೂಮಿ ನೋಂದಾವಣಿ ಆಗುತ್ತಿಲ್ಲ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಸಮಯ ಬಹಳ ಕಡಿಮೆ ಇದೆ. ನೀವು ಈಗಾಗಲೇ ಒಂದು ಗಂಟೆ ಮಾತನಾಡಿದ್ದೀರಿ. ಮತ್ತೆ ಕ್ಲಾರಿಫಿಕೇಶನ್‌ನ್ನು

ಭಾಷಣದ ಮೂಲಕ ಕೇಳಿದರೆ ಆಗುವುದಿಲ್ಲ. ಸ್ವಲ್ಪ ಸಹಕಾರ ಮಾಡಿ, ವಿಚಾರಗಳು ಸಾಕಷ್ಟಿವೆ. ಅವರ ಗಮನಕ್ಕೆ ವಿಚಾರಗಳನ್ನು ತಂದಿದ್ದೀರಿ, ಅವರು ಅವುಗಳನ್ನು ನೋಡುತ್ತಾರೆ. ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.

ಅಧ್ಯಕ್ಷರು : ಮಾನ್ಯ ಉದಾಸಿಯವರೆ, ನಮ್ಮ ಅಪ್ರೋಪ್ರಿಯೇಷನ್ ಬಿಲ್ ಅಲ್ಲಿಗೆ ಹೋಗಬೇಕಾಗಿದೆ. ಆದ್ದರಿಂದ, ಬೇಗ ಪಾಸ್ ಮಾಡಬೇಕಾಗಿದೆ. ದಯಮಾಡಿ ಸಹಕರಿಸಿ. ಈಗಾಗಲೇ ನಿಮ್ಮ ಎಲ್ಲಾ ನಾಯಕರು ಒಪ್ಪಿಕೊಂಡಿದ್ದಾರೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಿಂದ ವರದಿ ಬಂದಿರುವ ಪ್ರಕಾರ ಹಾನಗಲ್ ಮತ್ತು ಹಾವೇರಿ ತಾಲ್ಲೂಕಿನಲ್ಲಿ ಹರಿಯುವ ವರದಾ ನದಿಯಿಂದ ಆಗಿರುವಂಥ ಬೆಳೆ ಹಾನಿ ಮತ್ತು ಅತಿವೃಷ್ಟಿಯಿಂದ ಅಲ್ಲಿ ಮನೆಗಳು ಬಿದ್ದುಹೋಗಿರುವುದರಿಂದ ಇದಕ್ಕೆ ಪ್ರಕೃತಿ ವಿಕೋಪದಿಂದ ಪರಿಹಾರ ಹಣ ಕೊಡುವುದರ ಸಲುವಾಗಿ ಮತ್ತು ಅಲ್ಲಿ ರಸ್ತೆಗಳು ಹಾಳಾಗಿದ್ದರೆ ಅವುಗಳನ್ನು ರಿಪೇರಿ ಮಾಡಿಸತಕ್ಕಂಥ ವಿಚಾರವಾಗಲಿ ಮತ್ತು ಕೆರೆಗಳ ತೂಬುಗಳು ಕಿತ್ತು ಹೋಗಿವೆ, ಹಾಗೆಯೇ ಕಾಲುವೆಗಳು ಒಡೆದು ಹೋಗಿವೆ. ಆದ್ದರಿಂದ ಇವುಗಳನ್ನು ದುರಸ್ತಿ ಮಾಡುವುದಕ್ಕೋಸ್ಕರ ಪ್ರಕೃತಿ ವಿಕೋಪದ ಪರಿಹಾರದಿಂದ ಹಣವನ್ನು ಬಿಡುಗಡೆ ಮಾಡುವುದರ ಬಗ್ಗೆ ಏನು ಮಾಡಿದ್ದಾರೆಂದು ಅವರು ಹೇಳಿಲ್ಲ. ಆದ್ದರಿಂದ ಇದನ್ನು ಹೇಳಬೇಕೆಂದು ನಾನು ಈಗ ಕೇಳುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ ಕೆರೆಗಳು ಒಡೆದು ಹೋಗಿವೆ.

ಅಧ್ಯಕ್ಷರು : ಈಗ ಮಾನ್ಯ ಉಪ ಮುಖ್ಯಮಂತ್ರಿಗಳು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಿದ್ದರಾಮಯ್ಯನವರೆ, ಕುಳಿತುಕೊಂಡು ಮಾತನಾಡಿ. ಏಕೆಂದರೆ ಹಿಂದೆ ಮಾನ್ಯ ವಿರೇಂದ್ರ ಪಾಟೀಲ್‌ರವರು ಕುಳಿತುಕೊಂಡು ಮಾತನಾಡಿದ್ದರು.

ಶ್ರೀ ಸಿದ್ದರಾಮಯ್ಯ : ಪರವಾಗಿಲ್ಲ. ನಾನು ನಿಂತುಕೊಂಡು ಮಾತನಾಡುತ್ತೇನೆ. ಆದರೆ, ಬಹಳ ದೀರ್ಘವಾಗಿ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಮಾನ್ಯ ವೀರೇಂದ್ರ ಪಾಟೀಲ್‌ರವರೂ ಕೂಡ ಕುಳಿತುಕೊಂಡು ಮಾತನಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇರಬಹುದು, ನಾನು ಇಲ್ಲವೆಂದು ಹೇಳುತ್ತಿಲ್ಲ. ಅಂಥದ್ದೇನೂ ಇಲ್ಲ, ನಾನು ನಿಂತುಕೊಂಡು ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಆರ್ಥಿಕ ಇಲಾಖೆ ಬಗ್ಗೆ ಮತ್ತು ತೆರಿಗೆ ರಿಯಾಯಿತಿಗಳನ್ನು ಕೊಡಬೇಕೆಂಬುದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಬೇಡಿಕೆಗಳನ್ನು ನಾನು ಸದನದಲ್ಲಿ ಮಂಡಿಸಿದ ನಂತರ ಮಂಡಿ ನೋವಿನಿಂದ ಸದನಕ್ಕೆ ಬರುವುದಕ್ಕೆ ಆಗಲಿಲ್ಲ. ಸದನಕ್ಕೆ ಬರುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಸಹ ತೆಗೆದುಕೊಂಡಿದ್ದೆ. ಹಾಗಾಗಿ ಮಾನ್ಯ ಸದಸ್ಯರು ಇಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಸದನದಲ್ಲಿ ಇರುವುದಕ್ಕೆ ಆಗಲಿಲ್ಲ. ಅದಕ್ಕೋಸ್ಕರ ಮಾನ್ಯ ಸದಸ್ಯರು ಕ್ಷಮಿಸಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಾ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈ ಆರ್ಥಿಕ ವರ್ಷದಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ಜಾರಿಗೆ ಕೊಟ್ಟಿದ್ದೇವೆ. ಇಡೀ ದೇಶದಲ್ಲಿ ಸುಮಾರು

21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೆಲ್ಲವೂ ಕೂಡ ಇದನ್ನು ಜಾರಿಗೆ ತಂದಿದ್ದಾರೆ. ಇದರ ಬಗ್ಗೆ ಬಹಳ ಜನಕ್ಕೆ ಆತಂಕ ಇತ್ತು. ಮೌಲ್ಯವರ್ಧಿತ ತೆರಿಗೆ ಪದ್ಧತಿ ಹೋದರೆ ತೆರಿಗೆ ಬೆಳವಣಿಗೆಯಲ್ಲಿ ನಷ್ಟ ಆಗಬಹುದೆಂದು ಜನರಿಗೆ ಮತ್ತು ನಮಗೂ ಕೂಡ ಈ ಒಂದು ಆತಂಕ ಇತ್ತು. ಇದಕ್ಕೋಸ್ಕರವೇ ನಾವು ಕೇಂದ್ರ ಸರ್ಕಾರದ ಎಂಪವರ್ಡ್ ಕಮಿಟಿ ಮುಂದೆ ಇದರ ಬಗ್ಗೆ ಚರ್ಚೆ ಮಾಡಿ ಆನಂತರ ಕೇಂದ್ರದ ಹಣಕಾಸಿನ ಮಂತ್ರಿಗಳ ಜೊತೆ ಚರ್ಚೆ ಮಾಡಿ, ಮೌಲ್ಯವರ್ಧಿತ ತೆರಿಗೆ ಜಾರಿಗೆ ಕೊಟ್ಟಿದ್ದರಿಂದ ರಾಜ್ಯಸರ್ಕಾರಗಳಿಗೆ ನಷ್ಟವಾದರೆ ಆ ನಷ್ಟವನ್ನು ತಾವು ತುಂಬಿ ಕೊಡಬೇಕು. ಮೊದಲನೆಯ ವರ್ಷ 100 ಪರ್ಸೆಂಟ್, ಎರಡನೆಯ ವರ್ಷ 75 ಪರ್ಸೆಂಟ್ ಮೂರನೇ ವರ್ಷ 50 ಪರ್ಸೆಂಟ್ ಮಾಡಬೇಕು ಎನ್ನತಕ್ಕಂಥ ವಾದವನ್ನು ಮಂಡಿಸಿದ್ದೆವು. ಇದಕ್ಕೆ ಕೇಂದ್ರದ ಮಾನ್ಯ ಹಣಕಾಸಿನ ಮಂತ್ರಿಗಳು ಒಪ್ಪಿಗೆಯನ್ನು ಕೊಟ್ಟು ಕೇಂದ್ರದ ಆಯವ್ಯಯದಲ್ಲೂ ಕೂಡ ರಾಜ್ಯ ಸರ್ಕಾರಗಳಿಗೆ ನಷ್ಟವಾದರೆ ಕೊಡುವುದಕ್ಕಾಗಿ ಹಣವನ್ನೂ ಕೂಡ ತೊಡಗಿಸಿಕೊಂಡಿದ್ದರು. ಕರ್ನಾಟಕದಲ್ಲಿ ನಾವು ಸುಮಾರು 1200 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ ಎಂದು ಲೆಕ್ಕವನ್ನು ಹಾಕಿದ್ದೆವು. ಆದರೆ ನಮ್ಮ ಆತಂಕ ಮತ್ತು ಆ ನಿರೀಕ್ಷೆ ಈಗ ಹೋಗಿದೆ. ಈ ಹೊಸ ಪದ್ಧತಿಗೆ ಕರ್ನಾಟಕ ರಾಜ್ಯ ಹೋದ ಮೇಲೆ ರೆವಿನ್ಯೂ ಗ್ರೋಥ್ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ 26 ಪರ್ಸೆಂಟ್ ಗಿಂತ ಹೆಚ್ಚಾಗಿದೆ. ಬಹುಶಃ ಇಡೀ ದೇಶದಲ್ಲಿ ವ್ಯಾಟ್ ಪದ್ಧತಿಯನ್ನು ಮಾಡಿಕೊಂಡ ಮೇಲೂ ಕೂಡ ಕರ್ನಾಟಕ ಯಾವ್ಯಾವುದು ವ್ಯಾಟ್ ಸ್ಟೇಟ್‌ಗಳು ಇವೆ, ಇವೆಲ್ಲಕ್ಕೂ ನಾವು ಹೋಲಿಕೆ ಮಾಡಿ ನೋಡಿದಾಗ, ಇದು ಮೊದಲನೆಯ ಸ್ಥಾನದಲ್ಲಿದೆ ಎನ್ನತಕ್ಕಂಥಾದ್ದನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ವ್ಯಾಟ್ ಇಂಟ್ರಡ್ಯೂಸ್ ಮಾಡಿದ ಮೇಲೂ ಕೂಡ ಕರ್ನಾಟಕ ಮೊದಲನೆಯ ಸ್ಥಾನದಲ್ಲಿದೆ, ಆಮೇಲೆ ಹರಿಯಾಣ, ಪಂಜಾಬ ಮತ್ತು ಒರಿಸ್ಸಾ ರಾಜ್ಯಗಳು ಬರುತ್ತವೆ. ಕೆಲವು ರಾಜ್ಯಗಳಲ್ಲಿ ಮೈನರ್ ಗ್ರೋಥ್ ಕೂಡ ಆಗಿದೆ. ನಮ್ಮ ರಾಜ್ಯದಲ್ಲಿ ಒಂದು ಸಮಾಧಾನವಾದ ವಿಚಾರವೆಂದರೆ, ವ್ಯಾಟ್ ಪದ್ಧತಿಯಿಂದ ತೆರಿಗೆಯ ಬೆಳವಣಿಗೆಯು ಚೆನ್ನಾಗಿದೆ, ಕೇಂದ್ರ ಸರ್ಕಾರದಲ್ಲಿ ಬಹುಶಃ ಈ ನಾಲ್ಕು ತಿಂಗಳುಗಳ ತೆರಿಗೆಯ ಬೆಳವಣಿಗೆಯನ್ನು ನೋಡಿದರೆ ಕೇಂದ್ರ ಸರ್ಕಾರದಿಂದ ನಾವು ನಷ್ಟದ ಪರಿಹಾರವನ್ನು ಕೇಳಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲವೆಂದು ನಾನು ಈ ಬೆಳವಣಿಗೆಯ ಆಧಾರದ ಮೇಲೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆಮೇಲೆ ಕೆಲವು ರಿಯಾಯಿತಿಗಳನ್ನು ಕೊಡಬೇಕೆಂದು ಮಾನ್ಯ ಸದಸ್ಯರುಗಳು ಪ್ರಸ್ತಾಪವನ್ನು ಮಾಡಿದ್ದಾರೆ. ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಬುಲಕ್‌ಕಾರ್ಟ್‌ಗೆ ತೆರಿಗೆ ವಿನಾಯಿತಿ ಮಾಡಬೇಕೆಂದು ಹೇಳಿದ್ದಾರೆ. ಬುಲಕ್‌ಕಾರ್ಟ್‌ಗೆ ತೆರಿಗೆ ವಿನಾಯಿತಿ ಈಗಾಗಲೇ ಇದೆ. ಆದರೆ ಎತ್ತಿನಗಾಡಿಯನ್ನು ಉಪಯೋಗಿಸತಕ್ಕಂಥ ರಬ್ಬರ್ ಟೈರ್‌ಗೆ 12 1/2 ಪರ್ಸೆಂಟ್ ಇದೆ, ಉಳಿದಂಥೆ ಹಿಂದೆ ಇರತಕ್ಕಂಥ ಎತ್ತಿನ ಗಾಡಿಗಳನ್ನು ಯಾವುದೇ ತೆರಿಗೆ ಇಲ್ಲ. ಇದು ಎಂಪವರ್ಡ್ ಕಮಿಟಿನಲ್ಲಿ ಚರ್ಚೆಯಾಗಿ ತೀರ್ಮಾನವಾಗಿರತಕ್ಕಂಥದ್ದು. ಇದನ್ನು ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ಈ ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ರಾಜ್ಯ ಸರ್ಕಾರಗಳು ಅವರಿಗೆ ಬೇಕಾದಂಥ ರೀತಿಯಲ್ಲಿ ತೆರಿಗೆಯನ್ನು ಹೆಚ್ಚು ಮಾಡಿಕೊಳ್ಳತಕ್ಕಂಥದ್ದು ಅಥವಾ ಕಡಿಮೆ ಮಾಡತಕ್ಕಂಥದ್ದು ಸಾಧ್ಯವಿಲ್ಲ. ಏಕೆಂದರೆ ನಾವು ಮತ್ತೆ ಯಾವುದಾದರೊಂದು ಬದಲಾವಣೆಗಳನ್ನು ಮಾಡಬೇಕಾದರೆ ಎಂಪವರ್ಡ್ ಕಮಿಟಿ ಮುಂದೆ ಹೋಗಬೇಕಾಗುತ್ತದೆ. ಆ ರೀತಿಯಾದಂಥ

ತೀರ್ಮಾನವಾಗಿದೆ. ಈಗ ಕೆಲವು ಐಸ್‌ಗೆ ಅದಕ್ಕೆ ತೆರಿಗೆ ವಿನಾಯಿತಿಯನ್ನು ಕೊಡಬೇಕೆಂದು ಪ್ರಸ್ತಾಪವನ್ನು ಮಾಡಿದ್ದಾರೆ. ಅದನ್ನು ನಾನು ಘೋಷಣೆ ಮಾಡಲಿಕ್ಕೆ ಬಯಸುತ್ತೇನೆ. ಮೀನುಗಾರರು ಉಪಯೋಗಿಸತಕ್ಕಂಥ ಐಸ್ ಇದೆಯಲ್ಲಾ ಅದಕ್ಕೆ 4 ಪರ್ಸೆಂಟ್ ತೆರಿಗೆ ಇತ್ತು. ಅದನ್ನು ಸಂಪೂರ್ಣವಾಗಿ ವಿನಾಯಿತಿ ಮಾಡಲಿಕ್ಕೆ ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮತ್ತೆ ಈ ಮೆಣಸಿನಕಾಯಿ ಬಗ್ಗೆ ಸಿಎಸ್‌ಟಿ 4 ಪರ್ಸೆಂಟ್ ಇತ್ತು, ಅದನ್ನು 4 ಪರ್ಸೆಂಟ್‌ದಿಂದ ಒಂದು ಪರ್ಸೆಂಟ್‌ಗೆ ಇಳಿಸಲಿಕ್ಕೆ ತೀರ್ಮಾನ ಮಾಡಿದ್ದೇವೆ. ಏಕೆಂದರೆ ಇದು ಸಿಎಸ್‌ಟಿ ಏನಿದೆ ನಾವು ಎಂಪವರ್ಡ್ ಕಮಿಟಿಯಲ್ಲಿ ತೀರ್ಮಾನ ಮಾಡಿದ ಪ್ರಕಾರ ಅದನ್ನು ಹಂತಹಂತವಾಗಿ ತೆಗೆಯಬೇಕು ಎಂದು ತೀರ್ಮಾನವಾಗಿರುವಂಥಾದ್ದು. ಈ ವರ್ಷ 4 ಪರ್ಸೆಂಟ್ ಇರುತ್ತದೆ, ಮುಂದಿನ ವರ್ಷ 2 ಪರ್ಸೆಂಟ್‌ಗೆ ಬರುತ್ತದೆ, ಆ ಮೇಲೆ ಅದನ್ನು ಮೂರನೇ ವರ್ಷಕ್ಕೆ ಸಿಎಸ್‌ಟಿ ಯಿಂದ ತೆರಿಗೆ ವಿಮುಕ್ತರಾಗಿ ಮಾಡುವುದಕ್ಕೆ ಕೂಡ ಅದು ಎಂಪವರ್ಡ್ ಕಮಿಟಿಯಲ್ಲಿ ತೀರ್ಮಾನವಾಗಿದೆ. ಎಲ್ಲಾ ವ್ಯಾಟ್ ರಾಜ್ಯಗಳೂ ಕೂಡ ಅದನ್ನು ಒಪ್ಪಿಕೊಂಡಿದ್ದಾವೆ. ಈ ಒಣದ್ರಾಕ್ಷಿಗೆ, ಹನ್ನೆರಡೂವರೆ ಪರ್ಸೆಂಟ್ ಇದೆ, ಅದು ಎಂಪವರ್ಡ್ ಕಮೀಟಿಯಲ್ಲಿ ಚರ್ಚೆಯಾದಾಗ ಮಹಾರಾಷ್ಟ್ರದಲ್ಲಿ 4 ಪರ್ಸೆಂಟ್ ಮಾಡಿದ್ದಾರೆಂದು ಹೇಗೆ ಆ ಭಾಗದ ಉತ್ತರ ಕರ್ನಾಟಕದ ಭಾಗದ ಬಹಳ ಜನರು ಬಿಜಾಪುರ, ಬಾಗಲಕೋಟೆ ಹಾಗೂ ಬೆಂಗಳೂರು ಭಾಗದ ರೈತರೆಲ್ಲರೂ ಕೂಡ ಮಹಾರಾಷ್ಟ್ರದಲ್ಲಿ 4 ಪರ್ಸೆಂಟ್ ಇದೆ, ನೀವು 4 ಪರ್ಸೆಂಟ್ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಹನ್ನೆರಡೂವರೆ ಪರ್ಸೆಂಟ್‌ದಿಂದ ನಾವು ಕೂಡ 4 ಪರ್ಸೆಂಟ್‌ಗೆ ಇಳಿಸಿದ್ದೇವೆ. ಆಮೇಲೆ ಸೀಗೆಕಾಯಿ, ಸಾಮಾನ್ಯವಾಗಿ ಬ್ರಾಂಡೆಡ್ ಸೀಗೆಕಾಯಿಗಳು ಬಹಳ ಬಂದಿವೆ, ಹಳ್ಳಿಯಲ್ಲಿ ಸಾಮಾನ್ಯ ಜನ ಮಾಡತಕ್ಕಂಥ ಏನು ಸೀಗೆಕಾಯಿಗಳು ಬಹಳ ಬಂದಿವೆ, ಹಳ್ಳಿಯಲ್ಲಿ ಸಾಮಾನ್ಯ ಜನ ಮಾಡತಕ್ಕಂಥ ಏನು ಸೀಗೆಕಾಯಿಗಳು ಇದ್ದಾವೆ, ಇದೂ ಕೂಡ ಮೊದಲು ಝೀರೋ ಇತ್ತು. ಈ ವ್ಯಾಟ್ ಬಂದ ಮೇಲೆ ಹನ್ನೆರಡೂವರೆ ಪರ್ಸೆಂಟಾಗಿಬಿಟ್ಟಿತು. ಸಾಮಾನ್ಯ ಜನರು ಬಡವರು ಈ ಸೀಗೆಕಾಯಿ ಉಪಯೋಗಿಸುವುದು ಎಂದು ಹೇಳಿ ಹನ್ನೆರಡೂವರೆ ಪರ್ಸೆಂಟಿನಿಂದ 4 ಪರ್ಸೆಂಟ್‌ಗೆ ಇದನ್ನು ಇಳಿಸಲಿಕ್ಕೆ ನಾವು ತೀರ್ಮಾನ ಮಾಡಿದ್ದೇವೆ, ಇನ್ನು ಮುಂದೆ 4 ಪರ್ಸೆಂಟ್ ಮಾತ್ರ ಸೀಗೆಕಾಯಿಗೆ ಇರುತ್ತದೆ. ಇನ್ನು ಕೃಷಿ ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಸ್ಪ್ರಿಂಕ್ಲರ್‌ಗಳು, ಡಸ್ಟರ್‌ಗಳು ಮತ್ತು ಹನಿ ನೀರಾವರಿ ಮೇಲಿನ ಸರಕುಗಳ ಮೇಲೆ ಹನ್ನೆರಡೂವರೆ ಪರ್ಸೆಂಟ್ ಇದೆ ಎಂದು ಪ್ರಸ್ತಾಪವನ್ನು ಮಾಡಿದ್ದೀರಿ. ಇದು ಬೇರೆ ರಾಜ್ಯಗಳಲ್ಲಿ 4 ಪರ್ಸೆಂಟ್ ಇದೆ, ಇದನ್ನು ನಾವೂ ಕೂಡ 4 ಪರ್ಸೆಂಟ್‌ಗೆ ಇಳಿಸುತ್ತೇವೆ. ಬೇರೆ ರಾಜ್ಯದಲ್ಲಿ 4 ಪರ್ಸೆಂಟ್ ಇದೆ. ಒಂದು ವೇಳೆ ಇದ್ದರೆ ಎಂಪವರ್ಡ್ ಕಮಿಟಿಯಲ್ಲಿ ಏನು ತೀರ್ಮಾನವಾಗಿರುತ್ತವೆ, ಆ ತೀರ್ಮಾನದಿಂದ ಅವರು ಡೀವಿಯೇಟ್ ಆಗುವುದಕ್ಕಾಗುವುದಿಲ್ಲ. ನೆಕ್ಸ್ಟ್ ಎಂಪವರ್ಡ್ ಕಮಿಟಿಯಲ್ಲಿ ಆ ತರಹ ಇದ್ದರೆ ಆಂಧ್ರದಲ್ಲಿ, ಮಹಾರಾಷ್ಟ್ರದಲ್ಲಿ, ಕೇರಳದಲ್ಲಿ, ಯಾವ ತರಹ ಇರುತ್ತದೆ ಅದರ ಬಗ್ಗೆ ನಾವು ಕೂಡ ತೀರ್ಮಾನವನ್ನು ಮಾಡುತ್ತೇವೆ. Because this matter has to be taken up before the Empowered Committee. ಅದು ಒಂದನ್ನು ನಿಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಈ ಕಾಫಿಪುಡಿ ಬಗ್ಗೆ ಹನ್ನೆರಡೂವರೆ ಪರ್ಸೆಂಟ್ ಇದೆ ಎಂದು ಮಾನ್ಯ ಮಾಧುಸ್ವಾಮಿ ಮತ್ತು ಬೇರೆ ಸದಸ್ಯರುಗಳು, ಕಾಫಿ ಬೆಳೆಯತಕ್ಕಂಥ ಭಾಗದಿಂದ ಬಂದವರು ಟೀ ಗೆ 4 ಪರ್ಸೆಂಟ್ ಇದೆ, ಕಾಫಿಗೆ ಹನ್ನೆರಡೂವರೆ ಪರ್ಸೆಂಟ್ ಇದೆ ಎಂದು ಈ

ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಬಹಳ ಜನ ಒಂದು ಸರ್ಕಾರಕ್ಕೆ ಕೂಡ ಕಾಫಿ ಬೆಳೆಗಾರರು ಬಂದು ಮನವಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಟೀ ಗೆ ಸಮಾನಾಂತರವಾಗಿ ಹನ್ನೆರಡೂವರೆಯಿಂದ 4 ಪರ್ಸೆಂಟ್‌ಗೆ ಏಕೆಂದರೆ ಕರ್ನಾಟಕ ಮಾತ್ರ ಕಾಫಿ ಬೆಳೆಯತಕ್ಕಂಥ ಕೇರಳದವರು, ಅಸ್ಸಾಂದವರು ಟೀ ಬೆಳೆಯುವ ಆ ಭಾಗದವರು ಹನ್ನೆರಡೂವರೆಯಿಂದ 4 ಪರ್ಸೆಂಟ್‌ಗೆ ಇಳಿಸಬೇಕೆಂದು ಅವರು ಒತ್ತಾಯವನ್ನು ಮಾಡಿದರು ಮತ್ತು ನಾವೂ ಕೂಡ ಇದನ್ನು ಒತ್ತಾಯ ಮಾಡಿ ಕಾಫಿಯನ್ನು ಹನ್ನೆರಡೂವರೆ ಪರ್ಸೆಂಟ್‌ನಿಂದ ಟೀ ಗೆ ಸಮಾನವಾಗಿ 4 ಪರ್ಸೆಂಟ್‌ಗೆ ತೆರಿಗೆಯ ರೇಟ್‌ನ್ನು ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ. ಆಮೇಲೆ ಬರಗಾಲವೆಂದು ಕಾಫಿಬೆಲೆಯು ಬಿದ್ದುಹೋಗಿದೆ ಎಂದು ಹೇಳಿದರು. ಯಾರು 50 ಎಕರೆ ಕಾಫಿ ಬೆಳೆಯತಕ್ಕಂಥ ಲ್ಯಾಂಡ್ ಇದೆ, ಅದನ್ನು ಕಳೆದ ವರ್ಷ ಅವರಿಗೆ ಎಕ್ಸೆಂಷನ್ ಕೊಟ್ಟಿತ್ತು, ಅದು 50 ಪರ್ಸೆಂಟ್‌ವರೆಗೆ ವಿನಾಯಿತಿ ಇದೆ. ಈ ವರ್ಷವೂ ಕೂಡ ಅದನ್ನು ಮುಂದುವರೆಸಬೇಕು ಎನ್ನುವುದೂ ಕೂಡ ಇದೆ. ಕಾಫಿ ಬೆಳೆಗಾರರಿಗೆ ಏನು ವಿನಾಯಿತಿ ಕೊಟ್ಟಿದೆ ಅದನ್ನು ಈ ವರ್ಷವೂ ಕೂಡ ಮುಂದುವರಿಸುವಂತಹ ತೀರ್ಮಾನವನ್ನು ಮಾಡಿದ್ದೇವೆ. ಕಾಫಿ ಬೆಳೆಗಾರರಿಗೆ ತೊಂದರೆ ಇದ್ದು, ಈ ವರ್ಷ ಕಾಫಿ ಬೆಲೆ ಸ್ವಲ್ಪ ಜಾಸ್ತಿಯಾಗಿದೆ. ಆದರೂ ಅವರು ಇನ್ನೂ ಸುಸ್ಥಿತಿಗೆ ಬಂದಿಲ್ಲವೆನ್ನುವ ಕಾರಣಕ್ಕೋಸ್ಕರ, ಇನ್ನೂ ಒಂದು ವರ್ಷ ಅದನ್ನು ಮುಂದುವರಿಸಬೇಕೆಂಬ ಒತ್ತಾಯವನ್ನು ಮಾಡಿದ್ದರು. ಅದನ್ನು, ಮತ್ತೆ ಒಂದು ವರ್ಷ ಮುಂದುವರಿಸುವ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ರಾಜ್ಯದಲ್ಲಿ 4 ತಿಂಗಳು ತೆರಿಗೆ ವಸೂಲಿ ಎಷ್ಟು ಆಗಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಮಾನ್ಯಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ : ಹೆಂಚಿನ ಬಗ್ಗೆ ವಿನಾಯಿತಿ ಕೊಡಬೇಕೆಂದು ಕೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದು ಎಂಪವರ್ಡ್ ಕಮಿಟಿಯ ಮುಂದೆ ಇದೆ. ಕಳೆದ ವರ್ಷ ವ್ಯಾಟ್ ಬರುವುದಕ್ಕಿಂತ ಮುಂಚಿತವಾಗಿ 2004–05ನೇ ಇಸವಿಯಲ್ಲಿ ಜುಲೈ ಎಂಡ್‌ವರೆಗೆ 2829 ಕೋಟಿ 35 ಲಕ್ಷ ರೂಪಾಯಿಗಳು ತೆರಿಗೆ ಬಂದಿದೆ. 28, 29, 30 ನೇ ತಾರೀಖು ಆಗಿಲ್ಲ. ಅದು ಇನ್ನೂ ಬಂದಿಲ್ಲ, ಈ 3 ದಿನದಲ್ಲಿ ತೆರಿಗೆ ವಸೂಲಿ ಇಲ್ಲದೆಯೇ ಈ ತಿಂಗಳು 28ನೇ ತಾರೀಖಿನವರೆಗೆ 3582 ಕೋಟಿ ರೂಪಾಯಿಗಳು ಬಂದಿದೆ. ಸುಮಾರು 4 ತಿಂಗಳಲ್ಲಿ 800 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ. This is the highest growth in the country among all the VAT states. ಇದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. 750 ರಿಂದ 800 ಕೋಟಿ ರೂಪಾಯಿಗಳು ಜಾಸ್ತಿಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪೆಟ್ರೋಲ್ ಮತ್ತು ಡೀಸೆಲ್‌ನಿಂದ ಸುಮಾರು 250 ಕೋಟಿ ರೂಪಾಯಿಗಳು ಜಾಸ್ತಿಯಾಗಿದೆ.

ಶ್ರೀ ಸಿದ್ದರಾಮಯ್ಯ : ಅದು ಹೆಚ್ಚಿಗೆ ಆಗಿದೆ, ಪೆಟ್ರೋಲ್ ಮತ್ತು ಡೀಸೆಲ್ ಹೆಚ್ಚಿಗೆ ಆಗಿದೆ ಎಂದು ನಾನು ಏನೂ ಹೇಳಲಿಲ್ಲ ಅದು ಆಂಧ್ರಕ್ಕೂ ಕೂಡ ಅಪ್ಲೈ ಆಗುತ್ತದೆಯಲ್ಲಾ, ಅವರು ಏತಕ್ಕೆ ಮೈನಸ್ ಗ್ರೋಥ್‌ನಲ್ಲಿದ್ದಾರೆ? ಆಂಧ್ರದ್ದು ನಾನು ಹೇಳುತ್ತಿರುವುದು. ಬರೀ ಪೆಟ್ರೋಲ್ ಮತ್ತು ಡೀಸೆಲ್‌ದ್ದು ಅಷ್ಟೇ ಅಲ್ಲ, ಟೋಟಲ್ ಗ್ರೋಥ್ ಇನ್ ಆಂಧ್ರ ಅವರು ಮೈನಸ್‌ನಲ್ಲಿದ್ದಾರೆ.

ನಾವು 27 ಪರ್ಸೆಂಟ್‌ನಲ್ಲಿ ಇದ್ದೇವೆ. ಅವರು ಮತ್ತು ನಾವು ವ್ಯಾಟನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ವೆಸ್ಟ್ ಬೆಂಗಾಲ್ ಎಂಪವರ್ಡ್ ಕಮಿಟಿ ಚೇರಮನ್ Asim Das Gupta ಅವರೇ ಇದರ ಬಗ್ಗೆ ಬಹಳ ಆಸಕ್ತಿಯನ್ನು ತೆಗೆದುಕೊಂಡು ಮಾಡಿದಂಥವರು. ಅವರ ರಾಜ್ಯದಲ್ಲಿ ಕೂಡ 8 ರಿಂದ 9 ಪರ್ಸೆಂಟ್ ಗ್ರೋಥ್ ಇರಬೇಕು. ಇದು ಬರೀ ಪೆಟ್ರೋಲ್ ಮತ್ತು ಡೀಸೆಲ್ ಒಂದರಿಂದಲೇ ಬೆಲೆಹೆಚ್ಚಾದ ತಕ್ಷಣ ಈಗ ಅವರು ಮಾಡಿರುವುದು. ನಾನು ಹೇಳುತ್ತಿರುವುದು 4 ತಿಂಗಳಲ್ಲಿ ಒಟ್ಟಿಗೆ, ಅದರಿಂದಾಗಿ 800 ಕೋಟಿ ರೂಪಾಯಿಗಳು ಈ ತಿಂಗಳಲ್ಲಿ ಜಾಸ್ತಿಯಾಯಿತು ಎಂದು ಹೇಳುವುದಕ್ಕೆ ಬರುವುದಿಲ್ಲ. ಹಾಗಿದ್ದರೆ ಆಂಧ್ರಕ್ಕೂ, ಮಹಾರಾಷ್ಟ್ರಕ್ಕೂ ಕೂಡ, ಕೇರಳಕ್ಕೂ ಕೂಡ ಜಾಸ್ತಿಯಾಗಬೇಕು, ಬೇರೆ ಬೇರೆ ರಾಜ್ಯಗಳಿಗೂ ಜಾಸ್ತಿಯಾಗಬೇಕಾಗುತ್ತದೆ. ನಮ್ಮನ್ನು ಬಿಟ್ಟರೆ ಹರಿಯಾಣ, ಪಂಜಾಬ್, ಓರಿಸ್ಸಾ ಈ ರಾಜ್ಯಗಳು ಕ್ರಮೇಣ ಬರುತ್ತವೆ. ಇದು 17 ರಿಂದ 20 ಪರ್ಸೆಂಟ್‌ಗಳವರೆಗೆ ಬರುತ್ತವೆ. ಆದ್ದರಿಂದ ನಮ್ಮಲ್ಲಿ ತೆರಿಗೆ ಬೆಳವಣಿಗೆಯು ಚೆನ್ನಾಗಿದೆ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಮತ್ತೆ ಎಕ್ಸೈಸ್ ರೆವಿನ್ಯೂ ಕೂಡ ಕಳೆದ ಎರಡು ಆ್ಯಕ್ಷನ್‌ನಿಂದ 2004–05ರಲ್ಲಿ ಆದಂತಹ ಆ್ಯಕ್ಷನ್ ಮತ್ತು ಈ ವರ್ಷದ ಆ್ಯಕ್ಷನ್‌ನಿಂದ ಹೋದ ವರ್ಷ Rental growth was 53%. This year also more than 30%. 32-33% ಇದೆ. ಎರಡು ಆ್ಯಕ್ಷನ್‌ಗಳಿಂದ 900 ಕೋಟಿ ರೂಪಾಯಿಗಳು ಹೆಚ್ಚಾಗಿದೆ. ಆದರೆ ಬೆಂಗಳೂರು ಒಂದರಲ್ಲೇ 2003–04ರಲ್ಲಿ ಆ್ಯಕ್ಷನ್‌ನಲ್ಲಿ ಬೆಂಗಳೂರು ಸಿಟಿ ಮತ್ತು ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ 6 ಕೋಟಿ ರೂಪಾಯಿಗಳು ರೆಂಟಲ್ ಇತ್ತು. ಹೋದವರ್ಷ 2004–05ಕ್ಕೆ 9 ಕೋಟಿ 80 ಲಕ್ಷ ರೂಪಾಯಿಗಳಾಯಿತು. ಈ ವರ್ಷ 16 ಕೋಟಿ 20 ಲಕ್ಷ ರೂಪಾಯಿ ಆಗಿದೆ. ಈ ಎರಡು ಆ್ಯಕ್ಷನ್‌ಗಳಿಂದ more than Rs. 10 crores rentals ಬರೇ ಬೆಂಗಳೂರು ಡಿಸ್ಟ್ರಿಕ್ಟ್ ಒಂದರಲ್ಲಿಯೇ ಹೆಚ್ಚಾಯಿತು. Never in the history of Excise Department and Karnataka. ಕಳೆದ 35 ವರ್ಷಗಳಿಂದ arrack ನಲ್ಲಿ ಗ್ರೋಥ್ ತೆಗೆದುಕೊಂಡರೆ, average below 5% ಇತ್ತು ನಮಗೆ ಈಗ ಈ ಎರಡು ಆ್ಯಕ್ಷನ್‌ಗಳಿಂದ 100 ಪರ್ಸೆಂಟ್ ತೆಗೆದುಕೊಳ್ಳುತ್ತೇವೆ. ಇದನ್ನೂ ಕೂಡ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ನಾನು ಅವುಗಳ ಬಗ್ಗೆ ದೀರ್ಘವಾಗಿ ಉತ್ತರವನ್ನು ಕೊಡುವುದಕ್ಕೆ ಹೋಗುವುದಿಲ್ಲ. because of the pain in my leg. ಮತ್ತೆ ಅಪ್ರೋಪ್ರಿಯೇಷನ್ ಬಿಲ್ ಕೂಡ ಪಾಸಾಗಬೇಕಾಗಿದೆ. ಮತ್ತು ಅಪ್ಪರ್ ಹೌಸ್‌ಗೂ ಕೂಡ ಹೋಗಬೇಕಾಗಿದೆ. ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ರೈತರಿಗೆ ಸತತವಾಗಿ 2 ವರ್ಷಗಳ ಕಾಲ ಬರಗಾಲ ಕಾಡಿತ್ತು ಅವರು ಬಹಳ ಕಷ್ಟಕ್ಕೆ ಸಿಕ್ಕಿಕೊಂಡಿದ್ದರು ಅಂತ ಹೇಳಿ ಶೇಕಡ 6 ರ ಬಡ್ಡಿ ದರದಲ್ಲಿ ಸಾಲ ಕೊಡುವ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಈ ವರ್ಷ ಅಂದರೆ ಈ ಆರ್ಥಿಕ ವರ್ಷದಲ್ಲಿ 1.4.2005 ರಿಂದ 3 ತಿಂಗಳವರೆಗೆ ಯಾರು ಅಸಲನ್ನು ಕಟ್ಟುತ್ತಾರೆ ಅದು ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೆವು. ಇದರ ಬಗ್ಗೆ ಈಗಾಗಲೇ ಸರ್ಕಾರ ತೀರ್ಮಾನವನ್ನು ಮಾಡಿದೆ. ಅದನ್ನು ಸೆಪ್ಟೆಂಬರ್ ಕೊನೆಯವರೆಗೂ ಕೂಡ ಅದನ್ನು ವಿಸ್ತರಣೆ ಮಾಡಬೇಕು, ಜೊತೆಗೆ ಈ ಮಧ್ಯೆ ಸೆಪ್ಟೆಂಬರ್‌ವರೆಗೆ ಕಟ್ಟತಕ್ಕಂತಹವರಿಗೆ ಬಡ್ಡಿ ಬೀಳುತ್ತದೆಯಲ್ಲಾ ಆ ಬಡ್ಡಿಯನ್ನೂ ಕೂಡ ಮನ್ನಾ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಏಪ್ರಿಲ್‌ನಿಂದ

ಸೆಪ್ಟೆಂಬರ್‌ರವರೆಗೆ ಯಾರು ಅಸಲನ್ನು ಕಟ್ಟುತ್ತಾರೆ ಅದಕ್ಕೆ ಬಡ್ಡಿ ಹಾಗೂ ಸುಸ್ತಿಬಡ್ಡಿಯನ್ನು ಮನ್ನಾ ಮಾಡಬೇಕೆಂದು ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹಾಗೂ ಮಾನ್ಯ ಮಾಧುಸ್ವಾಮಿಯವರು ಇವರೆಲ್ಲರೂ ಅದನ್ನು ಮಾರ್ಚ್ ತಿಂಗಳವರೆಗೂ ಕೂಡ ಕೆಲವರೆಲ್ಲ ಕಟ್ಟಿದ್ದಾರೆ, ಮಾರ್ಚ್ 11ನೇ ತಾರೀಖು ನಾವು ಇಲ್ಲಿ ಬಜೆಟ್‌ನ್ನು ಮಂಡಿಸಿದಾಗ ಅದರ ಬಗ್ಗೆ ನೀವು ಹೇಳಿದ ಮೇಲೆ ಕೆಲವರು ಅಸಲನ್ನು ತೆಗೆದುಕೊಂಡು ಕೆಲವು ಸೊಸೈಟಿಗಳಲ್ಲಿ ಬಡ್ಡಿಯನ್ನು ಕಟ್ಟಿದ್ದಾರೆ, ಅವರಿಗೂ ಕೂಡ ಕೊಡಬೇಕಾಗುತ್ತದೆ. ನಾವು ಅದನ್ನು ಘೋಷಣೆ ಮಾಡುವುದಕ್ಕಿಂತ ಮುಂಚೆಯೇ ಅವರು ಕಟ್ಟಿಬಿಟ್ಟಿದ್ದಾರೆ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ನಾವು ಅಸೆಂಬ್ಲಿಯಲ್ಲಿ ಹೇಳುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೆವು. ಅದರ ಬಗ್ಗೆ ಸರ್ಕಾರ ತೀರ್ಮಾನ ಮಾಡಿ ಅಸೆಂಬ್ಲಿಯಲ್ಲಿ ನಾವು ಅದರ ಬಗ್ಗೆ ಉತ್ತರವನ್ನು ಕೊಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆಂದು ಹೇಳಿದ್ದೆವು. ಈಗ ಸರ್ಕಾರವು ಕೂಡ, ರಾಜ್ಯ ಸರ್ಕಾರವು ರೈತರ ಪರವಾಗಿದೆ ಎಂದು ಮತ್ತೊಮ್ಮೆ ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ. 1.3.2005 ರಿಂದ 31.3.2005 ರವರೆಗೆ ಯಾರ‍್ಯಾರು ಅಸಲನ್ನು ಕಟ್ಟಿದ್ದಾರೆ ಅವರಿಗೂ ಕೂಡ ಬಡ್ಡಿ ಮನ್ನಾ, ಸುಸ್ತಿ ಬಡ್ಡಿ ಮನ್ನಾ ಮಾಡಲಾಗಿದೆ. ಇದರಿಂದ ಸರ್ಕಾರದ ಮೇಲೆ ಐವತ್ತಮೂರು ಕೋಟಿ ರೂಪಾಯಿಗಳ ಹೊರೆ ಬೀಳುತ್ತದೆ, ಈಗಾಗಲೇ ಬಜೆಟ್‌ನಲ್ಲಿ 450 ಕೋಟಿ ರೂಪಾಯಿಗಳನ್ನು ಸುಸ್ತಿ ಬಡ್ಡಿ ಮನ್ನಾ ಮಾಡಲಿಕ್ಕೆ ನೀಡಲಾಗಿದೆ. ಅದರ ಮೇಲೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಒಂದು ವಿನಂತಿ ಅಷ್ಟೆ. ಹೋದ 31.3.2005ರ ಸಾಲಿನಲ್ಲಿ ಯಾರ‍್ಯಾರು ಅಸಲನ್ನು ತೆಗೆದುಕೊಂಡು ಬಡ್ಡಿ ಕಟ್ಟಿದ್ದಾರೆ, ಅವರಿಗೆ ಬಡ್ಡಿ ಮನ್ನಾ ಮಾಡಿದ್ದೀರಿ. ಆ ವರ್ಷ ಸಾಲ ತೆಗೆದುಕೊಂಡಿರುವವರಿಗೆ ಯಾರು ಅಸಲು ಮತ್ತು ಬಡ್ಡಿಯನ್ನು ಕಟ್ಟಿದ್ದಾರೆ ಅವರ ಹಣವನ್ನು ಪೂರ್ತಿಯಾಗಿ ವಾಪಸ್ಸು ಕೊಡಬೇಕು, ಇದರಿಂದ ಬಹಳ ಜಾಸ್ತಿಯಾಗುವುದಿಲ್ಲ. ಅದರ ಬಗ್ಗೆ ಸದನದಲ್ಲಿ ಚರ್ಚೆಯಾಗಿದೆ, ನಮ್ಮ ಸಹಕಾರ ಸಚಿವರ ಬಳಿ ಸಹ ವಿನಂತಿಸಲಾಗಿದೆ. ಆ ವರ್ಷಕ್ಕೆ 31.3.2005ಕ್ಕೆ ಮುಂಚೆ ಯಾರ‍್ಯಾರು ಪ್ರಾಮಾಣಿಕವಾಗಿ ಬಡ್ಡಿ ಮತ್ತು ಅಸಲು ಕಟ್ಟಿದ್ದಾರೆ. ಆ ಬಡ್ಡಿಯನ್ನು ವಾಪಸ್ಸು ಕೊಡಬೇಕೆಂಬುದು ನಮ್ಮ ಒತ್ತಾಯ.

ಶ್ರೀ ಸಿದ್ದರಾಮಯ್ಯ : ನೀವು ಅಂದು ಒತ್ತಾಯ ಮಾಡಿದ ವಿಷಯ ನನಗೆ ಜ್ಞಾಪಕವಿದೆ, ಮಾರ್ಚ್ ತಿಂಗಳಲ್ಲಿ ಕೆಲವರು ಬಜೆಟ್ ಮಂಡಿಸಿದ ಮೇಲೆ ಸಾಲ ಕಟ್ಟಿರುತ್ತಾರೆ. ಬಡ್ಡಿ ವಸೂಲು ಮಾಡಿದ್ದಾರೆ. ನಾನು ಈ ಬಗ್ಗೆ ಡಿಸ್ಟ್ರಿಕ್ಟ್ ಬ್ಯಾಂಕ್, ಅಧ್ಯಕ್ಷರುಗಳು, ಸಂಬಂಧಪಟ್ಟ ಅಧಿಕಾರಿಗಳು ಎಲ್ಲರನ್ನೂ ಕರೆದು ಮಾತನಾಡಿದ್ದೇನೆ. ಬಜೆಟ್ ಮಂಡಿಸಿದಾಗ ಇದನ್ನು ಹೇಳಿರಲಿಲ್ಲ. ಈಗ ಸೆಪ್ಟೆಂಬರ್‌ವರೆಗೆ ಹೋಗುತ್ತದೆ. ಅಲ್ಲಿ ಬೀಳುವಂತಹ ಬಡ್ಡಿ, ಸುಸ್ತಿ ಬಡ್ಡಿ ಸುಮಾರು 60 ಕೋಟಿ ರೂಪಾಯಿಗಳ ಮೇಲಾಗುತ್ತದೆ, ಅದೂ ಕೂಡ ಸರ್ಕಾರಕ್ಕೆ ಹೊರೆಯಾಗುತ್ತದೆ. ಈ 53 ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 60 ಕೋಟಿ ರೂಪಾಯಿಗಳ ಹೊರೆಯಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ಜೂನ್‌ವರೆಗೆ 550 ಕೋಟಿ ರೂಪಾಯಿಗಳಷ್ಟು ಲಯಬಿಲಿಟಿ ಇದೆ.

ಶ್ರೀ ಸಿದ್ದರಾಮಯ್ಯ : ಆ ಬಗ್ಗೆ ಆಮೇಲೆ ಹೇಳೋಣ, ಈಗ ಅಡಿಷನಲ್ ಮೊತ್ತ 100 ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆ. ಅದರ ಪ್ರಕಾರ, ಸಹಕಾರ ಇಲಾಖೆಯ ಲೆಕ್ಕದ ಪ್ರಕಾರ

200 ಕೋಟಿ ರೂಪಾಯಿಗಳಾಗುತ್ತದೆಂದು ಅವರು ಆ ಬಗ್ಗೆ ಲೆಕ್ಕವನ್ನು ಕೊಟ್ಟಿದ್ದಾರೆ. ನಾನಲ್ಲವಲ್ಲ ಸಾಲ ಕೊಡುವುದು, ಸಹಕಾರ ಇಲಾಖೆಯವರು ಸಾಲ ಕೊಡುವವರು, ವಸೂಲು ಮಾಡುವವರು. ನಾವೇನು ಅವರಿಗೆ ಬಡ್ಡಿ, ಸುಸ್ತಿ ಬಡ್ಡಿ ವಜಾ ಮಾಡಿರುತ್ತೇವೆ. ಅದನ್ನು ಸರ್ಕಾರದಿಂದ ಕಟ್ಟಿಕೊಡುವ ಕೆಲಸವನ್ನು ನಾನು ಮಾಡುತ್ತಾ ಇರುವುದು. ಅದನ್ನು ಕೂಡ ಈಗ ಮಾಡಿದ್ದೇವೆಂದು ಹೇಳಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಮೀನುಗಾರರಿಗೆ ಸೊಸೈಟಿಗಳಲ್ಲಿ ಯಾರು ಸಾಲ ತೆಗೆದುಕೊಂಡಿದ್ದಾರೆ, ಅವರಿಗೆ ಶೇಕಡ 6 ರಷ್ಟು ದರದಲ್ಲಿ ಬಡ್ಡಿ ಕೊಡಬೇಕು ಮತ್ತು ಅಸಲು ಕಟ್ಟಿದರೆ ಅವರಿಗೆ ಬಡ್ಡಿ ಸುಸ್ತಿಬಡ್ಡಿ ಮನ್ನಾ ಮಾಡಬೇಕೆಂದು ಕೂಡಾ ತೀರ್ಮಾನವಾಗಿದೆ. ಆಮೇಲೆ ವೀವರ್ಸ್ ಯಾರು ಸೊಸೈಟಿಗಳಲ್ಲಿ ಸಾಲ ಪಡೆದಿರುತ್ತಾರೆ ಶೇಕಡ 6 ರ ಬಡ್ಡಿ ದರದಲ್ಲಿ ಸಾಲವನ್ನು ಪಡೆಯಬಹುದು. ಅಸಲು ಕಟ್ಟಿದರೆ ಅವರಿಗೂ ಸಹ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕೆಂದೂ ಸಹ ತೀರ್ಮಾನವಾಗಿದೆ. ಅವರೂ ಕೂಡ ಸೊಸೈಟಿಗಳಲ್ಲಿ ರೈತರು ಸಾಲವನ್ನು ತೆಗೆದುಕೊಂಡಿರುವವರಿಗೂ ಕೂಡ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ತೆಂಗು ಅಡಿಕೆ ಬೆಳೆಗಾರರ ಬಗ್ಗೆ ಸೇರಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ತೆಂಗು ಬೆಳೆ ಅಭಿವೃದ್ಧಿ ಸಾಲದಲ್ಲಿ ಅಡಿಕೆ ಬೆಳೆಗಾರರನ್ನು ಇದರಲ್ಲಿ ಸೇರಿಸಿರಲಿಲ್ಲ. ಅದನ್ನು ಸೇರಿಸಿ ಎಂದು ಕೇಳಿದ್ದೆವು. ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಿ ಕೋಕನಟ್ ಡೆವಲಪ್‌ಮೆಂಟ್ ಸ್ಕೀಮ್‌ಗೆ ವೇವ್ ಮಾಡುತ್ತಿಲ್ಲ. ಅದನ್ನು ಇದರಲ್ಲಿ ಸೇರಿಸಬೇಕು.

ಶ್ರೀ ಸಿದ್ದರಾಮಯ್ಯ : ನೋಡೋಣ, ಅದರ ಬಗ್ಗೆ ನನ್ನ ಬಳಿ ಫಿಗರ್ಸ್ ಇಲ್ಲ. ಮಾಹಿತಿಯನ್ನು ತರಿಸಿ ನೋಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ತೆಂಗು ಅಡಿಕೆ ಬೆಳೆಗಾರರು ಬಹಳ ಕಷ್ಟದಲ್ಲಿದ್ದಾರೆ, ಅವರನ್ನು ಇದರಲ್ಲಿ ಸೇರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ತೆಂಗು ಅಡಿಕೆ ಬೆಳೆಗಾರರಿಗೆ ನೀವು ಈ ಸೌಲಭ್ಯವನ್ನು ಕೊಡದಿದ್ದರೆ ತೀರಾ ಅನ್ಯಾಯವಾಗುತ್ತದೆ, ಅವರಿಗೆ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗಿದೆ. ಅವರ ಬಗ್ಗೆ ಪ್ರಾಮಾಣಿಕವಾಗಿ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನುಸಿಪೀಡೆ ಬಂದು ತೆಂಗು ಬೆಳೆಗಾರರಿಗೆ ಬಹಳ ನಷ್ಟವಾಗಿದೆ. ಅವರೇನೂ ಸಾಲ ಪಡೆದಿದ್ದಾರೆ ಅವರನ್ನು ಇದರಲ್ಲಿ ಸೇರಿಸಬೇಕೆಂದು ನಾವು ಅಂದು ಒತ್ತಾಯ ಮಾಡಿದ್ದೇವೆ, ಕೋಟ್ಯಾಂತರ ರೂ. ತೆಂಗು ಬೆಳೆ ನಾಶವಾಗಿದೆ. ಅದರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ : ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲವೇನಿದೆ ಎಲ್ಲರಿಗೂ ಕೊಡಬೇಕೆಂದರೆ ನಮಗೂ ಸಹ ಬಹಳ ಕಷ್ಟವಾಗುತ್ತದೆ. ಇವೆಲ್ಲವೂ ಕೂಡ ಕಮರ್ಷಿಯಲ್ ಕ್ರಾಪ್ಸ್ ಎಂದು ಮಾಡಲಾಗಿದೆ. ಈಗ ಎಷ್ಟು ಸಾಲವಿದೆ ಎಂಬ ಬಗ್ಗೆ ನನ್ನಲ್ಲಿ ಮಾಹಿತಿಯಿಲ್ಲ. ಅದರ ಬಗ್ಗೆ ಇನ್ನೊಮ್ಮೆ ಪರಿಶೀಲನೆ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ತೆಂಗು ಅಭಿವೃದ್ಧಿಗೆ ಅವರು ತೋಟ ಮಾಡಲಿಕ್ಕೆ ಆರಂಭದಲ್ಲಿ ತೆಗೆದುಕೊಂಡ ಸಾಲದ ಮೇಲೆ ಬಡ್ಡಿಯನ್ನು ವಜಾ ಮಾಡಿಲ್ಲ. ಅವರ ಅಸಲನ್ನೂ ಸಹ ಮನ್ನಾ ಮಾಡಬೇಕು. ಆ ರೀತಿ ಪರಿಸ್ಥಿತಿಯಿದೆ, ಹಾಗಾಗಿ ಅದನ್ನು ನಾವು ಕೇಳುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತೆಂಗು ಬೆಳೆಗಾರರಿಗೆ ಅಸಲು, ಬಡ್ಡಿ ಎರಡನ್ನು ಮನ್ನಾ ಮಾಡಬೇಕು.

ಶ್ರೀ ಸಿದ್ದರಾಮಯ್ಯ : ಸರ್ಕಾರ ಅದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ. ಅಸಲನ್ನು ಯಾರಿಗೂ ಸಹ ಮನ್ನಾ ಮಾಡುವುದಿಲ್ಲ. ಕೋಳಿ ಫಾರಂ ನಡೆಸುವವರಿಗೆ, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಿಂದ ಸಬ್ಸಿಡಿ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೋಳಿ ಫಾರಂ ನಡೆಸುವವರಿಗೂ ಸಹ ಸೊಸೈಟಿಗಳಲ್ಲಿ ಸಾಲವನ್ನು ಕೊಟ್ಟಿದ್ದಾರೆ, ಪಿ.ಎಲ್.ಡಿ. ಡಿ.ಸಿ.ಸಿ. ಬ್ಯಾಂಕ್....

ಶ್ರೀ ಸಿದ್ದರಾಮಯ್ಯ : ಎಲ್ಲಿ ಸಾಲ ತೆಗೆದುಕೊಂಡರೂ ಸಹ ಅವರಿಗೆ ಸಬ್ಸಿಡಿ ಬೇರೆ ಕೊಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರಿಗೆ ಸಬ್ಸಿಡಿ ಕೊಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಕೋಳಿ, ಕುರಿಗಳ ಫಾರಂ ಮಾಡುವವರಿಗೆ ಎಲ್ಲರಿಗೂ ನೀಡಲು ಬರುವುದಿಲ್ಲ. ದನಗಳನ್ನು ಸಾಕಲಿಕ್ಕೆ, ಕರುಗಳನ್ನು ಮಾಡಲಿಕ್ಕೆ ಇದಕ್ಕೆಲ್ಲಾ ಕೊಡಲಿಕ್ಕಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಗ್ರಿಕಲ್ಚರ್ ಅಲೈಡ್ ಆಕ್ಟಿವಿಟಿ ಎಂದು ಮಾಡಬೇಕು. ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಕೃಷಿ ಸಾಲವೆಂದು ಕೊಟ್ಟಿದ್ದಾರೆ.

ಶ್ರೀ ಡಿ.ಎನ್. ಜೀವರಾಜ್ : ರಬ್ಬರ್ ಬೆಳೆಗಾರರ ಸಾಲಕ್ಕೂ ಕೊಡಬೇಕು.

ಶ್ರೀ ಸಿದ್ದರಾಮಯ್ಯ : ರೈತರಿಗೆ ರಬ್ಬರ್‌ಸಾಲ, ಮತ್ತೊಂದು ಎಂದು ಬೇಕಾದಷ್ಟು ರೀತಿಯ ಸಾಲಗಳು ಇವೆ. ಒಂದು ಸಾಲವಿದೆಯೇ, ಬೇಕಾದಷ್ಟು ಬರುತ್ತವೆ. ದನದ ಕೊಟ್ಟಿಗೆಗೆ, ಅವರು ವಾಸ ಮಾಡಲಿಕ್ಕೆ, ಇದಕ್ಕೆಲ್ಲಾ ಕೊಡಿ ಎಂದರೆ ಹೇಗೆ? There will be no end to this. ಅದರಿಂದ ನಾವು ನೋಡುತ್ತೇವೆ. ಸುಮ್ಮನೆ ನಾವು ಸರ್ಕಾರದಿಂದ ಕಮಿಟ್ ಮಾಡಲಿಕ್ಕಾಗುವುದಿಲ್ಲ, 450 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದೇವೆ, ಇದಲ್ಲದೆ ಮತ್ತೆ 200 ಕೋಟಿ ರೂಪಾಯಿಗಳ ಅಡಿಶನಲಿಟಿ ಇದೆ. ಇದರಿಂದ ಸರ್ಕಾರಕ್ಕೆ ಬರ್ಡನ್ ಆಗುತ್ತದೆ. ಅದನ್ನು ನೋಡಿ ಇಷ್ಟು ನಾವು ಈ ಬಗ್ಗೆ ವಿಚಾರ ಮಾಡುತ್ತೇವೆ. ನಮ್ಮ ಸಮ್ಮಿಶ್ರ ಸರ್ಕಾರ ರೈತರ ಬಗ್ಗೆ ಇಷ್ಟೊಂದು ಕಳಕಳಿ ಇಟ್ಟುಕೊಂಡು ಇಷ್ಟೆಲ್ಲಾ ಮಾಡುತ್ತಿರುವಾಗ ಮತ್ತೆ ಅದನ್ನು ಮಾಡಿ, ಇದನ್ನು ಮಾಡಿ, ಎಂದರೆ ಹೇಗೆ? ನಾವು ನಮ್ಮ ಸಂಪನ್ಮೂಲಗಳ ಇತಿಮಿತಿ ನೋಡಿಕೊಂಡು ಎಷ್ಟು ಮಾಡಲಿಕ್ಕೆ ಸಾಧ್ಯವಾಗುತ್ತದೆಯೋ ಅಷ್ಟನ್ನು ಮಾಡಿದ್ದೇವೆ. ಮುಂದೆ ನಮ್ಮ ಸಂಪನ್ಮೂಲಗಳು ಹೆಚ್ಚಾದರೆ ಅದನ್ನು ಕೂಡ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಈ ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಲೋಕೋಪಯೋಗಿ ಸಚಿವರು ಐದು ನಿಮಿಷ ಮಾತನಾಡಲಿ.

ಶ್ರೀ ಬಿ. ನಾಗರಾಜಶೆಟ್ಟಿ : ರೈತರ ಕೃಷಿ ಉತ್ಪನ್ನಗಳ ಮೇಲೆ ಬಡ್ಡಿ ಮನ್ನಾ ಮಾಡುವ ವಿಚಾರದಲ್ಲಿ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಿದ್ದರಾಮಯ್ಯನವರಿಗೆ ಒಂದು ಕ್ಲಾರಿಫಿಕೇಷನ್, ನೇತ್ರಾವತಿ ನದಿಯ ತಿರುವಿನ ಸರ್ವೆ ಕೆಲಸಕ್ಕೆ 12 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ಅದು ಅಡಿಶನಲ್ ಬಜೆಟ್‌ನಲ್ಲಿ ಸೇರಿಲ್ಲ.

ಅಧ್ಯಕ್ಷರು : ಬ್ರೀಫ್ ಆಗಿ ಹೇಳಿ ಬೇಗ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದರ ಬಗ್ಗೆ ಎಲ್ಲರೂ ಕುಳಿತು ಚರ್ಚೆಯನ್ನು ಮಾಡಲಾಗಿದೆ. ಪುನಃ ಪುನಃ ನೇತ್ರಾವತಿ ಎಂದು ಹೇಳಬೇಡಿ.

ಅಧ್ಯಕ್ಷರು : ಈಗ ಲೋಕೋಪಯೋಗಿ ಸಚಿವರು ಬೇಡಿಕೆ ಮೇಲೆ ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ : ಶ್ರೀರಾಮರೆಡ್ಡಿಯವರೇ, ನೇತ್ರಾವತಿ ನದಿಯ ತಿರುವಿನ ಸರ್ವೆ ಕೆಲಸಕ್ಕೆ ನಾವು ಪ್ರೊವೈಡ್ ಮಾಡಿದ್ದೇವೆ.

ಒಬ್ಬರು ಮಾನ್ಯ ಸದಸ್ಯರು : ನಾನು ಮಾತನಾಡಬೇಕಾದರೆ ಒಂದು ಪ್ರಮುಖವಾದ ವಿಷಯ.

(ಗೊಂದಲ)

ಅಧ್ಯಕ್ಷರು : ಸಮಯವಿಲ್ಲ....

ಶ್ರೀ ಬಿ. ನಾಗರಾಜಶೆಟ್ಟಿ : ಕಳೆದ ವರ್ಷ ಗೋಡಂಬಿ ಮೇಲೆ ಇರಲಿಲ್ಲ, ನಮ್ಮ ರಾಜ್ಯದಲ್ಲಿ ಈ ವರ್ಷ ಶೇಕಡ ನಾಲ್ಕರಷ್ಟು ಗೋಡಂಬಿ ಮೇಲೆ ವಿಧಿಸಿದ್ದೀರಿ. ಗೋಡಂಬಿ ಮೇಲೆ ನಮ್ಮ ದೇಶದಲ್ಲಿ ಹೈಯೆಸ್ಟ್ ಹದಿನೆಂಟೂವರೆ ಪರ್ಸೆಂಟ್ ಇದೆ. ಅದಕ್ಕೆ ನಾಲ್ಕು ಪರ್ಸೆಂಟ್ ಇದೆ. ಈ ಮೂರನ್ನು ವಿತ್‌ಡ್ರಾ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಒಂದು ಪ್ರಮುಖವಾದ ವಿಷಯ, ರೈತರ ಪಂಪುಸೆಟ್ಟುಗಳಿಗೆ ಅಸಲು ಕಟ್ಟದಿದ್ದರೆ ಪ್ರತಿ ತಿಂಗಳು two percent ಬಡ್ಡಿ ಹಾಕುತ್ತಿದ್ದಾರೆ ಅದು ಯಾವುದೋ ಒಂದು ಕಾಲದಲ್ಲಿ [illegible] ಹಾಕಿದ್ದು ಅದನ್ನು ಯಾರೂ ಗಮನಿಸಿಲ್ಲ. ನಾವು ಬರುವುದಕ್ಕೆ ಮುಂಚೆ ಇವರ ಬಗ್ಗೆ ಚರ್ಚೆಯಾಯಿತು. ದಯಮಾಡಿ ವರ್ಷಕ್ಕೆ ಒಮ್ಮೆ ನಾಮಿನಲ್ ಆಗಿ ಏನಾದರೂ ಒಂದು ಹಾಕಿ. 6 percent ಬಡ್ಡಿಯನ್ನು ನಾವು ಕೊಡುತ್ತಿದ್ದೇವೆ. ಅಂಥದ್ದರಲ್ಲಿ two percent ಎಂದರೆ 24 percent ಆಯಿತು ರೈತರ ಪಂಪುಸೆಟ್ಟುಗಳಿಗೆ.

ಅಧ್ಯಕ್ಷರು : ಆಯಿತು. ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಮಾತನಾಡಿ. ಉಳಿದವರು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಇಲಾಖೆಯ ಸಚಿವರು : ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು : ಮಾನ್ಯ ಲೋಕೋಪಯೋಗಿ ಸಚಿವರು ದಯಮಾಡಿ ಮಾತನಾಡಿ. ನಾಗರಾಜಶೆಟ್ಟಿಯವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ನಾಗರಾಜಶೆಟ್ಟಿ : ಕೊಕ್ಕೋ ಬೀನ್ಸ್‌ಗೆ, ಗೋಡಂಬಿ ಮತ್ತು ಅಡಿಕೆಗೆ ಹಾಕಿರುವ ಟ್ಯಾಕ್ಸ್‌ನ್ನು withdraw ಮಾಡಬೇಕು. ಈ ವರ್ಷ ಹೊಸದಾಗಿ ಹಾಕಿದ್ದಾರೆ. ಕೊಕ್ಕೊಬೀನ್ಸ್‌ಗೆ ನಾಲ್ಕು ಪರ್‌ಸೆಂಟ್ ಹಾಕಿದ್ದಾರೆ ಈ ವರ್ಷ. ಇಷ್ಟರವರೆಗೆ ಇರಲಿಲ್ಲ. ಇದು ನಮ್ಮ ರೈತರ ಉತ್ಪತ್ತಿ ನಾಲ್ಕು ಪರ್‌ಸೆಂಟ್ ಹಾಕಿದ್ದಾರೆ. ಅದನ್ನು withdraw ಮಾಡಬೇಕು. ಮತ್ತು ಗೋಡಂಬಿಗೆ ಹದಿನೆಂಟೂವರೆ ಪರ್‌ಸೆಂಟ್ ಇಡೀ ರಾಷ್ಟ್ರದಲ್ಲೇ ಹೈಯಸ್ಟ್ ಇದೆ. ಅದೆ ರೀತಿ ಅಡಿಕೆಗೆ ನಾಲ್ಕು ಪರ್‌ಸೆಂಟ್ ಇದೆ, ರೈತರು ಬಹಳ ಕಷ್ಟದಲ್ಲಿದ್ದೇವೆ. ಆ ಮೂರನ್ನೂ withdraw ಮಾಡಬೇಕು ಸಾರ್.

Mr. Siddaramaiah : I will take it up before the Empowered Committee.

ಶ್ರೀ ಹೆಚ್.ಡಿ. ರೇವಣ್ಣ : (ಲೋಕೋಪಯೋಗಿ ಹಾಗೂ ಇಂಧನ ಸಚಿವರು) ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದಂಥ ಮಾನ್ಯ ಗೋವಿಂದ ಕಾರಜೋಳರವರು, ಅರಗ ಜ್ಞಾನೇಂದ್ರರವರು, ನಾಗಮಣಿ ನಾಗೇಗೌಡರವರು ಮತ್ತು ಇತರೆ ಹಿರಿಯ ಸದಸ್ಯರುಗಳು ವಿದ್ಯುತ್ ಉತ್ಪಾದನೆ, ಪ್ರಸರಣ, ವಿತರಣೆ ಬಗ್ಗೆ ಮಾತನಾಡಿದ್ದಾರೆ. ಅದಕ್ಕೆ ಕೆಳಕಂಡ ಉತ್ತರವನ್ನು ಕೊಡಲು ಬಯಸುತ್ತಿದ್ದೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆಲಮಟ್ಟಿ ಯೋಜನೆಯಲ್ಲಿ 220 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್‌ನ್ನು ಈಗಾಗಲೇ ಯೋಜನೆಯಲ್ಲಿ ಮುಂದಿನ 20 ದಿನಗಳಲ್ಲಿ ಉತ್ಪಾದಿಸಲಿದ್ದು ಇನ್ನು 55 ಮೆಗಾ ವ್ಯಾಟ್‌ನ್ನು ಸುಮಾರು 675 ಕೋಟಿ ರೂಪಾಯಿ ವೆಚ್ಚದಲ್ಲಿ ಪೂರ್ಣಗೊಳಿಸಿದ್ದೇವೆ. ಇದೇ ರೀತಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಮೂರು ಹೊಸ ವಿದ್ಯುತ್ ಉತ್ಪಾದನೆ ಯೋಜನೆಗಳನ್ನು ಸ್ಥಾಪಿಸಲು ನಿರ್ಧಾರ ಮಾಡಲಾಗಿದೆ. ಒಂದು ಬಳ್ಳಾರಿ ಘಟಕ, 500 ಮೆಗಾವ್ಯಾಟ್, ಸುಮಾರು 1900 ಕೋಟಿ, ಇದೇ ರೀತಿ ರಾಯಚೂರು 8ನೇ ಘಟಕ 210 ಮೆಗಾವ್ಯಾಟ್, ಸುಮಾರು 674 ಕೋಟಿ ರೂಪಾಯಿ, ಇದೆ ರೀತಿ ಮೂರನೇಯದ್ದು ಗುಂಡ್ಯಾ ಜಲ ವಿದ್ಯುತ್ 400 ಮೆಗಾ ವ್ಯಾಟ್, ಸುಮಾರು 850 ಕೋಟಿ ರೂಪಾಯಿ, ಇದಲ್ಲದೆ ವರಾಹಿಯಲ್ಲಿ ಸುಮಾರು 300 ಕೋಟಿ ವೆಚ್ಚದಲ್ಲಿ 230 ಮೆಗಾವ್ಯಾಟ್ ಯೋಜನೆಯ ಪ್ರಾರಂಭದ ಹಂತದಲ್ಲಿದೆ. ಇದಲ್ಲದೆ ಬಳ್ಳಾರಿಯಲ್ಲಿ 500 ಮೆಗಾವ್ಯಾಟ್ ವಿದ್ಯುತ್ ಯೋಜನೆ ಡಿಸೆಂಬರ್ 2003ರಲ್ಲಿ ಪ್ರಾರಂಭವಾಗಿದ್ದರೂ ಆ ಕೆಲಸ ಕುಂಠಿತವಾಗಿದೆ. ಈಗ ನಮ್ಮ ಸರ್ಕಾರ ಬಂದ ಮೇಲೆ ತೀವ್ರಗತಿಯಲ್ಲಿ ಈ ಕೆಲಸ ಮಾಡಿ ಏನು ನಿಗದಿತ ಸಮಯವಿತ್ತೊ ಅದಕ್ಕಿಂತ ಎರಡು ತಿಂಗಳು ಮುಂಚೆಯೇ ಈ ಕೆಲಸವನ್ನು ಮಾಡಬೇಕು ಎಂಬ ಉದ್ದೇಶವಿದೆ. 2006ರಲ್ಲಿ 500 ಮೆಗಾವ್ಯಾಟ್ ವಿದ್ಯುತ್‌ನ್ನು ಜಾಲಕ್ಕೆ ಲಭ್ಯಮಾಡುವಂಥ ಅವಕಾಶವನ್ನೂ ಸಹ ಈಗಾಗಲೇ ಮಾಡಿದ್ದೇವೆ. ಇದಲ್ಲದೆ ಬಿಡದಿ ಯೋಜನೆಯ ಪ್ರಾರಂಭ ಸ್ವಲ್ಪ ತಡವಾಗಿದ್ದರೂ ಸಹ ಈಗಾಗಲೇ ಓ.ಎನ್.ಜಿ.ಸಿ. ಮಂಜೂರಾತಿ ದೊರೆತಿರುವುದರಿಂದ ಮುಂದಿನ 6 ತಿಂಗಳ ಒಳಗಾಗಿ ಮೂರೂವರೆ ವರ್ಷದಲ್ಲಿ 1400 ಮೆಗಾವ್ಯಾಟ್ ವಿದ್ಯುತ್ ಯೋಜನೆಯನ್ನು 3800 ಕೋಟಿ ರೂಪಾಯಿ ವೆಚ್ಚದಲ್ಲಿ ಬೆಂಗಳೂರು ಸಮೀಪದ ನಗರದಲ್ಲಿ ಪ್ರಾರಂಭ ಮಾಡಬೇಕೆಂದು ಉದ್ದೇಶವಿದೆ. ಈ ವರ್ಷ ಉತ್ತಮ ಮಳೆಯಾಗಿರುವುದರಿಂದ ಲಿಂಗನಮಕ್ಕಿ ಮತ್ತು ಸೂಪಾ ಜಲಾಶಯದಲ್ಲಿ ಕಳೆದ ವರ್ಷಕ್ಕಿಂತ ಸುಮಾರು 37 ಟಿ.ಎಂ.ಸಿ. ನೀರು ಜಾಸ್ತಿ ಇದೆ ಮತ್ತು ಒಳಹರಿವು ಜಾಸ್ತಿ ಇದೆ. ಇದರಿಂದ ಸುಮಾರು ಈ ವರ್ಷ 1330 ಮಿಲಿಯನ್ ಯೂನಿಟ್

ಹೆಚ್ಚು ವಿದ್ಯುತ್ ಉತ್ಪಾದನೆಯನ್ನು ನಾವು ಮಾಡಿದ್ದೇವೆ. ಇದರಿಂದ ರಾಜ್ಯದ ವಿದ್ಯುತ್ ಪೂರೈಕೆ ವೆಚ್ಚದಲ್ಲೂ ಸಹ ಕಡಿತ ಉಂಟಾಗಿದೆ. ಇದಲ್ಲದೆ ಜುಲೈ ತಿಂಗಳಿನಲ್ಲಿ ಈ ವರ್ಷ 5526 ಮಿಲಿಯನ್ ಯೂನಿಟ್ ವಿದ್ಯುತ್‌ನ್ನು ಉತ್ಪಾದಿಸಲು ಯೋಚಿಸಿದ್ದು ಇದು ಕಳೆದ ವರ್ಷದ ಉತ್ಪಾದನೆಗಿಂತ ನೂರು ಮಿಲಿಯನ್ ಯೂನಿಟ್ ಹೆಚ್ಚಾಗಿದೆ. ಮಾನ್ಯ ಆರಗ ಜ್ಞಾನೇಂದ್ರರವರು ಹೇಳುವಂಥ ಸಂದರ್ಭದಲ್ಲಿ ರಾಯಚೂರು ಶಾಖೋತ್ಪನ್ನ ಘಟಕದಲ್ಲಿ ಇದರ ವಿದ್ಯುತ್ ಉತ್ಪಾದನೆಯಲ್ಲಿ ಕಡಿಮೆ ಇದೆ ಎಂದು ಹೇಳುತ್ತಿದ್ದರು. ನಮ್ಮ ರಾಯಚೂರಿನ ಶಾಖೋತ್ಪನ್ನದ 6ನೇ ಘಟಕ ಸತತವಾಗಿ 229 ದಿನ ಕೆಲಸ ಮಾಡಿದೆ, ಇದು ರಾಷ್ಟ್ರದಲ್ಲೇ ಒಂದು ದಾಖಲೆ ಮಾಡಿದೆಯೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದಕ್ಕೆ ರಾಷ್ಟ್ರಪತಿಗಳು ಅವಾರ್ಡ್‌ನ್ನು ಸಹ ಘೋಷಣೆ ಮಾಡಿದ್ದಾರೆ. ಇದಲ್ಲದೆಯೇ ಕಲ್ಲಿದ್ದಲ್ಲಿನ ಬಗ್ಗೆ 2003–04ರಲ್ಲಿ ಆಡಿಟ್ ವರದಿಯಲ್ಲಿ ಒಂದು ರಿಮಾರ್ಕ್ಸ್ ಇದೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿಲ್ಲವೆಂದು ಮಾನ್ಯ ಜ್ಞಾನೇಂದ್ರವರು ಸಭೆಯಲ್ಲಿ ತಿಳಿಸಿದರು. ನಮಗೆ ಸಿ.ಎ.ಜಿ.ಯವರ ಆಡಿಟ್ ವರದಿ ಬಂದಿರುವುದು ಮತ್ತು ಅದನ್ನು ವಿಧಾನಸಭೆಯ ಸಮಿತಿಯ ಮುಂದೆ ಅದನ್ನಿಟ್ಟು ನಮಗೆ ಕಳಿಸಿರುವುದು 12.7.2005ರಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ 45 ದಿವಸ ಟೈಮ್ ಬೇಕಾಗುತ್ತದೆ. ಇದಕ್ಕೆ ಈಗಾಗಲೇ ಕ್ರಮ ಕೈಗೊಂಡು ಇಲಾಖೆಯವರು ಸರಿಯಾದ ಉತ್ತರವನ್ನು ಸಹ ಒದಗಿಸಲಾಗುವುದು ಎಂದು ಈ ಸಂದರ್ಭದಲ್ಲಿ ತಿಳಿಸಿ, ಇದಲ್ಲದೆಯೇ ಕರ್ನಾಟಕದಲ್ಲಿ ನವೀಕರಿಸಬಹುದಾದ ಇಂಧನ ಮೂಲಕ ಕಿರು ವಿದ್ಯುತ್, ಜಲವಿದ್ಯುತ್, ಗಾಳಿ ಯಂತ್ರದಲ್ಲಿ, ಬಯೊಗ್ಯಾಸ್ ಮೂಲಕ ಸುಮಾರು 682 ಮೆಗಾವ್ಯಾಟ್ ವಿದ್ಯುತ್‌ನ್ನು 132 ಘಟಕಗಳಿಂದ ಉತ್ಪಾದಿಸಲಾಗುತ್ತಿದೆ. ಅದಲ್ಲದೆಯೇ ಸುಮಾರು 1700 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯು 178 ಘಟಕಗಳಲ್ಲಿ ಜಾರಿಯಲ್ಲಿದೆ. ಇದೇ ರೀತಿ ಇದು ಕೆ.ಪಿ.ಸಿ. ಯಲ್ಲಿ ಒಂದು ಭಾಗವಾದರೆ ಕೆ.ಪಿ.ಟಿ.ಸಿ.ಎಲ್. ಬರುವುದಕ್ಕಿಂತ ಮೊದಲು 1999–2000ದಲ್ಲಿ ಕೆ.ಇ.ಬಿ. ಇತ್ತು. ಇವತ್ತು ಅದಾದ ಮೇಲೆ 1999–2000ರಲ್ಲಿ ಕೆ.ಪಿ.ಟಿ.ಎಲ್. ವಿಭಜನೆಯಾಗಿ ನಾಲ್ಕು ಘಟಕಗಳಾಗಿ, ಒಂದು ಬೆಸ್ಕಾಂ ಇರಬಹುದು, ಮೆಸ್ಕಾಂ, ಎಸ್ಕಾಂ, ಜೆಸ್ಕಾಂ ಇರಬಹುದು, ಈ ನಾಲ್ಕು ಕಂಪನಿಗಳಲ್ಲಿ ಹುಬ್ಬಳ್ಳಿ ಕಂಪನಿಯೊಂದು ಬಿಟ್ಟರೆ ಬಾಕಿಯದರಲ್ಲಿ ಭಾರತೀಯ ಆಡಳಿತ ಸೇವಾ ಅಧಿಕಾರಿಗಳು ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ 2002–2005ರವರೆಗೆ ವಿದ್ಯುತ್ ನಷ್ಟ ಈ ಕೆಳಕಂಡಂತೆ ಇದೆ. 2001–2002ರಲ್ಲಿ 35.89 ಪರ್‌ಸೆಂಟ್, 2002–2003ರಲ್ಲಿ 31.95 ಪರ್‌ಸೆಂಟ್, 2003–04ರಲ್ಲಿ 30.88 ಪರ್‌ಸೆಂಟ್, ಈಗ 2004–05ರಲ್ಲಿ 29.27 ಪರ್‌ಸೆಂಟ್‌ನಷ್ಟು ಇದೆ. ಕಳೆದ ನಾಲ್ಕೈದು ವರ್ಷಗಳಿಗೆ ಹೋಲಿಸಿದರೆ ನಾವು ಸುಮಾರು ಎರಡು ಪರ್‌ಸೆಂಟ್ distribution loss ಅನ್ನು ಕಡಿಮೆ ಮಾಡಿದ್ದೇವೆ. ಇದೇ ರೀತಿ ಇವತ್ತು ಬೆಂಗಳೂರಿನಲ್ಲಿ ನಮ್ಮ ಗ್ರಾಹಕರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಐದನೆಯ ಕಂಪನಿಯಾದ ಚಾಮುಂಡೇಶ್ವರಿ ಕಂಪನಿಯನ್ನು ಪ್ರಾರಂಭ ಮಾಡಿದ್ದೇವೆ. ವಿದ್ಯುತ್ ಸುಧಾರಣೆ ಮತ್ತು ವ್ಯವಸ್ಥೆಯ ಬಗ್ಗೆ ಪ್ರತಿ ವರ್ಷ ಬಾಕೀ ನಾವು 35 ಸ್ಟೇಷನ್‌ಗಳನ್ನು ಮಾಡುವ ಅವಕಾಶ ಒಂದು ವರ್ಷಕ್ಕೆ ಇತ್ತು. ನಮ್ಮ ಸರ್ಕಾರ ಬಂದಮೇಲೆ ಉತ್ತಮ ಓಲ್ಟೇಜ್ ಮತ್ತು ಸಮರ್ಪಕ ವಿದ್ಯುತ್ ಕೊಡಬೇಕು ಎಂಬ ಉದ್ದೇಶದಿಂದ ಇವತ್ತು ನೂರು ಹೊಸ ಸ್ಟೇಷನ್‌ಗಳು ಮತ್ತು ನೂರು ಹಳೆಯ ಸ್ಟೇಷನ್‌ಗಳನ್ನು ಅಪ್‌ಗ್ರೇಡೇಷನ್ ಮಾಡುವ ಕಾರ್ಯಕ್ರಮವನ್ನು ಈ ವರ್ಷ 2004–05ರಲ್ಲಿ ನಾವು ಮಾಡಿದ್ದೇವೆ. 2001ನೇ ಸಾಲಿನಲ್ಲಿ ಕೆ.ಇ.ಬಿ.

ಇದ್ದಂಥ ಕಾಲದಲ್ಲಿ ಸುಮಾರು ಒಂದು ವರ್ಷಕ್ಕೆ 750 ಕೋಟಿ ರೂಪಾಯಿ ಹಣ ಖರ್ಚು ಮಾಡುತ್ತಿದ್ದರು. ಈಗ ನಮ್ಮ ಕಂಪನಿಗಳಾದ ಮೇಲೆ ಏನೂ ಕೆಲಸ ಮಾಡಿಲ್ಲ ಎನ್ನುವ ಒಂದು ಆಪಾದನೆಯನ್ನು ಮಾನ್ಯ ಸದಸ್ಯರುಗಳು ಮಾಡಿದರು. ಕಂಪನಿಗಳು ಬಂದಮೇಲೆ ಸುಮಾರು ಒಂದು ವರ್ಷಕ್ಕೆ 2002ರಲ್ಲಿ 1050 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಇದೇರೀತಿಯಲ್ಲಿ 2004–05ರಲ್ಲಿ 1250 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಒಂದಕ್ಕೆ ಎರಡು ಪಟ್ಟು ಹಣ ಖರ್ಚಾಗಿದೆ. ಏಕೆಂದರೆ, ಕಂಪನಿಗಳು ಬಂದಮೇಲೆ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಸಹ ಮಾನ್ಯ ಸದಸ್ಯರುಗಳ ಗಮನಕ್ಕೆ ಇವತ್ತು ತರಬೇಕಾಗುತ್ತದೆ. ಇದಲ್ಲದೆ, 2005–06ನೇ ಸಾಲಿನಲ್ಲಿ ಸುಮಾರು 2350 ಕೋಟಿ ರೂಪಾಯಿ ವಿನಿಯೋಗ ಮಾಡಬೇಕೆಂದು ಯೋಜನೆಯನ್ನು ಕೂಡ ನಾವು ತಯಾರು ಮಾಡಿದ್ದೇವೆ. ಇದಲ್ಲದೆ, ಕೇಂದ್ರ ಸರ್ಕಾರದ ರಾಜೀವಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ 2004–05ರಲ್ಲಿ ಈ ಸ್ಕೀಮ್‌ನ್ನು ಅನೌನ್ಸ್ ಮಾಡಿದ್ದರು. ಆದರೆ, ಕೇಂದ್ರ ಸರ್ಕಾರದಿಂದ ಹಣ ಬರಲಿಕ್ಕೆ ಎರಡು ತಿಂಗಳು ವಿಳಂಬವಾಗಿದೆ. ನಾವು ಕೇವಲ 2 ತಿಂಗಳಲ್ಲಿ 974 ಕೋಟಿ ರೂಪಾಯಿಗಳ ಯೋಜನೆಯನ್ನು ಇಲಾಖೆಯ ಅಧಿಕಾರಿಗಳು ಮತ್ತು ಐದೂ ಕಂಪನಿಗಳು ತಯಾರು ಮಾಡಿ ಮೊನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಆರ್.ಇ.ಸಿ. ಚೇರ್‌ಮನ್ ಅವರು ಒಂದು ಸಿಗ್ನೇಚರ್ ಹಾಕಿದ್ದು ಅದನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಇದಕ್ಕೆ ನೂರಕ್ಕೆ ತೊಂಭತ್ತು ಪರ್ಸೆಂಟ್ ಹಣ ಕೇಂದ್ರ ಸರ್ಕಾರದ ಸಬ್ಸಿಡಿ ಹಣ, ಉಳಿದ ಹತ್ತು ಪರ್ಸೆಂಟ್ ಹಣವನ್ನು ಮಾತ್ರ ರಾಜ್ಯ ಸರ್ಕಾರ ಕೊಡಬೇಕಾಗುತ್ತದೆ. ನಾವು ಅಧಿಕಾರಕ್ಕೆ ಬಂದ ಮೇಲೆ ಇಲಾಖೆಯಲ್ಲಿ ಏನು ಮಾಡಿದ್ದೇವೆಂಬುದನ್ನು ಹೇಳುತ್ತಿದ್ದೇನೆ. ಏಕೆಂದರೆ 4 ಕಂಪನಿಗಳು ಏನೂ ಕೆಲಸ ಮಾಡುತ್ತಿಲ್ಲ ಎಂದು ಮಾನ್ಯ ಸದಸ್ಯರುಗಳು ಹೇಳಿದ್ದಕ್ಕೆ ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಇದಲ್ಲದ ಹತ್ತು ಮತ್ತು ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ಕೆಪಿಟಿಸಿಎಲ್‌ನಲ್ಲಿ ಸುಮಾರು 2002 ರಿಂದ 2012ರ ರವರೆಗೆ ವಿದ್ಯುತ್ ಸುಧಾರಣೆ ಮಾಡುವುದಕ್ಕೋಸ್ಕರ ಸುಮಾರು 13,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆನ್ನುವ ಉದ್ದೇಶವನ್ನೂ ಕೂಡ ಕೆಪಿಟಿಸಿಎಲ್ ಹಾಗೂ 4 ಕಂಪನಿಗಳು ಹೊಂದಿವೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ಇದಲ್ಲದೆ 2002–03ರಲ್ಲಿ ಎಪಿಟಿಪಿಆರ್ ಸ್ಕೀಂ 2003ರ ಕೊನೆಯಲ್ಲಿ ಇದು ಪ್ರಾರಂಭವಾಗಿದೆ. ಕೆಲವು ಕಾರಣದಿಂದ ಮೊದಲನೇ ವರ್ಷ 230 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಾವು ಬಂದ ಮೇಲೆ ಸುಮಾರು 650 ಕೋಟಿ ರೂ. ಹಣವನ್ನು ವಿನಿಯೋಗ ಮಾಡಿದ್ದೇವೆ, ಮತ್ತೆ ಈ ವರ್ಷ 25 ಕೋಟಿ ರೂ. ಹಣವನ್ನು ಖರ್ಚು ಮಾಡುತ್ತಿದ್ದೇವೆ. ಏಕೆಂದರೆ ಈ ಸ್ಕೀಂನಲ್ಲಿ ಏನೂ ಕೆಲಸವೇ ಆಗಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದರು. ಅದಕ್ಕೆ ಈ ವಿಷಯವನ್ನು ಈ ಸಂದರ್ಭದಲ್ಲಿ ಸದನದ ಮುಂದೆ ತಿಳಿಸುತ್ತಿದ್ದೇನೆ. ಇದಲ್ಲದೆ, ಇವತ್ತು ರಾಜ್ಯದಲ್ಲಿ ಎರಡು ಲಕ್ಷದ ಹದಿನೈದು ಸಾವಿರ ಟ್ರಾನ್ಸ್‌ಫಾರ್ಮ್‌ಗಳಿವೆ ಮಾನ್ಯ ಗೋವಿಂದ ಕಾರ್ಜೋಳ ಹಾಗೂ ಇತರೆ ಗೌರವಾನ್ವಿತ ಸದಸ್ಯರುಗಳು ಈ ಟ್ರಾನ್ಸ್‌ಫಾರ್ಮ್‌ರ್‌ಗಳು ಇವತ್ತು ಎಲ್ಲೂ ಇಲ್ಲ, ಪೂರ್ತಿಯಾಗುತ್ತಿಲ್ಲವೆಂದೂ ಕೂಡ ಹೇಳಿದರು. ಏಕೆಂದರೆ ನಾವು ಬರುವುದಕ್ಕಿಂತ ಮುಂಚೆ 21 ಪರ್ಸೆಂಟ್ ಲಾಸ್ ಇದ್ದದ್ದು ಇವತ್ತು ನಾವು ಬಂದ ಮೇಲೆ 16 ಪರ್ಸೆಂಟ್‌ಗೆ ಇಳಿದಿದೆ. ಅದಲ್ಲದೆ ಬೆಂಗಳೂರಿನ ಬೆಸ್ಕಾಂನಲ್ಲಿ ಒಂದೇ ಒಂದು ಟ್ರಾನ್ಸ್‌ಫಾರ್ಮ್‌ರ್ ಫೇಲ್ಯೂರ್ ಆಗಿಲ್ಲ ಬೆಂಗಳೂರು ಕಂಪನಿಯಲ್ಲಿ ಇವತ್ತು 13

ಪರ್ಸೆಂಟ್ ಇದೆ. ಇದೇ ರೀತಿ ರಾಜ್ಯದಲ್ಲಿ 16 ಪರ್ಸೆಂಟ್ ಇದೆ. ಹಿಂದೆ 21 ಪರ್ಸೆಂಟ್ ಟ್ರಾನ್ಸ್‌ಫಾರ್ಮರ್‌ಲಾಸ್ ಏನಿತ್ತು ಕಳೆದ ಐದು ವರ್ಷದಲ್ಲಿ 5 ಪರ್ಸೆಂಟ್ ಕಡಿಮೆ ಮಾಡಲಾಗಿದೆ. ಅದಲ್ಲದೆ ಇವತ್ತು ಕೆಲವು ಕಡೆ ಟ್ರಾನ್ಸ್‌ಫಾರ್ಮರ್‌ಗಳು ಹೋಗುತ್ತದೆ ಎನ್ನುವ ಆಪಾದನೆಯನ್ನೂ ಕೂಡ ಮಾನ್ಯ ಸದಸ್ಯರುಗಳು ಮಾಡಿದ್ದರು. ಉದಾಹರಣೆಗೆ, 25 ಕೆವಿ ಟ್ರಾನ್ಸ್‌ಫಾರ್ಮ್ ಇದ್ದರೆ ಅದಕ್ಕೆ 5 ಹೆಚ್‌ಪಿಯದು ಐದೇ ಮೋಟರ್ ಹಾಕಬೇಕಾಗುತ್ತದೆ, ಕೆಲವು ಕಡೆ 15, 20 ಮೋಟರ್‌ಗಳನ್ನು ಹಾಕುತ್ತಾರೆ, ಇದು ಮಾನ್ಯ ಮಾಧುಸ್ವಾಮಿಯವರಿಗೆ ಗೊತ್ತಿದೆ, ಆದರೆ ನಾವೇನು ನಿರ್ಬಂಧ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ವಾಟಾಳ್‌ನಾಗರಾಜ್ ಸಾಹೇಬರಿಗೆ ಇದು ಗೊತ್ತಿದೆ, ನಾವು ಹೇಳಿದರೆ ನೀವು ತಪ್ಪು ತಿಳಿದುಕೊಳ್ಳುತ್ತೀರಿ. ಈಗ 25 ಕೆ.ವಿ. ಟ್ರಾನ್ಸ್‌ಫಾರ್ಮ್‌ಗೆ 15 ಮೋಟರ್ ಹಾಕಿದರೆ ಅದನ್ನು ಎಷ್ಟು ಸಾರಿ ರಿಪೇರಿ ಮಾಡಿದರೂ ಅದು ಫೇಲ್ಯೂರ್ ಆಗುವುದೇ. ಇವತ್ತು ನಾವು ಬಂದ ಮೇಲೆ ಸುಮಾರು 15000 ಹೊಸ ಟ್ರಾನ್ಸ್‌ಫಾರ್ಮ್‌ಗಳನ್ನು ವಿತರಣೆ ಮಾಡಿದ್ದೇವೆ, ಅದಲ್ಲದೆ ಇವತ್ತು ರಾಜ್ಯದಲ್ಲಿ 37 ಕಡೆ ಟ್ರಾನ್ಸ್‌ಫಾರ್ಮ್‌ಗಳನ್ನು ರಿಪೇರಿ ಮಾಡುವಂಥ ಕೇಂದ್ರಗಳಿವೆ. ಬೆಸ್ಕಾಂನಲ್ಲಿ 11, ಮೆಸ್ಕಾಂನಲ್ಲಿ 4, ಎಸ್ಕಾಂನಲ್ಲಿ 10, ಜೆಸ್ಕಾಂನಲ್ಲಿ 7, ಮತ್ತು ಚಾಮುಂಡೇಶ್ವರಿಯಲ್ಲಿ 5 ಇದೆ. ಇವತ್ತು ವಿದ್ಯುತ್ ಅನ್ನು ಕೆಲವು ಕಡೆ ಸರಿಯಾಗಿ 6 ಗಂಟೆ ಕಾಲ ಕೊಡುತ್ತಿಲ್ಲವೆಂದು ಹೇಳಲಾಗುತ್ತಿದೆ. ಇವತ್ತು ಏನಾಗಿದೆ ಎಂದರೆ ಕೆಲವು ಕಡೆ 9 ಗಂಟೆ ತ್ರಿಫೇಸ್ ಮತ್ತು 9 ಗಂಟೆ ಸಿಂಗಲ್ ಫೇಸ್ ವಿದ್ಯುತ್‌ನ್ನು ಪೂರೈಕೆ ಮಾಡುತ್ತಿದ್ದೇವೆ. ಇದಲ್ಲದೆ ಕೆಲವು ಕಡೆ ಇವತ್ತು ವಿದ್ಯುತ್ ಕೊಡುತ್ತೇವೆಂದರೂ ಸುಮಾರು 61 ಸ್ಟೇಷನ್‌ನಲ್ಲಿ ಕೆ.ಆರ್. ಪೇಟೆ ಇರಬಹುದು, ಪಾಂಡವಪುರ ಇರಬಹುದು, ಹೆಚ್‌ಡಿ ಕೋಟೆ ಇರಬಹುದು, ಪಾವಗಡ ಇರಬಹುದು, ಮಧುಗಿರಿ ಇರಬಹುದು, ರಾಂಪುರ ಇರಬಹುದು, ಇಂಡಿ ಇರಬಹುದು, ರಾಯದುರ್ಗವಿರಬಹುದು, ರಾಮದುರ್ಗ ಇರಬಹುದು ಮುಂತಾದ ಸ್ಥಳದಲ್ಲಿ ಇವತ್ತು ನಾವು ಸಮರ್ಪಕವಾಗಿ ವಿದ್ಯುತ್‌ನ್ನು ಕೊಡಲಾಗುತ್ತಿಲ್ಲ. ಏಕೆಂದರೆ, ಹೊರಗಡೆಯಿಂದ ಎಲ್ಲಿಂದಲಾದರೂ ವಿದ್ಯುತ್‌ನ್ನು ನಾವು ತಂದು ಕೊಡುತ್ತೇವೆಂದರೂ ಈ ತಾಲ್ಲೂಕುಗಳಲ್ಲಿ ಸಬ್‌ಸ್ಟೇಷನ್‌ಗಳು ಸರಿಯಾಗಿಲ್ಲ. ಅದಕ್ಕೆ ಅವುಗಳನ್ನು ಸರಿಪಡಿಸುವ ಉದ್ದೇಶದಿಂದ ಇವತ್ತು ಹೊಸದಾಗಿ ಯಾರೂ ವಿದ್ಯುತ್ ಉಪಕೇಂದ್ರಗಳನ್ನು ಅಪ್‌ಗ್ರೇಡೇಷನ್ ಮಾಡುತ್ತಿದ್ದೇವೆ. ಇದಲ್ಲದೆ, ಕುಡಿಯುವ ನೀರಿಗೂ ಕೂಡ ಮೊದಲನೇ ಆದ್ಯತೆಯನ್ನು ಕೊಟ್ಟು ಟ್ರಾನ್ಸ್‌ಫಾರ್ಮ್ ಹಾಕಿ ಆದಷ್ಟು ನಮ್ಮ ಕೈಲಾದಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇವೆ, ಏನಾದರೂ, ಇದ್ದರೆ ಮಾನ್ಯ ಸದಸ್ಯರು ಸಲಹೆಗಳನ್ನು ಕೊಡಬೇಕು. ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ ಇವತ್ತು 7280 ಮೆ.ವ್ಯಾ. ವಿದ್ಯುತ್ ರಾಜ್ಯಕ್ಕೆ ಬೇಕಾಗಿದೆ, ರಾಜ್ಯದಲ್ಲಿರುವ ವಿದ್ಯುತ್ ಬೇಡಿಕೆ ಇರುವುದು 39.900 ದಶಲಕ್ಷ ಯುನಿಟ್‌ಗಳು, ಇವತ್ತು ಪ್ರಸ್ತುತ ನೀಡುತ್ತಿರುವ ವಿದ್ಯುತ್ 35.324 ದಶಲಕ್ಷ ಯುನಿಟ್‌ಗಳು ರಾಜ್ಯದಲ್ಲಿ 2011ರಲ್ಲಿ ವಿದ್ಯುತ್ ಕೊರತೆ ಸುಮಾರು 6280 ಮೆ.ವ್ಯಾ. ಏರಬಹುದೆಂಬ ನಿರೀಕ್ಷೆ ಇದೆ. ಈ ಕೊರತೆಯನ್ನು ನಿವಾರಿಸಲು ಕೆಪಿಟಿಸಿಎಲ್ ವತಿಯಿಂದ 3500 ಮೆ. ವ್ಯಾ. ವಿದ್ಯುತ್ ಅನ್ನು ಉಳಿದ ಖಾಸಗಿ ಮತ್ತು ಕೇಂದ್ರ ಸರ್ಕಾರದ ಘಟಕಗಳಿಂದ ಪಡೆಯುವ ಮೂಲಕ ನಿವಾರಿಸಿಕೊಳ್ಳಬಹುದಾಗಿರುತ್ತದೆ. ಇದಲ್ಲದೆ, 2004–05ರಲ್ಲಿ ವಿದ್ಯುತ್ ನಷ್ಟ ಸುಮಾರು 29 ಪರ್ಸೆಂಟ್ ಇತ್ತು, ಇದರಲ್ಲಿ ಪ್ರಸರಣ ನಷ್ಟ 4.2 ಪರ್ಸೆಂಟ್ ಇದ್ದರೆ ಉಳಿದ 25 ಪರ್ಸೆಂಟ್ ವಿತರಣೆ ನಷ್ಟವಿರುತ್ತದೆ, ವಾಣಿಜ್ಯ ನಷ್ಟವನ್ನು ಹತೋಟಿಗೆ ತರಲು ಪ್ರತಿಯೊಂದು ಎಸ್ಕಾಂನಲ್ಲೂ

ಎಲ್ಲಾ ಸ್ಥಾವರಗಳಿಗೂ ಮೀಟರ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಮತ್ತೆ ಈಗಿರುವ ಸ್ಥಾವರಗಳ ಪೈಕಿ ಸುಮಾರು 88 ಪರ್ಸೆಂಟ್ ಮೀಟರ್‌ಗಳನ್ನು ಈಗಾಗಲೇ ನಾವು ಹಾಕಿದ್ದೇವೆ. ಇನ್ನು 12 ಪರ್ಸೆಂಟ್ ಮೀಟರ್ ಹಾಕಬೇಕಾಗಿದೆ, ಅದಕ್ಕೆ ನಮ್ಮ ಗ್ರಾಹಕರೂ ಕೂಡ ಈ ಸಂದರ್ಭದಲ್ಲಿ ಸಹಕರಿಸಬೇಕೆಂದು ಹೇಳಿ ಅದರ ಜತೆಗೆ ನಾನು ಇವತ್ತು ಲೋಕೋಪಯೋಗಿ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಬೇರೆ ಬೇರೆ ಕಂಪನಿಗಳನ್ನು ಮಾಡಿದ ಮೇಲೆ, ಅವುಗಳ ಮಧ್ಯೆ ಸ್ಪರ್ಧೆ ಮಾಡಿಸುವುದನ್ನು ಬಿಟ್ಟು ಎಲ್ಲಾ ಕಂಪನಿಗಳಿಗೂ ಒಂದೇ ಟ್ಯಾರಿಫ್ ಮಾಡಬೇಕು, ಲಾಭ ಮಾಡುವುದಕ್ಕೆ ನಷ್ಟ ಮಾಡುವುದಕ್ಕೆ ಕ್ರಾಸ್ ಸಬ್ಸಿಡೈಸ್ ಮಾಡಬಾರದು, ಆ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನಷ್ಟ ಮಾಡುವಂಥಾದ್ದು ನಷ್ಟ ಮಾಡಿಕೊಂಡೇ ಹೋಗುವುದು, ಲಾಭ ಮಾಡಿದ್ದನ್ನು ತೆಗೆದು ಮಾಡುವಂಥ ಕಂಪನಿಗಳಿಗೆ ಸೇರಿಸುವುದು ಆಗಬಾರದು. ಅದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏತಕ್ಕೆ ಅದು ತಮ್ಮ ತಲೆಗೆ ಹೋಗುತ್ತಿಲ್ಲವೋ ಗೊತ್ತಿಲ್ಲ ಅಥವಾ ಏತಕ್ಕೆ ಹಗುರವಾಗಿ ತೆಗೆದುಕೊಳ್ಳುತ್ತಿರೋ ಗೊತ್ತಿಲ್ಲ, ರೈತ ಫಲಾನುಭವಿಗಳು ತಮ್ಮ ಲೆಕ್ಕದ ಪ್ರಕಾರ ಸುಮಾರು 12–13 ಲಕ್ಷ ಇದ್ದಾರೆ, ಅವನ ಪಂಪ್‌ಸೆಟ್ಟುಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ 2 ಪರ್ಸೆಂಟ್ ನೀವು ಬಿಲ್ ಮಾಡಿದಾಕ್ಷಣ ಬಡ್ಡಿ ಹಣ ಕಟ್ಟಬೇಕು. ಕೋ ಆಪರೇಟಿವ್ ಲೋನ್‌ಗೆ 6 ಪರ್ಸೆಂಟ್ ಬಡ್ಡಿ ಕೊಡುತ್ತಿರುವ ಈ ಕಾಲದಲ್ಲಿ ವರ್ಷಕ್ಕೊಮ್ಮೆ ಏನಾದರೂ ನಾಮಿನಲ್ ಬಡ್ಡಿ ಹಾಕುವಂತೆ ಮಾಡಿ, ಇಲ್ಲದಿದ್ದರೆ ಇದು ನಾಮಕಾವಸ್ಥೆಯಾಗುತ್ತದೆ, ದೊಡ್ಡಭಾರವಾಗುತ್ತದೆ, ಯಾರು ಪ್ರಾಮಾಣಿಕವಾಗಿ ದುಡ್ಡನ್ನು ಕಟ್ಟುತ್ತಿದ್ದಾರೆ, ಒಂದೆರಡು ತಿಂಗಳು ಲೇಟ್ ಆಗುತ್ತದೆ, ಅವರಿಗೆ 2 ಪರ್ಸೆಂಟ್ ಅಂತ ಮಾಡಿದರೆ 24 ಪರ್ಸೆಂಟ್ ಬಡ್ಡಿ ಬೀಳುತ್ತದೆ ದಯಮಾಡಿ ಅದನ್ನು ತೆಗೆದು ಹಾಕಿ ವರ್ಷಕ್ಕೊಮ್ಮೆ ಹಾಕಿ, ನಾಮಿನಲ್ ಏನಾದರೂ ಹಾಕಿ.

ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ವಿರೋಧಪಕ್ಷದ ನಾಯಕರು, ರೈತರು ಯಾರು ವಿದ್ಯುತ್ ಬಿಲ್ ಕಟ್ಟುವುದಿಲ್ಲ ಅವರಿಗೆ ಎರಡು ಪರ್ಸೆಂಟ್ ಬಡ್ಡಿ ಹಾಕುತ್ತಿದ್ದೀರೆಂದು ಹೇಳಿದರು, ನೂರಕ್ಕೆ ತೊಂಬತ್ತೈದು ಗ್ರಾಹಕರು ವಿದ್ಯುತ್ ಬಿಲ್ ಕಟ್ಟುತ್ತಿದ್ದಾರೆ ಅವರಲ್ಲಿ ಶಿಸ್ತನ್ನು ಕಾಪಾಡಬೇಕೆನ್ನುವ ದೃಷ್ಟಿಯಿಂದ ನಾವು 2 ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಿದ್ದೇವೆಯೇ ಹೊರತು, ಬೇರೆ ಯಾವ ಉದ್ದೇಶದಿಂದ ನಾವು ಹಾಕುತ್ತಿಲ್ಲ. ಯಾರು ಸಕಾಲದಲ್ಲಿ ಬಿಲ್ ಕಟ್ಟುವುದಿಲ್ಲವೋ ಅವರಿಗೆ ಇದು ಅನ್ವಯಿಸುತ್ತದೆಯೇ ಹೊರತು ಬೇರೆ ಯಾರಿಗೂ ಇದು ಅನ್ವಯಿಸುವುದಿಲ್ಲ, ಶಿಸ್ತನ್ನು ಕಾಪಾಡಬೇಕೆನ್ನುವ ಉದ್ದೇಶದಿಂದ ನಾವು ಹಾಕುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದು ಈಗ ನಾಲ್ಕು ಪಂಪ್‌ಸೆಟ್ ಇದೆ. ನಾನು ಪ್ರಾಮಾಣಿಕವಾಗಿ ಮೂರು ತಿಂಗಳಿಗೊಮ್ಮೆ ಕಟ್ಟುತ್ತೇನೆ, ವರ್ಷಪೂರ್ತಿ ಕಾಯುವುದಿಲ್ಲ. ಒಂದು ತಿಂಗಳು ತಡವಾದರೂ 2 ಪರ್ಸೆಂಟ್ ಬಡ್ಡಿ ಹಾಕುತ್ತಿದ್ದಾರೆ, ಆ ಪ್ರಾಮಾಣಿಕತೆಗೆ ಏನು ಅರ್ಥ ಬಂತು? ಇವತ್ತು ಪ್ರಾಮಾಣಿಕವಾಗಿ ಬಿಲ್ ಕಟ್ಟಬೇಕು ಎನ್ನುವುದಕ್ಕೋಸ್ಕರ 2 ಪರ್ಸೆಂಟ್ 5 ಪರ್ಸೆಂಟ್

ಬಡ್ಡಿ ಹಾಕಿದರೆ ಇದಕ್ಕೆ ಅರ್ಥವೇನಿದೆ? ದಯಮಾಡಿ ಇದನ್ನು ನೀವು ರೈತರ ಹಿತದೃಷ್ಟಿಯಿಂದ ಯೋಚನೆ ಮಾಡಿ. 13 ಲಕ್ಷ ಜನರೈತರ ಪಂಪ್‌ಸೆಟ್‌ಗಳಿದ್ದಾವೆ, ಅದರಲ್ಲಿ 50 ಪರ್ಸೆಂಟ್ ರೈತರು ಪ್ರಾಮಾಣಿಕವಾಗಿ ಬಿಲ್ ಕಟ್ಟಿದರೆ, ಅವನಿಗೆ ವರ್ಷಕ್ಕೊಮ್ಮೆ ನಾಮಿನಲ್ ಇಂಟ್ರೆಸ್ಟ್ ಹಾಕಿ ಎಂದರೆ, 2 ಪರ್ಸೆಂಟ್ ಮಾರ್ವಾಡಿ ಬಡ್ಡಿ ಹಾಕುತ್ತೇನೆಂದರೆ ಹೇಗೆ? ಇದು ಯಾವ ಧರ್ಮ, ಇದಕ್ಕೆ ಏನು ಅರ್ಥವಿದೆ ಹೇಳಿ? ಇದರಿಂದ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಕೆಇಬಿಗೆ ದುಡ್ಡು ಕಟ್ಟುವುದಿಲ್ಲ, ನೀವು ಬಡ್ಡಿ ಹಾಕಿದರೂ ಕಟ್ಟುವುದಿಲ್ಲ, ನೀವು ಬಡ್ಡಿ ಹಾಕದಿದ್ದರೂ ಕಟ್ಟುವುದಿಲ್ಲ, ದಯವಿಟ್ಟು ರೇವಣ್ಣನವರೇ ಐಪಿ ಸೆಟ್‌ಗಳದ್ದು ನಾವು ವಜಾ ಮಾಡಿದ್ದೇವೆಂದು ಹೇಳಿ ಪುಣ್ಯ ಕಟ್ಟಿಕೊಳ್ಳಿ, ಯಾರು ಕಟ್ಟುತ್ತಾರೆ? ನಮ್ಮ ಹತ್ತಿರ ಕಟ್ಟುವುದಕ್ಕೆ ದುಡ್ಡು ಎಲ್ಲಿದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ರೈತರು ಬಿಲ್ ಕಟ್ಟದಿದ್ದರೆ ಹಾಕಿರುವ ಬಡ್ಡಿಯನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕು, ಅವರು ಬದುಕುವುದೇ ಕಷ್ಟವಾಗಿದೆ, ಕರೆಂಟ್ ಚಾರ್ಜ್ ಕಟ್ಟುವುದಕ್ಕೇ ಕಷ್ಟವಾಗಿದೆ, ನೀವು ಬಡ್ಡಿ ಹಾಕಿದರೆ ಏನು ಮಾಡುವುದು?

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ನೀವು ಐಪಿ ಸೆಟ್‌ಗಳಿಗೆ ವಜಾ ಮಾಡಿ, ಸುಮ್ಮನೆ ಒಂದೊಂದು ತಿಂಗಳು ಮುಂದಕ್ಕೆ ಹಾಕಿಕೊಂಡು ಹೋಗುತ್ತೇವೆಂದು ಪೇಪರ್‌ನಲ್ಲಿ ನೀವು ಹೇಳಿಕೊಂಡು ಹೋಗುತ್ತಿರುವುದೇ ಹೊರತು ನಾವ್ಯಾರೂ ಕಟ್ಟುವುದಿಲ್ಲ, ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರೈತರಿಗೆ ಬಿಲ್ ಕಟ್ಟುವುದಕ್ಕೆ ಶಕ್ತಿಯಿಲ್ಲ, ಬರಗಾಲ ಬಂದು ರೈತರು ಸಾಯುತ್ತಿದ್ದಾರೆ, ರೈತರಿಗೆ ಬಿಲ್ ಕಟ್ಟಲಿಲ್ಲವೆಂದು ಅದರ ಮೇಲೆ ಬಡ್ಡಿ ಹಾಕಿದರೆ ಖಂಡಿತ ತಪ್ಪಾಗುತ್ತದೆ, ದಯಮಾಡಿ, ವಾಪಸ್ ತೆಗೆದುಕೊಳ್ಳಿ. ನೀವು ಬಡ್ಡಿಯನ್ನೇ ಹಾಕಬೇಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಮಾಧುಸ್ವಾಮಿಯವರು ಬಿಲ್ ಕಟ್ಟುವುದಿಲ್ಲವೆಂದು ಹೇಳುತ್ತಿದ್ದಾರೆ, ನಮ್ಮಲ್ಲಿ ಬಿಲ್ ಕಟ್ಟುತ್ತಿದ್ದಾರೆ, ನಾವು ಅವರಿಗೆ ಕ್ರಾಸ್‌ಸೈಜ್ ಸಬ್ಸಿಡೈಸ್ ಮಾಡಬೇಕಾ ಎನ್ನುವುದು ನಮ್ಮ ಸಮಸ್ಯೆ ಅದಕ್ಕೆ ಬೇರೆ ಬೇರೆ ಕಂಪನಿಗೆ ಬೇರೆ ಬೇರೆ ಟ್ಯಾರಿಫ್ ಇರಲಿ ಎಲ್ಲಿ ಲಾಭ ಮಾಡುತ್ತದೆ ಅಲ್ಲಿ ಕಮ್ಮಿ ಇರಲಿ, ಎಲ್ಲಿ ನಷ್ಟವಾಗುತ್ತದೆ ಅಲ್ಲಿ ಜಾಸ್ತಿ ಇರಲಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ವಿರೋಧ ಪಕ್ಷದ ನಾಯಕರು, ಮಾಧುಸ್ವಾಮಿ, ಮತ್ತು ಶ್ರೀರಾಮರೆಡ್ಡಿಯವರು ಹೇಳಿದರು ಇವತ್ತು ನಾವು ನಾಲ್ಕುವರೆ ರೂಪಾಯಿಗಳಲ್ಲಿ ವಿದ್ಯುತ್ ಅನ್ನು ಖರೀದಿ ಮಾಡುತ್ತೇವೆ. ರೈತರಿಗೆ ಐಪಿ ಸೆಟ್‌ಗಳಿಗೆ ಹಾಕುತ್ತಿರುವುದು ಕೇವಲ 50 ಪೈಸೆ ಮಾತ್ರ.

ಶ್ರೀ ವಾಟಾಳ್ ನಾಗರಾಜ್ : ಬೇಡಿ, ಅದನ್ನು ಏತಕ್ಕೆ ಹಾಕುತ್ತೀರಿ? ಜೈಲ್‌ಗೆ ಕಳುಹಿಸುತ್ತೀರಾ, ಹೋಗುವುದಕ್ಕೆ ತಯಾರಿದ್ದೇವೆ. ಏತಕ್ಕೆ 50 ಪೈಸೆ ಹಾಕುತ್ತೀರಿ, ಈ ಸದನದಲ್ಲಿ ನಾವು ವಜಾ ಮಾಡಿದ್ದೇವೆಂದು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಐಪಿ ಸೆಟ್‌ಗಳಿಗೆ ನೀವೇನು ಮಾಡಿದರೂ ಕಟ್ಟುವುದಿಲ್ಲ. ವಜಾ ಮಾಡಿದ್ದೇವೆಂದು ಹೇಳಿ ಪುಣ್ಯ ಕಟ್ಟಿಕೊಳ್ಳಿ ಕಳೆದ ಕಾಂಗ್ರೆಸ್ ಸರ್ಕಾರದವರು ಮೂರು ವರ್ಷದ್ದು ಮೂವತ್ತು ವರ್ಷ ಸ್ಟ್ರೈಕ್ ಮಾಡಿಸಿಕೊಂಡು ವಜಾ ಮಾಡಿ ಹೋದರು. ರೇವಣ್ಣನವರೆ,

ಜನರಾದರೂ ನಿಮ್ಮ ಜೊತೆ ಇರುತ್ತಾರೆ, ನಮ್ಮ ಮಾತನ್ನು ಸ್ವಲ್ಪ ನೀವು ತೆಗೆದುಕೊಳ್ಳಿ ವಜಾ ಮಾಡುವುದು ಗ್ಯಾರಂಟಿಯಾ? ನಾವು ಮಾಡಿಸಿದೆವು ಎನ್ನುವುದಕ್ಕಿಂತ ನೀವೇ ಮಾಡಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಮಾಧುಸ್ವಾಮಿಯವರು ಸಲಹೆಯನ್ನು ಏನು ಕೊಟ್ಟಿದ್ದಾರೆ, ಈ ಬಗ್ಗೆ ನಾನೊಬ್ಬನೇ ಡಿಸಿಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೇ ನಾನು ಹೇಳಿದೆ. ಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಹಣಕಾಸಿನ ಮಂತ್ರಿಗಳಿದ್ದಾರೆ, ಎಲ್ಲಾ ಹಿರಿಯ ಸಚಿವರಿದ್ದಾರೆ. ಬೇಕಾದರೆ ಈ ರಾಜ್ಯದ ವಿದ್ಯುತ್ ಇಲಾಖೆ ಬಗ್ಗೇನೆ ಒಂದು ದಿನ ಪೂರ್ತಿ ಚರ್ಚೆ ಮಾಡಿ. ಉತ್ಪಾದನೆ ಬಗ್ಗೆ ಇನ್ನು 10 ವರ್ಷಕ್ಕೆ ಏನಾಗಬೇಕು, ವಿತರಣೆ ಬಗ್ಗೆ ಇರಬಹುದು, ರೈತರ ಬಗ್ಗೆ ಇರಬಹುದು, ಇವುಗಳ ಬಗ್ಗೆ ಸದನ ಎಲ್ಲ ಕೂತು ಚರ್ಚೆ ಮಾಡಿ. ಮಾನ್ಯ ಅಧ್ಯಕ್ಷರಲ್ಲಿ ನಾನು ಹಲವಾರು ಸಲ ಮನವಿ ಮಾಡಿದ್ದೇನೆ, ನನ್ನದೇನೂ ಅಭ್ಯಂತರವಿಲ್ಲ. ಸದನ ಏನು ಹೇಳುತ್ತದೆ ಅದಕ್ಕೆ ನಾನು ಭಾಗಿಯಾಗುತ್ತೇನೆ. ಇನ್ನೊಂದು ದಿನ ಪ್ರತ್ಯೇಕವಾಗಿ ಚರ್ಚೆಯನ್ನು ಇಟ್ಟುಕೊಳ್ಳಿ. ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳೇ, ತಾವು ರೈತರಿಗೆ ಅನೇಕ ರಿಯಾಯ್ತಿ ಕೊಟ್ಟಿದ್ದೀರಿ. ಖಂಡಿತ ನಾವು ವಿಶೇಷವಾದ ಡಿಮಾಂಡನ್ನೇನೂ ಮಾಡುತ್ತಿಲ್ಲ. ಸಹಕಾರಿ ಸಾಲಕ್ಕೆ ನಾವು 6 ಪರ್ಸೆಂಟ್ ಬಡ್ಡಿ ಕೊಡುತ್ತಿದ್ದೇವೆ, ಇಡೀ ದೇಶದಲ್ಲಿ ಇದೊಂದು ಮಾದರಿಯಾಗಿ ಮಾಡಿದ್ದೀರಿ. ನಾವು ಅಭಿನಂದನೆ ಸಲ್ಲಿಸಿದ್ದೇವೆ. ಇವತ್ತು 13 ಲಕ್ಷ ರೈತರು ಪಂಪ್‌ಸೆಟ್‌ಗಳನ್ನು ಇಟ್ಟುಕೊಂಡಿದ್ದಾರೆ, ಇವರು ಮೂರು ತಿಂಗಳಿಗೊಮ್ಮೆ ಬಿಲ್ ಮಾಡುತ್ತಾರೆ. ಯಾರೋ ಒಬ್ಬ ಗ್ರಾಹಕ ಕರೆಕ್ಟಾಗಿ ಕಟ್ಟುತ್ತಿದ್ದಾನೆ, ಪಾಪ ಒಂದು ತಿಂಗಳು ಲೇಟಾಯಿತು. ಅದಕ್ಕೆ ಆತ 2 ಪರ್ಸೆಂಟ್ ಬಡ್ಡಿ ಕೊಡಬೇಕು. ವರ್ಷಕ್ಕೊಮ್ಮೆ ಒಂದು ನಾಮಿನಲ್ ಹಾಕಿ, ಅಲ್ಲಿಯವರೆಗೆ ಅವನು ಅಸಲು ಕಟ್ಟಲು ಒಂದು ಅವಕಾಶ ಮಾಡಿಕೊಡಿ. ಪ್ರಾಮಾಣಿಕವಾಗಿರುವವನನ್ನು ಯಾಕೆ ಅಡ್ಡದಾರಿ ಹಿಡಿಸುತ್ತೀರ ಅಂತ. ಇಷ್ಟು ಬಡ್ಡಿ ಜಗತ್ತಿನಲ್ಲಿ ಎಲ್ಲಾದರೂ ಇದೆಯಾ ಎಂದು ಯಾರನ್ನಾದರೂ ಕೇಳಿ. ತಮಿಳುನಾಡು, ಆಂಧ್ರದಲ್ಲೆಲ್ಲ ಫ್ರೀ ವಿದ್ಯುತ್ ಕೊಡುತ್ತಿದ್ದಾರೆ. ನೀವು ಬಡ್ಡಿ ಹಾಕಬೇಡಿರಿ ಅಂದರೆ ಅದಕ್ಕೆ ಮೀನಮೇಷ ಎಣಿಸುತ್ತೀರಿ ಅಂದರೆ ನಿಮಗೆಷ್ಟರ ಮಟ್ಟಿನ ಗೌರವ ಬರಬಹುದು, ಜನ ನಿಮ್ಮ ಬಗ್ಗೆ ಏನು ಅಂದುಕೊಳ್ಳಬಹುದು. ಇದರ ಬಗ್ಗೆ ಯೋಚನೆ ಮಾಡಿ.

ಶ್ರೀ ಎಚ್.ಡಿ. ರೇವಣ್ಣ : ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಎಲ್ಲ ವಿಷಯ ಗೊತ್ತಿದೆ. ದಯವಿಟ್ಟು ತಪ್ಪು ತಿಳ್ಕೊಳೋದು ಬೇಡ. ಬೇಕಾದರೆ ಅದರ ಬಗ್ಗೆ ಸೆಪರೇಟ್ ಆಗಿ ಚರ್ಚೆ ಮಾಡಿ, ಅದು ಏನು ಬೇಕೋ ನಿರ್ಣಯ ಮಾಡೋಣ.

ಶ್ರೀ ಎಸ್.ಎಸ್. ಪಾಟೀಲ್ : ನಾವು ಕೂಡ ಹೇಳುತ್ತೇವೆ ರೈತರಿಗೆ 2 ಪರ್ಸೆಂಟ್ ಬಡ್ಡಿ ಹಾಕುವುದು ತಪ್ಪು. ಅದರಿಂದ ಬಹಳ ಅನ್ಯಾಯವಾಗುತ್ತದೆ.

ಶ್ರೀ ಎಚ್.ಡಿ. ರೇವಣ್ಣ : ಅದರ ಬಗ್ಗೆ ಸೆಪರೇಟಾಗಿ ಚರ್ಚೆಯಾಗಲಿ, ನನ್ನದೇನೂ ಅಭ್ಯಂತರವಿಲ್ಲ. ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಸಹಕರಿಸಬೇಕು, ಏಕೆಂದರೆ ನನಗೆ ಸಿಕ್ಕಿರುವುದು 10 ನಿಮಿಷ ಅವಕಾಶ, ಬೇಕಾದರೆ ಸೆಪರೇಟಾಗಿ ಒಂದು ದಿವಸ ನನ್ನ ಇಲಾಖೆ ಬಗ್ಗೆಯೇ ಚರ್ಚೆ ಮಾಡಿ ಒಂದು ನಿರ್ಣಯ ಮಾಡಿ, ಅದಕ್ಕೆ ಒಪ್ಪಲು ನಾನು ತಯಾರಿದ್ದೇನೆ. ಇದಲ್ಲದೆ ಲೋಕೋಪಯೋಗಿ ಇಲಾಖೆ ಬಗ್ಗೆ ಎರಡು ಮಾತಾಡಲು ಇಚ್ಛೆಪಡುತ್ತೇನೆ. ನಬಾರ್ಡ್‌ನಿಂದ

2000–01ರಲ್ಲಿ 102 ಕೋಟಿ ರೂ. ಬಂದಿದೆ, 2001–02ರಲ್ಲಿ 38 ಕೋಟಿ ರೂ. ಇದೆ, 2003–04ರಲ್ಲಿ 160 ಕೋಟಿ ರೂ. 2004–05ರಲ್ಲಿ 257 ಕೋಟಿ ರೂ. ಈಗ 2005–06ರಲ್ಲಿ 225 ಕೋಟಿ ರೂ. ಬಂದಿದೆ. ಈ ವರ್ಷ ನಮ್ಮ ಸಮ್ಮಿಶ್ರ ಸರ್ಕಾರ ಬಂದ ಮೇಲೆ ನಮ್ಮ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಾವು ನಬಾರ್ಡ್‌ನಿಂದ ಸುಮಾರು 550 ಕೋಟಿ ರೂ. ತೆಗೆದುಕೊಳ್ಳಲಿಕ್ಕೆ ಯಶಸ್ವಿಯಾಗಿದ್ದೇವೆ ಎಂದು ತಿಳಿಸಿ, ಅದೇ ರೀತಿ ಕೇಂದ್ರ ಸರ್ಕಾರದ ರಸ್ತೆ ನಿಧಿಯಲ್ಲೂ 2001ರಲ್ಲಿ 48 ಕೋಟಿ ರೂ. 2001–02ರಲ್ಲಿ 76 ಕೋಟಿ ರೂ. 2002–03ರಲ್ಲಿ 39 ಕೋಟಿ ರೂ. 2003–04ರಲ್ಲಿ 94 ಕೋಟಿ ರೂ. 2004–05ರಲ್ಲಿ 146 ಕೋಟಿ ರೂ. ಇದಲ್ಲದೆ 2005–06ರಲ್ಲಿ 30 ಕೋಟಿ ರೂ. ಹಣ ಕೊಟ್ಟು ಎಲ್ಲ ಸದಸ್ಯರಿಗೂ ಹಣ ಕೊಟ್ಟು ಒಂದು ವರ್ಷದಲ್ಲಿ ಸಿಆರ್‌ಎಫ್‌ನಲ್ಲಿ 176 ಕೋಟಿ ರೂ.ಗಳನ್ನು ಮೊದಲ ಬಾರಿಗೆ ಅತಿ ಹೆಚ್ಚು ಹಣ ತಂದಿದ್ದೇವೆ. ಅದೇ ರೀತಿ ಇಎ ಕಾರ್ಯಕ್ರಮದಡಿ ಕಳೆದ ನಾಲ್ಕೈದು ವರ್ಷದಿಂದ ಹಣ ಕೊಟ್ಟಿರಲಿಲ್ಲ ಕೇಂದ್ರ ಸರ್ಕಾರ, ಅದರಲ್ಲೂ ಸಹ ಇವತ್ತು 53 ಕೋಟಿ ರೂ. ತಂದಿದ್ದೇವೆ, ಇದಲ್ಲದೆ ಇಂಟರ್‌ಸ್ಟೇಟ್‌ದಲ್ಲಿ ಒಟ್ಟು 70 ಕೋಟಿ ರೂ. ತಂದಿದ್ದೇವೆ, ಏಕೆಂದರೆ ಮಾನ್ಯ ಅರಸೀಕೆರೆ ಬಸವರಾಜು ಅವರು ನಿನ್ನೆ ಭಾಷಣ ಮಾಡುವಾಗ ಹೇಳುತ್ತಿದ್ದರು, ಅರಸೀಕೆರೆ ತಾಲ್ಲೂಕಿಗೆ ಏನೂ ಕೊಟ್ಟಿಲ್ಲ ಅಂತ. ಬಾಣಾವರದಿಂದ ಹುಳಿಯಾರು ಮೇಲೆ ಹೋಗುವ ರಸ್ತೆಗೆ 25 ಕೋಟಿ ರೂ. ಇವತ್ತು ಕೊಡುತ್ತಿದ್ದೇವೆ. ಅವರ ಒಂದು ತಾಲ್ಲೂಕಿನಲ್ಲಿ ನಾಲ್ಕೂವರೆ ಕೋಟಿಗೆ 30 ಕಿಮೀ ರಸ್ತೆಯಾಗುತ್ತದೆ. ಬಾಣಾವರದಿಂದ ಅರಸೀಕೆರೆ ತಾಲ್ಲೂಕು ಬೌಂಡರಿವರೆಗೆ ನಾಲ್ಕೂವರೆ ಕೋಟಿಯಲ್ಲಿ 30 ಕಿಮೀ ರಸ್ತೆ ತೆಗೆದುಕೊಳ್ಳುವ ಕಾರ್ಯಕ್ರಮ ಮಾಡಿದ್ದೇವೆ. ಅದೇ ರೀತಿ ಬಾಣಾವರ, ಹುಳಿಯಾರ, ಸಿರಾ ಮತ್ತು ಮಧುಗಿರಿ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಚಿಕ್ಕಮಗಳೂರು ಮೇಲೆ 25 ಕೋಟಿ ರೂ. ಹಣ ಕೊಡುತ್ತಿದ್ದೇವೆ. ಇದೇ ರೀತಿ ಇಲಾಖೆಯಿಂದಲೂ ಏನು ಕೆಲಸ ಮಾಡಲಾಗಿದೆ ಎಂದು ನಾವು ಹೇಳಬೇಕಾಗುತ್ತದೆ. ರಾಜ್ಯ ಹೆದ್ದಾರಿಯಲ್ಲಿ 2331 ಕಿಮೀ ರಸ್ತೆಯನ್ನು ಕೆಸಿಎಫ್ ವತಿಯಿಂದ 2030 ಕೋಟಿ ರೂ. ವೆಚ್ಚದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ಮಾಡಿದ್ದೇವೆ. ಅದೇ ರೀತಿ 600 ಕಿಮೀ ರಸ್ತೆ ಉದ್ದ ಇರಬಹುದು ಒಟ್ಟಾರೆ 1250 ಕಿಮೀ ರಸ್ತೆಯನ್ನು ಈಗಾಗಲೇ ಮಾಡಿದ್ದೇವೆ, ಇದಲ್ಲದೆ ರಾಜ್ಯ ಸರ್ಕಾರದ ಈಗ 2500 ಕಿಮೀ ರಸ್ತೆಯನ್ನು ಕೆಸಿಎಫ್–2ರಲ್ಲಿ ತೆಗೆದುಕೊಳ್ಳಬೇಕು ಅಂತ ವಿಶ್ವಬ್ಯಾಂಕ್ ಯೋಜನೆಗೆ 3000 ಕೋಟಿ ರೂ. ಯೋಜನೆಯನ್ನು ಸಿದ್ಧಪಡಿಸಿ ಕಳಿಸುತ್ತಿದ್ದೇವೆ. ಅದನ್ನೂ ಕೂಡ ಮಾಡಬೇಕು ಎಂಬ ಉದ್ದೇಶವಿದೆ. ಇದಲ್ಲದೆ ಮಂಡ್ಯ ಪ್ಯಾಕೇಜ್ ಬಗ್ಗೆ ಹೇಳಬೇಕಾಗಿದೆ. ಇದಕ್ಕೆ ನಾವು ಬಂದ ಮೇಲೆ 40 ಕೋಟಿ ರೂ. ಕೊಟ್ಟಿದ್ದೇವೆ. ಇದು 2001–02ರಲ್ಲಿ ಪ್ರಾರಂಭವಾಗಿದ್ದು ಅವತ್ತು ಎಷ್ಟು ಕೊಟ್ಟಿದ್ದರು ಮತ್ತು ನಾವು ಬಂದ ಮೇಲೆ ಎಷ್ಟು ಕೊಡಲಾಗಿದೆ ಅಂತ ಮಾನ್ಯ ಸದಸ್ಯ ನಾಗಮಣಿ ಅವರು ಹೇಳುತ್ತಿದ್ದರು. ಇದಲ್ಲದೆ ಯಾವುದೋ ರಸ್ತೆ ಮಾಡುವ ಸಂದರ್ಭದಲ್ಲಿ ಆ ಕಂಟ್ರಾಕ್ಟರ್ ಸರಿಯಾಗಿ ಮಾಡುತ್ತಾ ಇಲ್ಲ ಅಂತ ಅವರು ಹೇಳಿದರು. ಅದನ್ನು ನಾನು ಇಲಾಖೆ ವತಿಯಿಂದ ತರಿಸಿದೆ, ಅವನು ಈಗ ಕೆಲಸವನ್ನು ಪ್ರಾರಂಭ ಮಾಡಿದ್ದಾನೆ. ಅದರ ವೆಚ್ಚ 10 ಕೋಟಿ, ಅಂದರೆ ಟೆಂಡರ್‌ಗಿಂತ 1,70 ರೂ. ಕಡಿಮೆ ಅವನು, ಹಾಕಿದ್ದಾನೆ ಅದು ಪ್ರಾರಂಭವಾಗಿದ್ದು 16–2–2004ರಲ್ಲಿ, ಮುಕ್ತಾಯವಾಗುವುದು 18–2–2006ರಲ್ಲಿ ಇನ್ನು ಅವರಿಗೆ 6 ತಿಂಗಳು ಅವಕಾಶ ಇದೆ. ಆಮೇಲೆ ಕ್ವಾಲಿಟಿಯೆಲ್ಲಾ ಕರೆಕ್ಟಾಗಿ ಮಾಡುತ್ತಾ ಇದ್ದಾರೆ ಅಂತ ಹೇಳಿದ್ದಾರೆ. ಏನಾದರೂ ಇದ್ದರೆ ಅವರು ನನ್ನ ಗಮನಕ್ಕೆ ತಂದರೆ

ಯಾವ ತರಹ ತನಿಖೆ ಬೇಕಾದರೂ ನಾನು ಮಾಡಿಸಲು ಸಿದ್ಧನಿದ್ದೇನೆ ಅಂತ ಹೇಳಿ, ಕಳೆದ ವರ್ಷ ನಮಗೆ ಪಿಡಬ್ಲ್ಯುಡಿಗೆ 231 ಕೋಟಿ ರೂ. ಕೊಟ್ಟಿದ್ದರು, ಈ ವರ್ಷ ಬರೀ 80 ಕೋಟಿ ರೂ. ಕೊಟ್ಟಿದ್ದಾರೆ. ನನ್ನದೇ ಸುಮಾರು 300 ಕೋಟಿ ರೂ.ಗಳ ಬಿಲ್ ಇದೆ. ನಮ್ಮದು ಯಾವ ಜಗಳವೂ ಇಲ್ಲ, ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಕೆಲಸ ಮಾಡಬೇಕಾಗುತ್ತದೆ, ನಾವು ಮಾಡುತ್ತಿದ್ದೇವೆ ಅಂತ ಹೇಳಿ, ನಮ್ಮಲ್ಲಿ ಯಾವುದೇ ತರಹದ ಜಗಳ ಇಲ್ಲ..

ಶ್ರೀ ಬಿ.ಎಸ್. ಯಡಿಯೂರಪ್ಪ : ರಸ್ತೆ ನಿರ್ವಹಣೆ ಕೆಲಸ ಕೊಟ್ಟಿದ್ದೀರಿ, 31–3–2005ಕ್ಕೆ ಅದು ಮುಗಿಯುತ್ತಿದೆ. ಆ ನಿರ್ವಹಣೆ ಹೇಗೆ ಮಾಡಿದ್ದಾರೆ ಅಂದರೆ ದೇವರೇ ಕಾಪಾಡಬೇಕು. ರಾಜ್ಯ ಹೆದ್ದಾರಿ ನಿರ್ವಹಣೆ ಕೆಲಸವನ್ನು ಒಂದು ಪ್ಯಾಕೇಜ್ ಅಂತ ಕೊಟ್ಟಿದ್ದೀರಿ, ಆ ನಿರ್ವಹಣೆ ಹೇಗೆ ಮಾಡಿದ್ದಾರೆ ಎಂದರೆ 10 ರಸ್ತೆಗಳನ್ನು ಇನ್‌ಸ್ಟ್ರಕ್ಟ್ ಮಾಡಿದರೆ ಅವಧಿ ಮುಗಿಯಿತು. ದುಡ್ಡು ತಗೊಂಡು ಹೋದ, ತಮಗೆ ನಾನು ಹಾಕಿದೆ, ಈಗ ಅವಧಿ ಮುಗಿದ ಮೇಲೆ ತಕ್ಷಣ ಟೆಂಡರ್ ಕರೆದು ಈ ಪ್ಯಾಕೇಜ್ ಮುಂದುವರೆಸುವುದಾದರೆ ನೀವು ಏಜೆನ್ಸಿ ಫಿಕ್ಸ್ ಮಾಡಲಿಲ್ಲ. ಕೆಲವು ಜಿಲ್ಲೆಯಲ್ಲಿ ಮಾಡಿದ್ದೀರಿ ಕೆಲವು ಜಿಲ್ಲೆಯಲ್ಲಿ ಮಾಡಲಿಲ್ಲ, ಉದಾಹರಣೆಗೆ ಶಿವಮೊಗ್ಗ ಜಿಲ್ಲೆ, ಹೀಗಾಗಿ ಪಿಡಬ್ಲ್ಯೂಡಿಯವರೂ ಅದನ್ನು ಮೇಂಟೇನ್ ಮಾಡುತ್ತಿಲ್ಲ, ನಿಮ್ಮ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮವೂ ಕೈಹಾಕುತ್ತಿಲ್ಲ, ನಾವು ಓಡಾಡುವುದಕ್ಕೆ ಆಗದಂತಹ ದುಸ್ಥಿತಿ ಬಂದಿದೆ. ಇದನ್ನು ಮುಂದುವರೆಸುತ್ತಿದ್ದೀರಿ ಇಡೀ ರಾಜ್ಯದಲ್ಲಿ ಅವಧಿ ಮುಗಿಯುವ ಮುನ್ನವೇ ಟೆಂಡರ್ ಕರೆದು ಆ ವರ್ಕನ್ನು ಯಾಕೆ ಎನ್‌ಟ್ರಸ್ಟ್ ಮಾಡಲಿಲ್ಲ? ನಿಮ್ಮ ಮನಸ್ಸಿನಲ್ಲಿ ಏನಿದೆ? ಈಗಾಗಲೇ ನಾಲ್ಕು ತಿಂಗಳು ಕಳೆದುಹೋಯಿತು, ಮಳೆ ಬೀಳುತ್ತಿದೆ, ಗುಂಡಿ ಮುಚ್ಚುವವರಿಲ್ಲ ಕೇಳೋರಿಲ್ಲ, ಇದಕ್ಕೇನು ಕಾರ್ಯಕ್ರಮ ರೂಪಿಸಿದ್ದೀರಾ ವಿಶೇಷವಾಗಿ ಶಿವಮೊಗ್ಗ ಜಿಲ್ಲೆ. ಆ ಪ್ಯಾಕೇಜ್ ಯಾರಿಗಾದರೂ ಆಗಿದೆಯಾ, ಮಾಡುತ್ತೀರೋ ಇಲ್ಲವೋ ಅದನ್ನಾದರೂ ದಯವಿಟ್ಟು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಈಗಾಗಲೇ ರಾಜ್ಯ ಹೆದ್ದಾರಿಯ ಸುಮಾರು 13 ಸಾವಿರ ಕಿಮೀಗೆ ನಾವು 468 ಕೋಟಿ ರೂ.ಗಳ ಪ್ಯಾಕೇಜ್ ಮಾಡಿದ್ದೇವೆ. ಉತ್ತರ ಕರ್ನಾಟಕ ಭಾಗದ ರಸ್ತೆಗಳಿಗೆ ಈಗಾಗಲೇ ಟೆಂಡರ್ ಫೈನಲೈಸಾಗಿದೆ. ಇನ್ನು 15–20 ದಿವಸದಲ್ಲಿ ಕೆಲಸ ಮಾಡುತ್ತೇವೆ, ಶಿವಮೊಗ್ಗ ಜಿಲ್ಲೆಯದ್ದು ಟೆಂಡರ್ ಫೈನಲೈಸ್ ಮಾಡುತ್ತಿದ್ದೇವೆ. ಏಕೆಂದರೆ ಕೆಲವು ಕಡೆ ಕಂಟ್ರಾಕ್ಟರ್‌ಗಳು 25–30 ಪರ್ಸೆಂಟ್ ಹಾಕಿದ್ದರು. ನಾವು ....

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೂ ನಮಗೇನು ಸಂಬಂಧ? ನಾಲ್ಕು ತಿಂಗಳು ಕಳೆದುಹೋಯಿತಲ್ಲ, ನಾವು ರಸ್ತೆಯಲ್ಲಿ ಓಡಾಡುವುದು ಹೇಗೆ? ಮಾರ್ಚ್ 30ಕ್ಕೆ ಮುಗಿಯುವ ಮುನ್ನವೇ ಟೆಂಡರ್ ಕರೆದು ನೀವು ಫೈನಲೈಸ್ ಮಾಡಬೇಕಾಗಿತ್ತು, ಅದನ್ನು ನಿರ್ವಹಣೆ ಮಾಡುವವರು ಯಾರು? ಯಾವನೋ ಕಂಟ್ರಾಕ್ಟರ್ 20 ಪರ್ಸೆಂಟ್ ಹೆಚ್ಚಿಗೆ ಕೇಳಿದ ಅಂದರೆ ಅದಕ್ಕೆ ನಾವು ಯಾವರೀತಿ ಹೊಣೆ? In what, way we are responsible?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ವಿರೋಧ ಪಕ್ಷದ ನಾಯಕರು ಎರಡು ನಿಮಿಷ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ, ಇವತ್ತು 21 ಪ್ಯಾಕೇಜ್‌ಗೆ ಆದೇಶ ನೀಡಿದ್ದೇವೆ, ಬಾಕಿ ಉಳಿದಿರುವ

21 ಪ್ಯಾಕೇಜ್‌ಗಳಿವೆ. ಅದನ್ನೂ ಸಧ್ಯದಲ್ಲೇ ಮಾಡುತ್ತೇವೆ. ಏಕೆಂದರೆ ಕಾನೂನು ಇದೆ. ಕೆಲವುಗಳನ್ನು ಇವತ್ತು ಯಾವುದೇ ಟೆಂಡರ್ ಹಾಕಬೇಕಾದರೆ 60 ದಿನ ಟೈಮ್ ಕೊಡಬೇಕಾಗುತ್ತದೆ, 45 ದಿನಗಳ ಟೈಮನ್ನು ಕೊಡಬೇಕಾಗುತ್ತದೆ. ತಾವೆಲ್ಲಾ ಸಹಕಾರ ಮಾಡಬೇಕು. ತಾವು ಹೇಳಿರುವ ಕೆಲಸವನ್ನು ಪ್ರಾರಂಭ ಮಾಡಿಸಿಕೊಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯದ್ದು ಇನ್ನೂ ಟೆಂಡರ್ ಆಗಿಲ್ಲ, ಸ್ಟೇಟ್ ಹೈವೇ ಮೇಂಟೆನೆನ್ಸ್‌ದ್ದು. ಮಳೆ ನೀರು ಪೂರ್ತಿ ರಸ್ತೆ ಮೇಲೆ ಹರಿದು..

(ಗೊಂದಲ)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಒಂದು ತಿಂಗಳ ಕಾಲ ಸಾಕಷ್ಟು ವಿಷಯಗಳ ಬಗ್ಗೆ ಪ್ರಸ್ತಾಪವಾಗಿದೆ. ನಾವೆಲ್ಲಾ ಮತ್ತೆ ನಿಮಗೆ ಅವಕಾಶವನ್ನು ಮಾಡಿಕೊಡುತ್ತೇವೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಚರಂಡಿ ನೀರು ರಸ್ತೆ ಮೇಲೆ ಬರುತ್ತಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕಡೂರಿನಿಂದ ಶಿವಮೊಗ್ಗದವರೆಗೂ ಹೋಗೋಣ. ಇಡೀ ರಸ್ತೆಯೆಲ್ಲಾ ನೀರು ನಿಂತಿದೆ. ಆ ಕಡೆ ಈ ಕಡೆ ಡ್ರೈನೇಜನ್ನು ತೆಗೆದಿಲ್ಲ, 4 ತಿಂಗಳಾಯಿತು.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಸಮ್ಮಿಶ್ರ ಸರ್ಕಾರದಲ್ಲಿ ಆಗಿರುವಷ್ಟು ಕೆಲಸ ಯಾವ ಕಾಲದಲ್ಲೂ ಆಗಿಲ್ಲ. ವಿರೋಧ ಪಕ್ಷದ ನಾಯಕರು ಅದಕ್ಕಾಗಿ ಅವರು ಅಭಿನಂದನೆಗಳನ್ನು ಸಲ್ಲಿಸಬೇಕು.

(ಗೊಂದಲ)

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಉಪಾಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಚೆಲುವರಾಯಸ್ವಾಮಿಯವರೇ, ತಾವು ಮುಂದುವರಿಸಿ. ಐದು ನಿಮಿಷದಲ್ಲಿ ಮುಗಿಸಿಬಿಡಿ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಉಪಾಧ್ಯಕ್ಷರೇ,.......

(ಗೊಂದಲ)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಉಪ ಮುಖ್ಯಮಂತ್ರಿಗಳು, ಕಂದಾಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ಹಿರಿಯ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನೀರಾವರಿ ಬಗ್ಗೆ ಹೇಳಬೇಕಾಗಿತ್ತು. ಆದರೂ ಕೂಡ ಸಮಯದ ಅಭಾವ ಇದ್ದ ಕಾರಣ ಇವತ್ತು ಸಾಕಷ್ಟು ಚರ್ಚೆಗಳು ಮಧ್ಯದಲ್ಲಿ ಆಗಿವೆ. ನೀರಾವರಿ ಬಗ್ಗೆ ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೂ ಉತ್ತರವನ್ನು ಕೊಟ್ಟಿದ್ದೇವೆ. ಇವತ್ತು ಎಲ್ಲಾ ಇಲಾಖೆಯ ಮಂತ್ರಿಗಳಿಗೂ ಕೂಡ ಮಾತನಾಡಲಿಕ್ಕೆ

ಅವಕಾಶ ಆಗುವುದಿಲ್ಲ. ಪ್ರಶ್ನೋತ್ತರ ಸಮಯದಲ್ಲಿ, ಗಮನ ಸೆಳೆಯುವ ಸೂಚನೆಯ ಮೇಲೆ ಸಾಕಷ್ಟು ವಿಷಯಗಳು ಪ್ರಸ್ತಾಪವಾಗಿವೆ. ಇವತ್ತು ಮಾನ್ಯ ಚೆಲುವರಾಯಸ್ವಾಮಿಯವರೂ ಕೂಡ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಐದು ನಿಮಿಷದಲ್ಲಿ ಹೇಳಬೇಕೆಂದು ಹೇಳಿದ್ದಾರೆ. ಐದು ನಿಮಿಷದಲ್ಲಿ ಆಗುವುದಿಲ್ಲ. ಮತ್ತೆ ತಾವು ಮಾತನಾಡಬೇಕಾದರೆ ತಮ್ಮ ಇಲಾಖೆಯ ಮೇಲೆ ನಾಳೆ ಮಾತನಾಡಿ. ಅಪ್ರೋಪ್ರಿಯೇಷನ್ ಬಿಲ್ ಮೇಲೂ ಕೂಡ ಸಾಕಷ್ಟು ಚರ್ಚೆಯಾಗುತ್ತದೆ. ಅದು ಇಲ್ಲಿಂದ ವಿಧಾನಪರಿಷತ್ತಿಗೆ ಕೂಡ ಹೋಗಬೇಕಾಗುತ್ತದೆ. ಇವತ್ತೇ ಎಲ್ಲಾ ರೀತಿ ಆಗಬೇಕಾದ ಕಾರಣ ವಿಧಾನಸಭೆಯ ಅಧ್ಯಕ್ಷರು ಮತ್ತು ವಿಧಾನಪರಿಷತ್ತಿನ ಸಭಾಪತಿಯವರೂ ಕೂಡ ನಾಳೆ ಪ್ರಿಸೈಡಿಂಗ್ ಆಫೀಸರ್ಸ್ ಕಾನ್ಫರೆನ್ಸ್‌ಗೆ ಹೋಗಬೇಕಾಗಿದೆ. ಇಲ್ಲಿ ಕೂಡ ಅದಕ್ಕಾಗಿ ಒಂದು ದಿನ ಎಕ್ಸ್‌ಟೆಂಡ್ ಮಾಡಿ ಮಾಡುತ್ತಿದ್ದೇವೆ. ಇದು ಕಾಲಹರಣವೇನೂ ಆಗಿಲ್ಲ. ಇವತ್ತು ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಬಂದಮೇಲೆ ಒಂದು ತಿಂಗಳ ಕಾಲ ಅಧಿವೇಶನವನ್ನು ನಡೆಸಬೇಕೆಂದು ಹೇಳಿದ್ದರು. ಒಂದು ತಿಂಗಳ ಕಾಲ ಇವತ್ತು ಅಧಿವೇಶನ ನಡೆದಿದೆ. ಇನ್ನೂ ಕೂಡ 5ನೇ ತಾರೀಖಿನವರೆಗೆ ಈ ಅಧಿವೇಶನ ನಡೆಯುತ್ತದೆ. ಸಾಕಷ್ಟು ಮಾತುಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಆದರೂ ಕೂಡ ಒಂದು ಮಾತನ್ನು ನಾನು ಮುಖ್ಯಮಂತ್ರಿಯಾಗಿ ಇಲ್ಲಿ ಹೇಳಲೇಬೇಕಾಗುತ್ತದೆ. ನಿನ್ನೆ ಸ್ವಲ್ಪ ವ್ಯತ್ಯಾಸವಾಯಿತು. ಆ ವ್ಯತ್ಯಾಸವಾದ ಮೇಲೆ ನಾನು ಬಂದಾಗ ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದರು. ವಿರೋಧಪಕ್ಷದವರನ್ನು ಹೊರಗಿಟ್ಟು ಮಾಡತಕ್ಕಂಥದ್ದು ಸರಿಯಲ್ಲ, ಆಗ ಶ್ರೀರಾಮರೆಡ್ಡಿಯವರೂ ಕೂಡ ಹೇಳಿದರು, ಎಲ್ಲರನ್ನೂ ಕರೆಸಿ ಒಂದು ದೊಡ್ಡ ಮನಸ್ಸು ಮಾಡಿ ಇವತ್ತು ಕಾರ್ಯಕಲಾಪಗಳು ಸುಗಮ ರೀತಿಯಲ್ಲಿ ನಡೆಯುತ್ತಿವೆ. ಏಕೆಂದರೆ ರಾಜ್ಯದ ಜನತೆಗೆ ತಿಳಿದಂತೆ ಒಂದು ತಿಂಗಳ ಕಾಲ ಏನು ನಾವು ಅಧಿವೇಶನವನ್ನು ನಡೆಸಿದ್ದೇವೆ, ಇಲ್ಲಿ ಚರ್ಚೆಯಾಗಿದೆ, ಮತ್ತು ಇವತ್ತಿನ ಕೆಲವು ತಮ್ಮ ಸಮಸ್ಯೆಗಳೇನು ಇತ್ತು, ಆರ್ಥಿಕವಾಗಿ ಇರುವ ರೀತಿಯಲ್ಲಿ ನಮ್ಮ ಉಪ ಮುಖ್ಯಮಂತ್ರಿಗಳು ಕೂಡ ಬಹಳಷ್ಟು ಬಿಡಿಸಿ ಮಾತನಾಡಿದ್ದಾರೆ. ನನಗೆ ಅದು ಸಮಾಧಾನವನ್ನು ತಂದುಕೊಟ್ಟಿದೆ. ಆದರೂ ಕೂಡ ಇವತ್ತು ಏನೇನು ಬಜೆಟ್‌ನಲ್ಲಿ ತಾವು ಘೋಷಣೆಯನ್ನು ಮಾಡಿದ್ದೀರಿ, ಸರಿಯಾದ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ. ಇವತ್ತು ನಮ್ಮ ಕರ್ನಾಟಕ ರಾಜ್ಯದ ಬಜೆಟ್ ಏನಿದೆ, ಇಡೀ ರಾಷ್ಟ್ರಮಟ್ಟದಲ್ಲಿ ರಿಸೋರ್ಸ್ ಮೊಬಿಲೈಜೇಷನ್ ಮತ್ತು ಔಟ್‌ಲೇ ನಲ್ಲೂ ಕೂಡ ಪ್ರಗತಿ ಆಗಿದೆ. ಮತ್ತೆ ಇದು ಡೆಫಿಸಿಟ್ ಬಜೆಟ್ ಅಲ್ಲ. ಉತ್ತಮವಾದ ಬಜೆಟ್. ರಿಸೋರ್ಸ್ ಮೊಬಿಲೈಜೇಷನ್‌ನಲ್ಲೂ ಕೂಡ ನಾವು ಸರಿಯಾಗಿ ಮಾಡಿದ್ದೇವೆ. ಅದನ್ನೂ ಕೂಡ ಅವರು ಹೇಳಿದ್ದಾರೆ. ಈಗ ಅಪ್ರೋಪ್ರಿಯೇಷನ್ ಬಿಲ್‌ನಲ್ಲೂ ಕೂಡ ಹೇಳುತ್ತಾರೆ. ನಾನು ಎರಡು–ಮೂರು ಮಾತುಗಳನ್ನು ಹೇಳುವುದಕ್ಕೆ ನಿಂತಿದ್ದೇನೆ. ಏಕೆಂದರೆ ಸಾಕಷ್ಟು ಸಲ ರಾಜ್ಯದ ಸಮಗ್ರ ಅಭಿವೃದ್ಧಿ ಬಗ್ಗೆ, ಪ್ಲಾನ್ ಔಟ್‌ಲೇ ಬಗ್ಗೆ, ರಿಸೋರ್ಸ್ ಮೊಬಿಲೈಜೇಷನ್ ಬಗ್ಗೆ ಎಲ್ಲಾ ಕಡೆಗೂ ಸಾಕಷ್ಟು ಮಾತುಗಳನ್ನು ಪ್ರಸ್ತಾಪ ಮಾಡಿದ್ದೀರಿ. ಇವತ್ತು ನಾಲ್ಕೈದು ವಿಷಯಗಳ ಬಗ್ಗೆ ನಾನು ಹತ್ತು–ಹದಿನೈದು ನಿಮಿಷದಲ್ಲಿ ಮುಗಿಸುತ್ತಿದ್ದೇನೆ. ಪ್ರಪ್ರಥಮವಾಗಿ ಏನೆಂದರೆ ನಿನ್ನೆಗೆ ನಮ್ಮ ಸರ್ಕಾರಕ್ಕೆ 14 ತಿಂಗಳು ಮುಗಿಯಿತು. 15ನೇ ತಿಂಗಳಿಗೆ ನಾವು ಕಾಲಿಟ್ಟಿದ್ದೇವೆ. This is also a kind of achievement. ಇವತ್ತಿನ ದಿವಸ ಏನಾಗಿದೆ ಎಂದರೆ ಎರಡೂ ಪಕ್ಷಗಳೂ ಕೂಡಿ 14 ತಿಂಗಳು ಇವತ್ತು ಸರಿಯಾದ ರೀತಿಯಲ್ಲಿ ನಾವು ಸರ್ಕಾರವನ್ನು ನಡೆಸಿ 15ನೇ

ತಿಂಗಳಿಗೆ ಕಾಲಿಟ್ಟಿದ್ದೇವೆ. ಒಂದೇ ಪಕ್ಷದ ಸರ್ಕಾರ ಇರತಕ್ಕ ಕಾಲದಲ್ಲೂ ಸಾಕಷ್ಟು ಕಷ್ಟಗಳು ಬರುತ್ತವೆ. We have to imagine. ನಾವೆಲ್ಲಾ ಕಡೆಗೆ ಕೋ-ಆರ್ಡಿನೇಟ್ ಮಾಡಿದ್ದೇವೆ. ಸಿದ್ದರಾಮಯ್ಯನವರು ಬರುತ್ತಾರಾ ಇಲ್ಲವಾ ಎಂದು ಕೇಳಿದ್ದಿರಿ. ಸಿದ್ದರಾಮಯ್ಯನವರು ಬಂದರು ಮತ್ತು ಅವರು ಉತ್ತರವನ್ನೂ ಕೊಟ್ಟರು. ಎಲ್ಲಿಯೂ ಕೂಡ ತೊಂದರೆ ಇಲ್ಲ. ಇವತ್ತು ಪ್ರತಿಯೊಂದು ಸಂದರ್ಭದಲ್ಲೂ ತಾವೆಲ್ಲರೂ ಕೂಡ ನಮಗೆ ಸಹಕಾರವನ್ನು ಕೊಟ್ಟಿದ್ದೀರಿ. ಪ್ರತಿಯೊಂದು ನಿಯೋಗದಲ್ಲಿ ತಾವು ಬಂದಿದ್ದೀರಿ. ನಾವೆಲ್ಲಾ ಕಡೆಗೆ ಹೋಗಿದ್ದೇವೆ. ನಾನೂ ಕೂಡ ವಿಧಾನಸಭೆಯಲ್ಲಿ 34ನೇ ವರ್ಷಕ್ಕೆ ಕಾಲಿಟ್ಟಿದ್ದೇನೆ. ಇವತ್ತು ಎಷ್ಟೋ ಸರ್ಕಾರಗಳನ್ನು ನೋಡಿದರೂ ಕೂಡ ಯಾವ ಸರ್ಕಾರ ಕೆಲಸ ಮಾಡಲಿಲ್ಲ ಎನ್ನುವ ಮಾತನ್ನು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ಸಮ್ಮಿಶ್ರ ಸರ್ಕಾರ ಒಟ್ಟಾಗಿ ಕೇವಲ ಅಧಿಕಾರಕ್ಕೋಸ್ಕರವಲ್ಲ, We have given the result in the State. ಇವತ್ತು ಅದು ಪರ್‌ಸೆಂಟ್ ಬಡ್ಡಿ ಕೊಡತಕ್ಕದ್ದಾಗಲಿ, ಬೇರೆ ರೀತಿಯಲ್ಲಿ ಆಗಲಿ, ಸಿಇಟಿ ಪರೀಕ್ಷೆಯಾಗಲಿ, ಇವತ್ತು ಸುಪ್ರೀಂ ಕೋರ್ಟ್‌ನವರು ಕೂಡ ಒಪ್ಪಿದ್ದಾರೆ. ಎಲ್ಲಾ ಹಂತದಲ್ಲಿ ಕೂಡ ಇವತ್ತಿನ ಸರ್ಕಾರದಲ್ಲಿ ಸರಿಯಾದ ರೀತಿಯಲ್ಲಿ ನಾವು ಕೆಲಸವನ್ನು ಮಾಡಿದ್ದೇವೆ. ತಾವು ವಿರೋಧ ಪಕ್ಷದ ನಾಯಕರೂ ಕೂಡ ಆಗಿದ್ದೀರಿ. ತಮ್ಮ ಸಹಕಾರ ಇಲ್ಲದೇ ಆಗುವುದಿಲ್ಲ. ಇವತ್ತು ಎಲ್ಲಾ ಫ್ಲೋರ್ ಲೀಡರ್ಸ್ ಸೇರಿ ಸರಿಯಾದ ರೀತಿಯಲ್ಲಿ, ಧಾಟಿಯಲ್ಲಿ ನಾವು ಹೋಗುತ್ತಿದ್ದೇವೆ. ಇವತ್ತು ಕನ್ನಡ ಸಂಸ್ಕೃತಿ ಇಲಾಖೆ ನನ್ನ ಕಡೆಗೆ ಇದೆ. ಏಕೆ ಕನ್ನಡ ಸಂಸ್ಕೃತಿ ಇಲಾಖೆ ಮುಖ್ಯಮಂತ್ರಿಗಳ ಬಳಿ ಇದೆ ಎನ್ನುವ ಮಾತು ಬಹಳ ಕೇಳಿಬರುತ್ತಿತ್ತು. ಮಾಸಾಶನವನ್ನು ಕೊಡುವ ಬಗ್ಗೆ 250 ರೂ. ಇತ್ತು. ಅದನ್ನು 500 ರೂ.ಗೆ ಏರಿಸಿದ್ದೇವೆ. ಎರಡು ವರ್ಷಗಳ ಕಾಲ 1665 ಜನರಿಗೆ ಮಾಸಾಶನವನ್ನು ಕೊಡಲಿಕ್ಕೆ ಆಗಲಿಲ್ಲ. ನಾನು ಮೊನ್ನೆ ಒಂದು ಕೋಟಿ 35 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿಸಿದ್ದೇನೆ. ಇವತ್ತು ಕನ್ನಡದ ಬಗ್ಗೆ ಹೆಚ್ಚಿನ ಉತ್ತೇಜನವನ್ನು ಕೊಡತಕ್ಕಂಥ ರೀತಿಯಲ್ಲಿ ಆ ಖಾತೆ ನನ್ನ ಬಳಿಯೇ ಇರುತ್ತದೆ, ಅದನ್ನು ಕೊಡಬಾರದೆಂದು ಅಲ್ಲ. ಅದನ್ನು ನಾವು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದ್ದೇವೆ. ಇವತ್ತಿನ ದಿವಸ ಪಂಪ ಪ್ರಶಸ್ತಿಯಾಗಲಿ, ಕುವೆಂಪು ಶತಮಾನೋತ್ಸವ ಆಚರಣೆಯನ್ನು ಮಾಡುತ್ತಿದ್ದೇವೆ. ಹಿಂದಿನ ಸರ್ಕಾರ ಹೇಳಿದ್ದರು, ನಾವು ಐದು ಎಕರೆ ಜಮೀನನ್ನು ಕೊಡಬೇಕಾಗಿದೆ, ಎಂದು, ನಾನು ಬಂದಮೇಲೆ ಉನ್ನತ ಮಟ್ಟದ ಸಭೆಯನ್ನು ಮಾಡಿ ಈಗಾಗಲೇ ಎರಡು ಎಕರೆ ಜಮೀನನ್ನು ಕೊಟ್ಟು ಕಟ್ಟಡದ ಅಡಿಗಲ್ಲಿಗೆ 50 ಲಕ್ಷ ರೂ. ಗಳನ್ನು ಕೊಟ್ಟಿದ್ದೇವೆ, ಅವರು ಮಾಡುತ್ತಿದ್ದಾರೆ. ಕನ್ನಡ ಸುವರ್ಣ ಮಹೋತ್ಸವವನ್ನು ಮುಂದಿನ ವರ್ಷ ಮಾಡಬೇಕಾಗಿದೆ. ಅದಕ್ಕೆ ಈಗಾಗಲೇ 10 ಕೋಟಿ ರೂಪಾಯಿಗಳನ್ನು ನಾನು ಬಿಡುಗಡೆ ಮಾಡಿದ್ದೇವೆ. ಅಂದರೆ ಹೇಳತಕ್ಕ ತಾತ್ಪರ್ಯ ಇಷ್ಟೆ. ಡಾ. ರಾಜ್‌ಕುಮಾರ್‌ರವರ ಸತ್ಕಾರ ಸಮಾರಂಭವಾಗಲಿ, ಮತ್ತು ಇವತ್ತಿನ ದಿವಸ ಬೇರೆ ಬೇರೆ ಕನ್ನಡದ ಬಗ್ಗೆ ಕೆಲಸ ಮಾಡಿದಂಥ ಏನೊಂದು ನಮ್ಮ ಉನ್ನತ ಮಟ್ಟದ ಸಾಹಿತಿಗಳಿದ್ದಾರೆ, ಇವರುಗಳ ಬಗ್ಗೆ ಈ ಕರ್ನಾಟಕ ರಾಜ್ಯದಲ್ಲಿ ಸರ್ವ ರೀತಿಯ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದಕ್ಕೆ ಇವತ್ತಿನ ದಿವಸ ಸುವರ್ಣ ಕರ್ನಾಟಕದ ಭೂಸಿದ್ಧತೆ ನಡೆಯುತ್ತಿದೆ. ಇನ್ನು ಕನ್ನಡಕ್ಕೆ ರಾಷ್ಟ್ರೀಯ ಸ್ಥಾನಮಾನದ ಬಗ್ಗೆ. ಇದು ನಮ್ಮ ವಾಟಾಳ್ ನಾಗರಾಜ್‌ರವರಿಗೆ ಗೊತ್ತಿದೆ. ಕನ್ನಡಕ್ಕೆ ಕ್ಲಾಸಿಕಲ್ ಲಾಂಗ್ವೇಜ್ ಸ್ಥಾನಮಾನ ಕೊಡತಕ್ಕ ರೀತಿಯಲ್ಲಿ ಶಾಸ್ತ್ರೀಯ ಭಾಷೆ, ಪರಿಗಣನೆ ಮಾಡಬೇಕೆಂಬ ಬಗ್ಗೆ ನಾವು ನಿಯೋಗವನ್ನು ಪ್ರಧಾನಮಂತ್ರಿ ಬಳಿಗೆ

ಒಯ್ಯಬೇಕೆಂದು ಮಾಡಿದ್ದೆ. ಇಲ್ಲೇ ಪ್ರಧಾನ ಮಂತ್ರಿಗಳ ಬಳಿಗೆ ನಿಯೋಗ ಹೋಯಿತು. ಕನ್ನಡದ ಬಗ್ಗೆ ಕಳಕಳಿ ಇರುವ ಪಾಟೀಲ್ ಪುಟ್ಟಪ್ಪನವರಾಗಲಿ, ಬೇರೆ ಬೇರೆ ಎಲ್ಲಾ ಜನರೂ ಕೂಡ ಪ್ರಧಾನಮಂತ್ರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆ. ಕನ್ನಡ ಕ್ಲಾಸಿಕಲ್ ಲಾಂಗ್ವೇಜ್ ಆಗತಕ್ಕ ರೀತಿಯಲ್ಲಿ ಈ ಸಮ್ಮಿಶ್ರ ಸರ್ಕಾರ ಹೆಜ್ಜೆ ಮುಂದಿಟ್ಟಿದೆ. ಮತ್ತು ಕನ್ನಡದ ಬಗ್ಗೆ ಎಲ್ಲಾ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳತಕ್ಕಂಥ ರೀತಿಯಲ್ಲಿ ಸರ್ಕಾರ ಕೆಲಸವನ್ನು ಮಾಡುತ್ತಿದೆ. ಮತ್ತೊಂದು ಮೀನುಗಾರಿಕೆ ವಿಷಯ. ಮೀನುಗಾರಿಕೆಯಲ್ಲಿ ಈ ರಾಜ್ಯದ ಕರಾವಳಿ ಪ್ರದೇಶದಲ್ಲಿರತಕ್ಕ ಸಾಮಾನ್ಯ ಜನರ ಒಂದು ಸಮಸ್ಯೆ ಇದೆ. ಇದಕ್ಕೆ 2400 ಮೀನುಗಾರರಿಗೆ ಮನೆಗಳನ್ನು ನಿರ್ಮಿಸಲು ರಾಜ್ಯ ಸರ್ಕಾರದ 4 ಕೋಟಿ, ಮತ್ತು ಹುಡ್ಕೋದಿಂದ 11 ಕೋಟಿ 50 ಲಕ್ಷ ರೂಪಾಯಿಗಳ ಸಹಾಯ ಪಡೆದಿದ್ದೇವೆ. ಹೊಸದಾಗಿ ಐದು ಸಾವಿರ ಮನೆಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡು 15 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅದನ್ನು ಮಾಡುತ್ತಿದ್ದೇವೆ. ಮೀನುಗಾರರ ಸಂಕಷ್ಟ ಪರಿಹಾರ ನಿಧಿ. ಹತ್ತು ಲಕ್ಷ ರೂಪಾಯಿ ಪ್ರೀಮಿಯಮ್ ಕಟ್ಟತಕ್ಕ ನಿರ್ಧಾರವನ್ನು ಕರ್ನಾಟಕ ಸರ್ಕಾರ ತೆಗೆದುಕೊಂಡಿದೆ. ಮೀನುಗಾರರಿಗೆ ಆಕಸ್ಮಿಕ ನಾವಾದರೆ 50 ಸಾವಿರ ರೂಪಾಯಿ ಕೊಡತಕ್ಕಂಥ ರೀತಿಯಲ್ಲಿ ಇವತ್ತು ಪ್ರಾವಿಜನ್ ಇದೆ. ಕೇರಳದಲ್ಲಿ ಎರಡು ಕೋಟಿ ರೂಪಾಯಿ ಕೊಡುತ್ತಿದ್ದಾರೆ. ಇವತ್ತು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಮೀನುಗಾರರಿಗೆ ಆಕಸ್ಮಿಕ ಸಾವಾದರೆ ಒಂದು ಲಕ್ಷ ರೂಪಾಯಿ ಅವರಿಗೆ ಪರಿಹಾರ ಕೊಡತಕ್ಕದ್ದು ಮಾಡಿ 50 ಸಾವಿರ ರೂಪಾಯಿ ಹೆಚ್ಚಿಸಿದ್ದೇವೆ. ಇನ್ನು ರಿಯಾಯಿತಿ ದರದಲ್ಲಿ ಸೀಮೆಎಣ್ಣೆ ಕೊಡುವ ವಿಚಾರ. ಇವತ್ತು ಕೇರಳದಲ್ಲಿ 400 ಲೀಟರ್ ಸೀಮೆಎಣ್ಣೆ ಕೊಡುತ್ತಿದ್ದಾರೆ. ಈಗಾಗಲೇ ಇಲ್ಲಿ ನಾವು ಪ್ರಸ್ತುತ ಒಂದು ನೂರು ಲೀಟರ್ ಕೊಡುತ್ತಿದ್ದೇವೆ. ಅದಕ್ಕೆ 200 ಲೀಟರ್ ಸೇರಿಸಿದ್ದೇವೆ. ಸಹಕಾರಿ ಸಂಸ್ಥೆಗಳಿಂದ ಪಡೆದ ಸಾಲದ ಮೇಲೆ ಬಡ್ಡಿ ಮನ್ನಾ 1.5 ಕೋಟಿ ರೂಪಾಯಿ, ಅದರ ಬಗ್ಗೆ ಕೂಡ ಈಗಾಗಲೇ ಹೇಳಿದ್ದಾರೆ. ಅದಕ್ಕೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ, ಹೆಚ್ಚಿನ ವಿಚಾರ ಹೇಳತಕ್ಕದ್ದು ಇಲ್ಲ. ಇವತ್ತು ಮೀನುಗಾರರ ಸಮಸ್ಯೆಗಳ ಬಗ್ಗೆ, ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನನ್ನ ಕಡೆ ಇದ್ದ ಹಾಗೆ ಸಾಕಷ್ಟು ಇದರ ಬಗ್ಗೆ ಮಾತುಕತೆ ಆಗಿದೆ, ಚರ್ಚೆ ಆಗಿದೆ. ಸರ್ಕಾರ ಕೊನೆಯದಾಗಿ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇವತ್ತು ಎರಡನೇಯದಾಗಿ ಕರ್ನಾಟಕ ರಾಜ್ಯದಲ್ಲಿ ಗಣಿಗಾರಿಕೆ ವಿಚಾರಕ್ಕೆ ಬರುತ್ತೇನೆ. ನಿನ್ನೆ ಮಾನ್ಯ ಮಾಧುಸ್ವಾಮಿ ಅವರೂ ಕೂಡ ಮಾತನಾಡಿದ್ದಾರೆ. ಇವತ್ತು ಮೆರಿಟ್ ಆಧರಿಸಿ ಮೈನಿಂಗ್ ಪ್ರಕರಣಗಳ ಇತ್ಯರ್ಥದ ವಿಚಾರ. ಇಲ್ಲಿಯವರೆಗೆ ಏನು ವಿಥೌಟ್ ಹಿಯರಿಂಗ್ ಅವರಿಗೆ ಕೊಡುತ್ತಿದ್ದೆವು. ಹಿಯರಿಂಗ್ ಇನ್ ದಿ ಸೆನ್ಸ್, ಇವತ್ತು ನಾನು ನಮ್ಮ ಉನ್ನತ ಮಟ್ಟದ ಅಧಿಕಾರಿಗಳ ಜೊತೆ ಚರ್ಚಿಸಿ ಎಕ್ಸ್‌ಪೋರ್ಟ್ ಮಾಡುವುದನ್ನು ನಿಲ್ಲಿಸಿ ಯಾರು ಗಣಿಯಲ್ಲಿ ಆಸಕ್ತಿ ವಹಿಸಿ ಇವತ್ತು ಪ್ಲಾಂಟ್ ಮಾಡುತ್ತಾರೆ, ನಮ್ಮ ಜೊತೆಗೆ ಇವತ್ತಿನ ದಿವಸ ವಿಶೇಷವಾದಂತಹ ಪ್ಲಾಂಟ್ ಮಾಡಿ ಸಹಾಯ ಆಗತಕ್ಕಂಥ ರೀತಿಯಲ್ಲಿ, ಅಂತಹ ಜನರಿಗೆ ಹೀಯರಿಂಗ್ ಮುಖಾಂತರ ಕೊಡುತ್ತಿದ್ದೇವೆ. ಅಂತಿಮವಾಗಿ ಗ್ರಾಂಟಿಂಗ್ ಅಥಾರಿಟಿ ಕೇಂದ್ರ ಸರ್ಕಾರದವರು. ಅದು ನಾವ್ಯಾರೂ ಕೊಡತಕ್ಕದ್ದು ಅಲ್ಲ. ನಾವು ಶಿಫಾರಸ್ಸು ಮಾಡಿ ಕಳುಹಿಸುತ್ತಿದ್ದೇವೆ. ಇದರಿಂದ ಮತ್ತೆ ಆದಾಯ ಕೂಡ ಹೆಚ್ಚಿಗೆ ಆಗಿದೆ. ನಾನು ಒಪ್ಪುತ್ತಿದ್ದೇನೆ. ಇವತ್ತು ಗಣಿಗಾರಿಕೆಯಲ್ಲೂ ಸಾಕಷ್ಟು ಅಪರ-ತಪರ ಆಗುತ್ತಿದೆ. ಸಮಗ್ರವಾದಂತಹ ಒಂದು ನಿಯಂತ್ರಣ ಮಾಡತಕ್ಕಂಥ ರೀತಿಯಲ್ಲಿ, ವೀರಪ್ಪನ್ ಸತ್ತು ಹೋದ

ಮೇಲೆ ಅಲ್ಲಿ ಮೈನಿಂಗ್‌ನಲ್ಲಿ ಮಹದೇಶ್ವರ ಬೆಟ್ಟದಲ್ಲಿ ಆಗತಕ್ಕ ಗಲಾಟೆ ಏನು ಇದೆ? ಇವುಗಳಿಗೆಲ್ಲಾ ಸಮಗ್ರವಾದಂತಹ ನೀತಿ ಮಾಡತಕ್ಕ ರೀತಿಯಲ್ಲಿ ಕ್ರಮ ತೆಗೆದುಕೊಟ್ಟಿದ್ದಂತೆ ಮರಳು ಸಾಗಾಣಿಕೆ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಸಭೆಗಳನ್ನು ನಾವು ಮಾಡಿದ್ದೇವೆ. ಸಭೆಗಳನ್ನು ಮಾಡಿ ಅದು ಇಲ್ಲಿಯವರೆಗೆ ಇರಲಿಲ್ಲ. ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರಿಗೆ ಗೊತ್ತು. ನೀವು ಕೂಡ ಸಭೆಯಲ್ಲಿ ಹಾಜರಿದ್ದೀರಿ. ಇವತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್, ತಹಶೀಲ್ದಾರ್ ಅವರು ಒಳಗೊಂಡಂತೆ ಒಂದು ಸಮಿತಿಯನ್ನು ನಾವು ಮಾಡಿದ್ದೇವೆ. ಇವತ್ತು ಒಂದು ಮೀಟರ್ ಮಾಡತಕ್ಕ ಕಡೆ ತ್ರೀ ಮೀಟರ್ ಹೋಗುತ್ತಿದ್ದಾರೆ. ಕೆಳಗಡೆ ಹೋಗುತ್ತಿದ್ದಾರೆ. ಆ ಭಾಗದಲ್ಲಿ ಕೋಲಾರ ಜಿಲ್ಲೆಯಲ್ಲಿ ಆಗುತ್ತಿದೆ. ಅದಕ್ಕೆ ಇವತ್ತಿನ ದಿವಸ ನೀರಿಗೆ ಕೂಡ ತೊಂದರೆ ಆಗುತ್ತಿದೆ. ಅಲ್ಲಿ ಒಂದು ಸಮಗ್ರವಾದಂತಹ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೇವೆ. ರಾಜಧನ ಏನು ಇದೆ, ಮೊದಲು 70 ಕೋಟಿ ರೂಪಾಯಿ ಹೆಚ್ಚಳದಿಂದ ಇದು 200 ಕೋಟಿ ರೂ. ಆಯಿತು. ಇದರಿಂದ 270 ಕೋಟಿ ರೂಪಾಯಿ ನಮಗೆ ಹೆಚ್ಚಿನ ಒಂದು ಹೆಚ್ಚಳ ಆಗಿದೆ. ಮರಳು ಬಗ್ಗೆ ಸಹ ಹತ್ತು ರೂಪಾಯಿ ಶುಲ್ಕವನ್ನು ಪ್ರತಿ ಲಾರಿ ಮಾಲೀಕರು ಕೊಡಬೇಕು. ಮೊನ್ನೆ ಲಾರಿಗಳ ಮುಷ್ಕರ ಆಯಿತು. ಅವರ ಜೊತೆ ಸಮಾಲೋಚನೆ ಮಾಡಿ ಅವರಿಗಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಿದ್ದೇವೆ. ಇವತ್ತು ಲೋಡ್ ಹೋಗತಕ್ಕ ರೀತಿಯಲ್ಲಿ ಏನು ಹೋಗುತ್ತಿದೆ? ನಾನು ಮತ್ತು ಮಾನ್ಯ ಖರ್ಗೆಯವರೂ ಕೂಡಿ ನಿಯಂತ್ರಣ ಮಾಡತಕ್ಕ ರೀತಿಯಲ್ಲಿ ನೋಡಿದ್ದರಿಂದ ಇದು ಕಡಿಮೆ ಆಗಿದೆ. ಅದನ್ನು ಬಗೆಹರಿಸುತ್ತಿದ್ದೇವೆ. ಇವತ್ತು ದೊಡ್ಡ ಸಮಸ್ಯೆ ಎಂದರೆ ಅದು ನಮ್ಮ ರಾಜ್ಯಸರ್ಕಾರದ ಬಳಿ ಇದೆ. ಇವತ್ತು ಗಣಿ ಬಗ್ಗೆ, ಕನ್ನಡ ಮತ್ತು ಸಂಸ್ಕೃತಿ ಬಗ್ಗೆ, ಮೀನುಗಾರಿಗೆ ಬಗ್ಗೆ. ನಾವೆಲ್ಲಾ ಕಡೆಗೂ ದೊಡ್ಡದಾಗಿ ಬೇರೆ ವಿಚಾರಗಳಿಗೆ ಹೋಗಲಾರದೆ ಇವತ್ತು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಇದೊಂದು. ಎರಡನೆಯದಾಗಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್. ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಪ್ರಾಮುಖ್ಯವಾದಂತಹ ವಿಚಾರ. ಇದು 1996ರಲ್ಲಿ ಪ್ರಾರಂಭ ಆಯಿತು. ಶ್ರೀ ಅನಂತ್‌ಕುಮಾರ್ ಅವರು ಸಂಬಂಧಪಟ್ಟ ಮಂತ್ರಿ ಆಗಿದ್ದರು. ಶ್ರೀ ಸಿ.ಎಂ. ಇಬ್ರಾಹಿಂ ಸಂಬಂಧಪಟ್ಟ ಮಂತ್ರಿ ಆಗಿದ್ದರು. ಎಷ್ಟೋ ಮುಖ್ಯಮಂತ್ರಿಗಳು ಬಂದರು, ಹೋದರು. ಆದರೆ ಸಮ್ಮಿಶ್ರ ಸರ್ಕಾರದಲ್ಲಿ ಇವತ್ತು ನಾನೇನು ಹೇಳುತ್ತೇನೆ ಅಂದರೆ, ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಂಪುಟದ ಸದಸ್ಯರೂ ಕೂಡಿ ಇವತ್ತು ಐಟಿ ಬಿಟಿ ಸೆಕ್ಟಾರ್ ಏನು ಇದೆ, ಇವತ್ತು ಇನ್‌ಫೋಸಿಸ್‌ಗೆ ಇಲ್ಲಿಯವರೆಗೆ 37 ರಾಷ್ಟ್ರಗಳ, ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಬಂದು ಭೇಟಿ ಕೊಟ್ಟಿದ್ದಾರೆ. ಇಂದು ನಾವು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡಬೇಕಾಗಿದೆ. ಅಂತಿಮವಾಗಿ 2ನೇ ಜುಲೈಗೆ ಕೆಲಸ ಪ್ರಾರಂಭ ಆಗಿದೆ. ಫೈನಾನ್ಸಿಯಲ್ ಕ್ಲೋಷರ್ ಕೂಡ ಇದೆ. ನಿನ್ನೆ ನಾನು ಶ್ರೀ ರಾಜಶೇಖರ ರೆಡ್ಡಿಯವರ ಜೊತೆಯಲ್ಲಿ ಇದ್ದೆ. ಅಲ್ಲಿ ಶ್ರೀಮತಿ ಸೋನಿಯಾ ಗಾಂಧೀಯವರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಇನಾಗ್ಯುರೇಷನ್ ಮಾಡಿದರು. ನಾನು ಮತ್ತು ಮಾನ್ಯ ಸಿಂಧ್ಯರವರು ಅಲ್ಲಿ ಹೇಳಿದೆವು. ಏನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆ. ಒಂದು ಸಾವಿರ ಜನರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಇದು ಬಹಳ ದಿವಸದಿಂದ ಇರುವಂಥಾದ್ದು ಎಂದು. ಶ್ರೀ ವಾಟಾಳ್ ನಾಗರಾಜ್ ಅವರೇ, ಈ ಕಡೆ ನೋಡಿ. ರಷ್ಯಾ ದೇಶದ ಅಧ್ಯಕ್ಷ ಪುಟನೋ ಅವರು ಬಂದಿದ್ದರು. ಪುಟಿನೋ ಅವರು ಬಂದ ಮೇಲೆ

ಅವರು ಕೇಳಿದರು. ಥ್ಯಾಂಕ್ಯೂ ಮಿ.ಸಿಂಗ್, ಏರ್‌ಪೋರ್ಟ್ ಎಂದರು, ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಎಂದರು. ಏಕೆಂದರೆ ರಷ್ಯಾದಲ್ಲೇ ಮಾತನಾಡುತ್ತಾರೆ. ಅವರು ಅಷ್ಟೇ ಹೇಳಿದರು. ಡೆಫನೆಟ್‌ಲಿ ಆರ್ ಯು ಗೋಯಿಂಗ್ ಟು ಡು ಇಟ್ ಎಂದು ಹೇಳಿದರು. ಇವತ್ತು ಇಂಟರ್‌ನ್ಯಾಷನಲ್ ಲೆವೆಲ್‌ನಲ್ಲಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ನಗರ ಏನು ಬೆಳೆಯುತ್ತಿದೆ, ಎಲ್ಲಿ ತಾವು ಹುಟ್ಟಿದ್ದೀರಿ, ಆ ನಗರ ಬಹಳ ಮುಂದೆ ಹೋಗುತ್ತಿದೆ, ಅಭಿವೃದ್ಧಿ ಆಗುತ್ತಿದೆ. ಇಂತಹದಕ್ಕೆ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬರಲೇಬೇಕು. ಅದು ನಮ್ಮ ಕಾಲದಲ್ಲಿ ಮಾಡಿದ್ದು. ದಿಸ್ ಈಸ್ ಒನ್ ಆಫ್ ದಿ ಅಚೀವ್‌ಮೆಂಟ್. ಎಂದೂ ಆಗಲಾರದಂತಹ ಸಾಧನೆಯನ್ನು ಸಮ್ಮಿಶ್ರ ಸರ್ಕಾರದಿಂದ ತೆಗೆದುಕೊಂಡಿದ್ದೇವೆ. ಎರಡನೆಯದಾಗಿ ರೈಲ್ ಪ್ರಾಜೆಕ್ಟ್ ಇದೆ. ಇದಕ್ಕೆ ಮೊದಲೇ 1983ರಲ್ಲಿ ಸರ್ವೆ ಆಗಿದೆ. ಈಗಾಗಲೇ ಅದಕ್ಕೆ ಪ್ಲಾನಿಂಗ್ ಕಮೀಷನ್ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಮತ್ತು ನಮ್ಮ ಸಂಪುಟದಲ್ಲಿ ಕೂಡ ಅದರ ಬಗ್ಗೆ ನಾವು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇವತ್ತು ಮೆಟ್ರೋ ರೈಲ್ ಪ್ರಾಜೆಕ್ಟ್‌ನಲ್ಲಿ ಪಿಐಬಿ ಸಭೆಯೂ ಮತ್ತೆ ಮುಂದಿನ ತಿಂಗಳು ಇದೆ. ಅದನ್ನೂ ಮಾಡಿದರೆ 16 ಲಕ್ಷ ಜನರಿಗೆ ಇವತ್ತು ಟ್ರಾಫಿಕ್ ಕಂಜೆಕ್ಷನ್ ಏನು ಇದೆ ಅವರುಗಳಿಗೆ ಹೋಗಿ ಬರತಕ್ಕಂಥ ರೀತಿಯಲ್ಲಿ ಸಹಾಯ ಆಗುತ್ತದೆ. ಇದು ಸಮ್ಮಿಶ್ರ ಸರ್ಕಾರದ ಸಾಧನೆ. ಬಹಳಷ್ಟು ವಿಷಯಗಳ ಬಗ್ಗೆ ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ರೈತರ ಬಗ್ಗೆ ಬಡ್ಡಿ ಮನ್ನಾ ಮಾಡಿದ್ದೇವೆ. ಸಾಕಷ್ಟು ಬ್ಯಾಂಕಿನ ಮುಖಾಂತರ ಇವತ್ತು ಸಾಲ ಕೊಡತಕ್ಕ ರೀತಿಯಲ್ಲಿ ಎಲ್ಲಾ ಕೆಲಸ ಕಾರ್ಯಗಳ ಮಧ್ಯದಲ್ಲಿ ಕೂಡ ಅಂತರ್‌ರಾಷ್ಟ್ರ ಮಟ್ಟದಲ್ಲಿ ಬೆಳೆಯತಕ್ಕಂಥ ಬೆಂಗಳೂರು ನಗರಕ್ಕೆ ಕೂಡ ನಾವು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಫ್ಲೈ ಓವರ್ಸ್ ಆಗುತ್ತಿದೆ, ಹೈಟೆಕ್ ಸಿಟಿ ಮಾಡುತ್ತಿದ್ದೇವೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿನವರು 491 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ತರವಾದ ಕೆಲಸ ಆಗುತ್ತಿದೆ. ನಾಳೆ ಶ್ರೀ ಗುಲಾಂ ನಬಿ ಆಜಾದ್ ಅವರು ಬರುತ್ತಿದ್ದಾರೆ. ಕಾವೇರಿ ನಾಲ್ಕನೇ ಹಂತ ಯೋಜನೆ ಇದೆ. ಈಗ ಜಪಾನ್ ಬ್ಯಾಂಕ್‌ನಿಂದ 3383 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಜಪಾನ್ ಬ್ಯಾಂಕ್‌ನವರು ಒಪ್ಪಿದ್ದಾರೆ. ಈಗಾಗಲೇ ಎಂಓಯು ಸೈನ್ ಆಗಿದೆ. ನಾಳೆ ಕೇಂದ್ರದ ಮಂತ್ರಿಯಾದಂತಹ ಶ್ರೀ ಗುಲಾಂ ನಬಿ ಆಜಾದ್ ಅವರು ಶಂಕು ಸ್ಥಾಪನೆಗೆ ಬರುತ್ತಿದ್ದಾರೆ. ನಾಳೆ ಅಲ್ಲಿ ಕೂಡ ಕೆಲಸ ಪ್ರಾರಂಭ ಆಗುತ್ತದೆ. ಇದು ಓಎನ್‌ಜಿಸಿ ಪ್ರಾಜೆಕ್ಟ್ ಬಹಳ ಕಾಂಟ್ರವರ್ಷಿಯಲ್. ಆಗಿತ್ತು. ನೀವೇನು ತರುತ್ತೀರಿ ಓಎನ್‌ಜಿಸಿ ಪ್ರಾಜೆಕ್ಟ್? ಶ್ರೀ ಮಣಿ ಶಂಕರ್ ಅಯ್ಯರ್ ಮಧ್ಯದಲ್ಲಿ ಬರುತ್ತಿದ್ದಾರೆ ಎಂದರು. ಮಾನ್ಯ ಪ್ರಧಾನ ಮಂತ್ರಿಗಳನ್ನು ನಾನು ಮತ್ತು ಮಾನ್ಯ ಕೈಗಾರಿಕಾ ಸಚಿವರು ಕೂಡಿ ಭೇಟಿ ಆದೆವು. ಮಾನ್ಯ ಖರ್ಗೆಯವರು, ಮಾನ್ಯ ಹೆಚ್.ಕೆ. ಪಾಟೀಲ್ ಅವರು ಮತ್ತು ನಮ್ಮ ಬೋಸರಾಜು ಅವರೂ ಕೂಡ ನಮ್ಮ ಜೊತೆಯಲ್ಲಿದ್ದರು. ನಾವು ಮಾನ್ಯ ಪ್ರಧಾನ ಮಂತ್ರಿಗಳಿಗೆ ಹೇಳಿದೆವು. ಇವತ್ತು ಪೆಟ್ರೋ ಕೆಮಿಕಲ್ ಪ್ರಾಜೆಕ್ಟ್ ಏನು ಇದೆ, ಮಂಗಳೂರು ಹಾಸನ ಬೆಂಗಳೂರಿಗೆ ಸಹಾಯ ಆಗತಕ್ಕಂಥ ರೀತಿಯಲ್ಲಿ ಇದು ನಮಗೆ ಬೇಕೇ ಬೇಕು ಎನ್ನತಕ್ಕ ರೀತಿಯಲ್ಲಿ ಹೇಳಿದಾಗ 15ನೇ ಜುಲೈಗೆ ಮಾನ್ಯ ಪ್ರೈಮ್ ಮಿನಿಸ್ಟರ್ ಅವರು ಅದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ. 21 ಸಾವಿರ ಕೋಟಿ ರೂಪಾಯಿ ವೆಚ್ಚದ ಮೇಲೆ ಬರುವ ಇದು ಒಂದು ಆರ್ಥಿಕ ಕ್ಷೇತ್ರದಲ್ಲಿ ಬಹಳ ಮಹತ್ವವಾದಂತಹ ವಿಚಾರ ಸಮ್ಮಿಶ್ರ ಸರ್ಕಾರ ಈ ಕೇಂದ್ರ ಸರ್ಕಾರದಲ್ಲಿರತಕ್ಕ ಪ್ರಧಾನ ಮಂತ್ರಿಗಳು,

ಒಪ್ಪಿಗೆಯನ್ನು ಕೊಟ್ಟಮೇಲೆ ಇವತ್ತು 21 ಸಾವಿರ ಕೋಟಿ ರೂಪಾಯಿ ಪೆಟ್ರೋ ಕೆಮಿಕಲ್ ಪ್ರಾಜೆಕ್ಟ್ ಕರ್ನಾಟಕ ರಾಜ್ಯಕ್ಕೆ ಬಂದಿದೆ. ಇದರ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ಎಲ್ಲರೂ ಕೂಡ ಇದರ ಬಗ್ಗೆ ಅಭಿನಂದನೆಯನ್ನು ಕೂಡ ಸಲ್ಲಿಸಿದ್ದೇವೆ. ಇವತ್ತು ಸರ್ಕಾರ ಎಲ್ಲಿದೆ? ಏನೂ ಮಾಡುತ್ತಿಲ್ಲ? ಏನು ನಡೆಯುತ್ತಿದೆ ಎನ್ನತಕ್ಕ ರೀತಿಯಲ್ಲಿ ಮಾತುಗಳು ಬರುತ್ತಿವೆ. ಇವತ್ತು ಎರಡೂ ಪಕ್ಷಗಳು ಕೂಡ ಕೆಲಸ ಮಾಡತಕ್ಕಂಥ ರೀತಿಯಲ್ಲಿ ನಮ್ಮ ರಾಜಕೀಯ ವ್ಯತ್ಯಾಸಗಳು ಏನೇ ಇದ್ದರೂ ಕೂಡ, ಅಭಿವೃದ್ಧಿ ಮಾಡತಕ್ಕ ರೀತಿಯಲ್ಲಿ ಒಂದಾಗಿದ್ದೇವೆ. ಒಂದಾಗಬೇಕಾದರೆ ಅದಕ್ಕೆ ಕಮಿಟ್‌ಮೆಂಟ್ ಬೇಕು. ಮನಃಪೂರ್ವಕವಾಗಿ ಕೆಲಸ ಮಾಡುವಂತಹ ಮನೋಬಲ ಬೇಕು, ಪ್ರವೃತ್ತಿ ಬೇಕು. ಅದು ನಮ್ಮಲ್ಲಿದೆ. ಇವೆಲ್ಲವನ್ನೂ ಮಾಡಲಿಕ್ಕೆ 14 ತಿಂಗಳ ಅವಧಿಯಲ್ಲಿ ನಾವೆಲ್ಲರೂ ಕೂಡ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇವತ್ತು ನಕ್ಸಲೈಟ್ಸ್ ಚಟುವಟಿಕೆ ನಡೆಯುತ್ತಿದೆ. ಅದರ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ. ಇವತ್ತು ನಮ್ಮ ಬೆಂಗಳೂರು ನಗರದಲ್ಲಿ ಹೋದ ಸಲ ನಾನು ಹೇಳಿದ್ದೆ. ಇವತ್ತು ಲೈವ್‌ಬ್ಯಾಂಡ್ ಏನು ನಡೆಯುತ್ತಿದೆ, ಅದನ್ನು ನಿಲ್ಲಿಸಿದ್ದೇವೆ. ಇವತ್ತು ನಮ್ಮ ಪೋಲೀಸ್ ಕಮೀಷನರ್ ಅವರು ಸಿಟಿಯಲ್ಲಿದ್ದಾರೆ. ಇವತ್ತು ಅದಕ್ಕೆ ನಾವು ಬಹಳ ಕಡಿವಾಣ ಹಾಕಿದ್ದೇವೆ. ಎಲ್ಲಿಯೂ ಕೂಡ ಅದರ ಸ್ವಲ್ಪ ಕೂಡ ಸಪ್ಪಳ ಬರುತ್ತಿಲ್ಲ. ಎಲ್ಲಾ ಕಡೆ ಬಂದ್ ಮಾಡತಕ್ಕದ್ದು ಮಾಡಿದ್ದೇವೆ. ಟ್ರಾಫಿಕ್ ಕಂಜೆಕ್ಷನ್ ಬಗ್ಗೆ ನಾವು ಇವತ್ತು ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಕೆಲಸ ಮಾಡುತ್ತಿದ್ದೇವೆ. ಇವತ್ತು ಇದನ್ನು ನಿಯಂತ್ರಣ ಮಾಡತಕ್ಕಂಥ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ವ್ಯವಸ್ಥಿತವಾದಂತಹ ರೀತಿಯಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇವೆಲ್ಲವನ್ನೂ ಕೂಡ ನಿಮ್ಮೆದುರಿಗೆ ಇಟ್ಟಿದ್ದೇವೆ. ಇವೊತ್ತು ವಿರೋಧ ಪಕ್ಷದ ನಾಯಕರಾದ ತಾವು ಎಲ್ಲಾ ಕಡೆಗಳಲ್ಲೂ 'ನಿಮ್ಮ resource mobilisation ಹೆಚ್ಚಾಗಿದೆ. ನಿಮ್ಮ plan outlay ಹೆಚ್ಚಾಗಿದೆ. ನೀವು ಹೇಳುತ್ತಿದ್ದ ಹಣ ರಿಲೀಸ್ ಆಗಿಲ್ಲ. ಹಣ ಮುಟ್ಟಿಲ್ಲ' ಎನ್ನತಕ್ಕಂಥ ರೀತಿಯಲ್ಲಿ ನೀವು ಹೇಳಿದ್ದೀರಿ. ಈಗಾಗಲೇ ಉಪ ಮುಖ್ಯಮಂತ್ರಿಗಳು ಹೇಳಿರುವಂತೆ, ಎಲ್ಲೆಲ್ಲಿ ನಾವು ಹಣ ಕೊಟ್ಟಿದ್ದೇವೆಯೋ, ಅಲ್ಲೆಲ್ಲಾ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಪಂಚಾಯತ್ ರಾಜ್ ಚುನಾವಣೆಗಳು ಏನು ಆಗಿವೆ, 92,402 ಪಂಚಾಯತ್ ಸದಸ್ಯರು ಚುನಾಯಿತರಾಗಿದ್ದಾರೆ. ಯಾವುದೇ ಸದ್ದು-ಗದ್ದಲ ಇಲ್ಲ, ಗಲಾಟೆ ಆಗಿಲ್ಲ, ಗೋಲಿಬಾರ್ ಆಗಿಲ್ಲ, ಇವೇನೂ ಆಗಲಾರದ ರೀತಿಯಲ್ಲಿ ತಳ ಹಂತದಲ್ಲಿ ಆಗತಕ್ಕಂತ ಪಂಚಾಯತ್ ಚುನಾವಣೆ ಏನಿದೆ, ನಮ್ಮ ರಾಜ್ಯದ ಕಾನೂನು ಸುವ್ಯವಸ್ಥೆ ಹೇಗಿದೆ ಎನ್ನುವುದನ್ನು ಕೂಡ ತೋರಿಸಿಬಿಡುತ್ತದೆ. ಇವೊತ್ತು ಪಂಚಾಯತ್ ರಾಜ್‌ಗೆ ಹೆಚ್ಚಿನ ಅಧಿಕಾರ ಕೊಡತಕ್ಕಂಥ ರೀತಿಯಲ್ಲಿ ರಾಜೀವ್‌ಗಾಂಧಿಯವರ ಸ್ವಪ್ನ ಏನಿತ್ತು. 72 ಮತ್ತು 73ನೇ ತಿದ್ದುಪಡಿ ಮಾಡಿ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಬಡವರಿಗೆ, ಎಲ್ಲಾ ವರ್ಗದವರಿಗೆ ಪ್ರಾತಿನಿಧ್ಯ ಕೊಡತಕ್ಕಂಥ ರೀತಿಯಲ್ಲಿ ಇವೊತ್ತು ನಾವು ಮಾಡುತ್ತಿದ್ದೇವೆ, ಇಡೀ ರಾಷ್ಟ್ರದಲ್ಲಿ ಕರ್ನಾಟಕ ಬಹಳ ಮುಂದೆ ಬಂದಿದ್ದು, ನಾವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದೇವೆ. ಇವೊತ್ತು ನಾವು ಬಹಳಷ್ಟು ಹಣವನ್ನೂ ಕೂಡ ಅದಕ್ಕೆ ಬಿಡುಗಡೆ ಮಾಡಿದ್ದೇವೆ. ಒಂದು ಮಾತು ಏನಿದೆಯೆಂದರೆ, ಶಾಸಕರಿಗೆ ಹೆಚ್ಚಿನ ಅಧಿಕಾರ ಕೊಡಬೇಕು ಎಂದು ಇದರಲ್ಲಿ ಶಾಸಕರ ಪಾತ್ರ ಏನೂ ಇಲ್ಲ. ಪಂಚಾಯತ್ ಚುನಾವಣೆಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ, ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಮತ್ತು ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಿಗೆ ಹೆಚ್ಚಿನ

ಅಧಿಕಾರ ಕೊಡತಕ್ಕ ಕಾಲದಲ್ಲಿ ಚುನಾಯಿತ ಶಾಸಕರಿಗೂ ಕೂಡ ಒಂದು ವಿಜಿಲೆನ್ಸ್ ಕಮಿಟಿ ಮಾಡಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. Overall development ಏನಾಗುತ್ತದೆ, ಅದರ ಬಗ್ಗೆ ನಿರ್ವಹಣೆ ಮಾಡತಕ್ಕಂಥ ರೀತಿಯಲ್ಲಿ ಶಾಸಕರಿಗೆ ಕೊಟ್ಟಿದ್ದೇವೆ. ಮತ್ತು ಎಲ್ಲಾ ಸಮಿತಿಗಳೂ ಕೂಡ ಅತಿ ಶೀಘ್ರವಾಗಿ 5ನೇ ತಾರೀಖಿನೊಳಗಾಗಿ ರಾಜ್ಯದಲ್ಲಿ ಘಟನೆ ಮಾಡತಕ್ಕಂಥ ರೀತಿಯಲ್ಲಿ ತಮ್ಮೆದುರಿಗೆ ಸಭಾಧ್ಯಕ್ಷರ ಕೋಣೆಯಲ್ಲಿ ಆದಂಥ ಸಭೆಯಲ್ಲಿ ನಾನು ಮಹದೇವಪ್ಪನವರಿಗೂ ಹೇಳಿದ್ದೇನೆ, ನಮ್ಮ ಕಂದಾಯ ಸಚಿವರಿಗೂ ಕೂಡ ಹೇಳಿದ್ದೇನೆ. ಎಲ್ಲಾ ಸಮಿತಿಗಳನ್ನೂ ಕೂಡ ಪೂರ್ಣವಾಗಿ ಮಾಡುತ್ತೇವೆ. ಬಹಳಷ್ಟು ಕೆಲಸ–ಕಾರ್ಯಗಳನ್ನು ಹೇಳುವುದಕ್ಕೆ ಇವೊತ್ತು ಸಮಯ ಬಹಳ ಕಡಿಮೆ ಇದೆ. ಒಟ್ಟಾರೆ ಇವೊತ್ತು ಬಹಳ ಸುಸೂತ್ರವಾಗಿ ನಡೆಯತಕ್ಕಂಥ ಶಾಸನಸಭೆಯಲ್ಲಿ ತಾವೆಲ್ಲರೂ ಕೂಡ ಮನ ಬಿಚ್ಚಿ ಮಾತನಾಡಿದ್ದೀರಿ, ನಾವೂ ಕೂಡ ಕೇಳಿದ್ದೇವೆ. ಸ್ವಲ್ಪ ಅಲ್ಲಿ ಇಲ್ಲಿ, ರಾಜಕೀಯ, ಹೆಚ್ಚು–ಕಡಿಮೆ ವ್ಯತ್ಯಾಸದಲ್ಲಿ ಮೂರ್ನಾಲ್ಕು ದಿವಸ ನಾವೆಲ್ಲಾ ಕಡೆಗಳಲ್ಲೂ ಇರುವುದಕ್ಕಾಗಲಿಲ್ಲ, ಬೇರೆ ಕಡೆಗೆ ಹೋಗಬೇಕಾಗಿತ್ತು. ಆದರೂ ಕೂಡ ಇವೊತ್ತು ವಿರೋಧ ಪಕ್ಷದ ನಾಯಕರು ಮತ್ತು ಫ್ಲೋರ್ ಲೀಡರ್ಸ್ ಏನೇನು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಅದು ಸರ್ಕಾರದ ಗಮನದಲ್ಲಿದೆ. ನಮಗೆ ಒಂದು ತರಹದ ಅವಕಾಶ ಸಿಕ್ಕಿದೆ. ಇವೊತ್ತು ನಾವೂ ಕೂಡ ಎಂಟು ಭಾರಿ ಶಾಸಕರಾಗಿ, ನಾನು ಮತ್ತು ಖರ್ಗೆಯವರು ಈ ಮನೆಗೆ ಬಂದಿದ್ದೇವೆ. ಜನರಿಗೆ ಅನುಕೂಲ ಮಾಡತಕ್ಕಂಥ ಕಳಕಳಿ ಇದೆ. ಆ ಒಂದು political philosophy ನಮ್ಮ ಮನಸ್ಸಿನಲ್ಲಿದೆ. ಇವೊತ್ತು ರಾಷ್ಟ್ರದಲ್ಲಿ ಯಾವ ರೀತಿ ದೇವರಾಜ ಅರಸುರವರು ಎಂಟು ವರ್ಷಗಳ ಕಾಲ ರಾಜ್ಯದಲ್ಲಿ ಕೆಲಸ–ಕಾರ್ಯಗಳನ್ನು ಮಾಡಿದ್ದಾರೆ, ಆ ರೀತಿಯಾದ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಕಲ್ಪಿಸಿಕೊಡತಕ್ಕಂಥ ರೀತಿಯಲ್ಲಿ ನಾವೇ ಅಲ್ಲದೆ, ಇವೊತ್ತು ವಿಧಾನಸಭೆಗೆ ತಮ್ಮನ್ನೂ ಕೂಡ ಬಹಳಷ್ಟು ಸಂಖ್ಯೆಯಲ್ಲಿ ಜನರು ಆರಿಸಿ ಕಳುಹಿಸಿದ್ದಾರೆ. ವಿಧಾನಸಭೆಯಲ್ಲಿ ಮಾನ್ಯ ಮಾಧುಸ್ವಾಮಿಯವರೂ ಕೂಡ ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು, ರಾಜೇಂದ್ರನ್‌ರವರು, ಜಯಪ್ರಕಾಶ್ ಹೆಗ್ಡೆಯವರು, ಎಲ್ಲರೂ ಕೂಡ ಮತ್ತು ಇತರ ಕಿರಿಯ ಶಾಸಕರುಗಳೆಲ್ಲರೂ ಪ್ರಸ್ತಾಪ ಮಾಡಿದ್ದಾರೆ. ರಾಜ್ಯದ ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತರುತ್ತಾ ಕಳಸಾಬಂಡೂರಿ ಬಗ್ಗೆ ತಾವು ಹೇಳಿದ್ದೀರಿ. ನಾನು ಹೇಳಿದೆ ಏನೆಂದರೆ ರಾಣೆಯವರೊಂದಿಗೆ ಮಾತನಾಡಿದ್ದೇನೆ. ಐದನೇ ತಾರೀಖಿನವರೆಗೆ ವಿಧಾನಸಭೆ ನಡೆಯುತ್ತಿದೆ. ತಾವು ನೋಡಿ ನಿರ್ಣಯ ತೆಗೆದುಕೊಳ್ಳಿ. ರಾಣೆಯವರು ಒಂದು ವೇಳೆ ಸಮಯ ಕೊಟ್ಟರೆ, ಸರ್ವ ಪಕ್ಷಗಳ ನಿಯೋಗ ಅವರ ಬಳಿಗೆ ಹೋಗಬೇಕು. ನಿಯೋಗ ಹೋಗಿ ಅವರ ಮನವೊಲಿಸುವ ಕೆಲಸ ಮಾಡೋಣ. ತದನಂತರ, ಪ್ರಧಾನಮಂತ್ರಿಗಳ ಬಳಿಗೆ ಹೋಗಿ, ಇವೊತ್ತು ಹುಬ್ಬಳ್ಳಿ–ಧಾರವಾಡದಲ್ಲಿ ಕುಡಿಯುವ ನೀರಿಗೆ ಏನು ತೊಂದರೆ ಇದೆ, ಅದಕ್ಕೆ ನಾನು ವಚನ ಕೊಟ್ಟಿದ್ದೇನೆ. ಪ್ರಧಾನಮಂತ್ರಿಗಳ ಹತ್ತಿರ ಸಮಯ ತೆಗೆದುಕೊಳ್ಳುತ್ತೇವೆ. ಅಲ್ಲಿಗೆ ಹೋಗಿ ನಾವು ಮಾತನಾಡೋಣ. ಯಾವಾಗಲೂ ಕೂಡ ಈ ಸದನದಲ್ಲಿ ಸಿಇಟಿ ಪ್ರಶ್ನೆಯಾಗಲಿ, 351 ಪ್ರಶ್ನೆಯಾಗಲಿ ಮತ್ತು ಕೃಷ್ಣಾ ಗೋಧಾವರಿ ಪ್ರಶ್ನೆಯಾಗಲಿ ಯಾವ್ಯಾವ ಆಶ್ವಾಸನೆಗಳನ್ನು ಈ ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಕೊಟ್ಟಿದ್ದೇನೆ, ಅದೆಲ್ಲವನ್ನೂ

ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಭರವಸೆಗಳನ್ನು ಈಡೇರಿಸಿದ್ದೇನೆ. ಇವುಗಳನ್ನೂ ಕೂಡ ಕಾರ್ಯಗತ ಮಾಡೋಣ. ಮತ್ತು ರೈತರ ಬಗ್ಗೆ ಈಗಾಗಲೇ ನಮ್ಮ ವಿದ್ಯುತ್ ಖಾತೆ ಮಂತ್ರಿಗಳು ಕೂಡ ಹೇಳಿದ್ದಾರೆ. ಅದರ ಬಗ್ಗೆ ಗಮನದಲ್ಲಿಟ್ಟುಕೊಂಡು ಸಂಪುಟದಲ್ಲಿ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ಇದೊಂದು ಒಳ್ಳೆಯ ಮೂವತ್ತು ದಿವಸಗಳ ಅಧಿವೇಶನವಾಗಿದೆ. Appropriation Bill ಬಗ್ಗೆ ಈಗ ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ. ಅದನ್ನು ಇಟ್ಟುಕೊಂಡು ತಮ್ಮ ಸಹಕಾರಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : 5ನೇ ತಾರೀಖಿಗೆ ಅಧಿವೇಶನ ಮುಗಿಸಿದ ನಂತರ ನಾವೆಲ್ಲರೂ ಹೋಗುತ್ತಿದ್ದೇವೆ. ಎಲ್ಲಾ ಕಡೆಗಳಲ್ಲಿ ಫ್ಲಡ್‌ನಿಂದ ರಸ್ತೆಗಳು ಮತ್ತು ಕೆರೆ ಕಟ್ಟೆಗಳೆಲ್ಲವೂ ಒಡೆದು ಹೋಗಿ ದೊಡ್ಡ ಅನಾಹುತವಾಗಿದೆ. ಹೇಗೂ ಹಣಕಾಸು ಸಚಿವರು ಇಲ್ಲಿಯೇ ಇದ್ದಾರೆ. ಒಂದು ನೂರು ಕೋಟಿ ರೂಪಾಯಿಗಳನ್ನು ತತ್‌ಕ್ಷಣ ಬಿಡುಗಡೆ ಮಾಡಿ ಅಲ್ಲಿ ತಕ್ಷಣ ರಿಪೇರಿ ಕೆಲಸಗಳಾಗುವುದಕ್ಕೆ ನೀವು ಅವಕಾಶ ಮಾಡಿಕೊಡಬೇಕು. ಎಲ್ಲಾ ಜಿಲ್ಲಾಧಿಕಾರಿಗಳು ನಿಮಗೆ ಈಗಾಗಲೇ ವರದಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಇಲ್ಲದಿದ್ದರೆ, ನಮ್ಮ ಕ್ಷೇತ್ರದಲ್ಲಿ ನಾವು ಓಡಾಡುವುದಕ್ಕೆ ಕಷ್ಟವಾಗುತ್ತದೆ. ಒಂದು, ಬರಗಾಲವೆಂದು ಎದುರಿಸಿದೆವು. ಈಗ ಮಳೆಯಾಗಿದೆ, ಒಳ್ಳೆಯದಾಗಿದೆ. ಆದರೆ, ಎಲ್ಲಿಯೂ ಈ ರೀತಿ ಅತಿವೃಷ್ಟಿಯಿಂದ ರಸ್ತೆಗಳಿಗೆ, ಕೆರೆಕಟ್ಟೆಗಳಿಗೆ ಮತ್ತು ಜಲಾಶಯಗಳಿಗೆ ತೊಂದರೆಯಾಗಿದೆಯೆಂದ ತಕ್ಷಣ ಒಂದು ನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳು, ಅಧಿಕಾರಿಗಳು ಅಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗುವುದಕ್ಕೆ ತಾವು ಆದೇಶ ನೀಡಬೇಕು ಎನ್ನುವ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಈಗ ಜಿಲ್ಲಾಧಿಕಾರಿಗಳ ವರದಿಗಳನ್ನು ತರಿಸುತ್ತಿದ್ದೇವೆ. ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೂಡ ಕೊಟ್ಟಿದ್ದೇವೆ. ಮಳೆಯಿಂದಾಗುವ ದುರಂತಕ್ಕೆ ಸರಿಯಾದ ರೀತಿಯಲ್ಲಿ ಕೆಲಸ-ಕಾರ್ಯಗಳನ್ನು ತೆಗೆದುಕೊಳ್ಳಬೇಕು. ನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡತಕ್ಕಂಥಾದ್ದು ಏನಿದೆ, ಅದನ್ನು ಸರಿಯಾದ ರೀತಿಯಲ್ಲಿ ಪರಿಶೀಲಿಸುತ್ತೇವೆ. ಇವೊತ್ತು ಕೂಡ ಸಂಪುಟದ ಸಭೆ ಇದೆ. ನಾವು ತೀರ್ಮಾನ ತೆಗೆದುಕೊಂಡು ಕೆಲಸವನ್ನೂ ಕೂಡ ಪ್ರಾರಂಭಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಹಿಮಾಲಯ ಪರ್ವತ ಏರಿ ಕಣ್ಮರೆಯಾಗಿರುವ ಚೈತನ್ಯರ ಬಗ್ಗೆ ಈ ಸದನದಲ್ಲಿ ನಾವು ತಮ್ಮ ಗಮನಕ್ಕೆ ತಂದದ್ದಾಯಿತು. ಈಗ ಅಲ್ಲಿ ರಸೆಲ್ ಬ್ರೈಸ್ ಎಂದು ಸೇರಿರುವ ಶಾರ್ಪ್ ಅವರು ಜೂನ್ ಆರರಂದು 200-300 ಅಡಿ ಹತ್ತಿರದಲ್ಲಿ ಅವರ ದೇಹವನ್ನು ನೋಡಿದ್ದಾರೆಂದು ಹೇಳತಕ್ಕಂಥಾದ್ದು ಇದೆ ಮಾನ್ಯ ಮುಖ್ಯಮಂತ್ರಿಗಳು ಇತ್ತ ಗಮನಹರಿಸಬೇಕು. ಮಾನ್ಯ ಮುಖ್ಯಮಂತ್ರಿಯವರೆ, ನಾನು ಹಿಂದೆ ಈ ಸದನದಲ್ಲಿ ಹೇಳಿದ್ದೆ ಮತ್ತು ಆ ಬಗ್ಗೆ ಸಚಿವ ಸಂಪುಟದಲ್ಲೂ ಅವರಿಗೆ ಹಣ ಕೊಡುವ ಬಗ್ಗೆ ಮಾತನಾಡಲಾಗಿತ್ತು, ಸಂಪುಟ ಸಭೆ ಸೇರಿರಲಿಲ್ಲ. ಸೇರುತ್ತೇವೆಂದು ತಾವು ಹೇಳಿದ್ದಿರಿ. ಆ ಪರ್ವತದಲ್ಲಿ ಇರತಕ್ಕಂಥ ಶಾರ್ಪ್ ಎನ್ನತಕ್ಕಂಥ ಸಂಸ್ಥೆಯ ರಸೆಲ್ ಬ್ರೈಸ್ ಎನ್ನುವವರು ಜೂನ್ ಆರರಂದು ಹಿಮಾಲಯದಲ್ಲಿ 200-300 ಅಡಿ ಹತ್ತಿರದಲ್ಲಿ ಅವರು ನೋಡಿರತಕ್ಕಂಥ ವಿಚಾರವನ್ನು ಇಲ್ಲಿ ತಿಳಿಸಿದ್ದಾರೆ. ನಾನೇನು ತಮಗೆ ಹೇಳುತ್ತಿದ್ದೇನೆಂದರೆ, ತಾವು

ಮತ್ತೊಮ್ಮೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ. ಈ ತನಿಖೆ ಇಲ್ಲಿಗೇ ಮುಗಿಯಬಾರದು. ಈ ತನಿಖೆಯನ್ನು ಸಮಗ್ರವಾಗಿ ಮುಂದುವರೆಯಬೇಕು. ಏನಾಯಿತೆಂಬುದು ಗೊತ್ತಿಲ್ಲ. ತನಿಖೆ ಸಂಪೂರ್ಣವಾಗಿ ಮುಂದುವರೆಸಬೇಕು. ವಾಯುದಳದ ಅಧಿಕಾರಿಗಳು ಕಂದಕದಲ್ಲಿ ಬಿದ್ದಿರುವ ದೇಹವು ಚೈತನ್ಯರದ್ದೇ ಅಲ್ಲವೇ ಎನ್ನತಕ್ಕಂಥ ಬಗ್ಗೆ ಒಂದು ತೀರ್ಮಾನವಾಗಬೇಕು. ತನಿಖೆ ಯಾವ ಹಂತದಲ್ಲಿದೆ ಎಂಬುದು ತೀರ್ಮಾನವಾಗಬೇಕು. ಕರ್ನಾಟಕ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು? ಇದು ತೀರ್ಮಾನವಾಗಬೇಕು. ಕರ್ನಾಟಕ ಸರ್ಕಾರ ರಸೆಲ್ ಬ್ರೈಸ್ ಇರುವ ಸಂಸ್ಥೆ ಜೊತೆಯಲ್ಲಿ ಬಹಳ ಪ್ರಾಮುಖ್ಯವಾದ ಸಂಪರ್ಕವನ್ನು ನೀವೀಗ ವಹಿಸಬೇಕು. ಇದನ್ನು ಅಷ್ಟು ಸುಲಭವಾಗಿ ಬಿಡತಕ್ಕಂಥಾದ್ದಲ್ಲ. ದಯವಿಟ್ಟು ಚೈತನ್ಯ ಅವರನ್ನು ಹುಡುಕಲು ಕೇಂದ್ರ ಸರ್ಕಾರದವರ ಜೊತೆ ತಾವು ಮುಖ್ಯಮಂತ್ರಿಗಳು ನೇರವಾಗಿ ಮಾತನಾಡಬೇಕು. ಚೈತನ್ಯರನ್ನು ಹುಡುಕಿಸುವುದಕ್ಕೆ ತಾವು ಕೇಂದ್ರ ಸರ್ಕಾರದ ಜೊತೆ ಮತ್ತೊಮ್ಮೆ ಮಾತನಾಡಬೇಕು. ಇದು ಕರ್ನಾಟಕ ರಾಜ್ಯ ಸರ್ಕಾರದ ಗೌರವದ ಪ್ರಶ್ನೆ, ದೇಹದ ಗೌರವದ ಪ್ರಶ್ನೆ. ಆದುದರಿಂದ, ತಮಗೆ ಈ ಬಗ್ಗೆ ಬಹಳ ಪ್ರಾಮಾಣಿಕವಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೆ, ಅವರು, ಈಶ್ವರಪ್ಪನವರು, ಮತ್ಯಾರೋ ಬಂದು ನನ್ನನ್ನು ಭೇಟಿಯಾಗಿದ್ದರು. ಭೇಟಿಯಾದ ತಕ್ಷಣ ಚೈತನ್ಯರವರು ಹೋದ ನಂತರ ಏನಾಗಿದೆ ಎನ್ನತಕ್ಕಂಥ ರೀತಿಯಲ್ಲಿ ಡಿಫೆನ್ಸ್‌ನವರೂ ಕೂಡ ಬಹಳ ಶೋಧನೆ ನಡೆಸಿದ್ದಾರೆ. ನಾನು ಇದರ ಬಗ್ಗೆ ಅವರ ತಂದೆಯವರೊಂದಿಗೆ ಮಾತನಾಡಿದಂತೆ ಪ್ರಣಬ್ ಮುಖರ್ಜಿಯವರೊಂದಿಗೆ ಮಾತನಾಡಿದ್ದೇನೆ. ಅವರ ಒಬ್ಬ ತಂಗಿ ಅಮೆರಿಕಾದಲ್ಲಿದ್ದಾರೆ. ಅವೊತ್ತೇ ಅವರು ಐದು ಗಂಟೆಗೆ ಸಮಯ ಕೊಟ್ಟಿದ್ದರು. ತದನಂತರ, ಕೂಡ ಅವರು ಎಲ್ಲಿ ನಾಪತ್ತೆಯಾಗಿದ್ದಾರೆಂಬುದರ ಬಗ್ಗೆ ಸಾಕಷ್ಟು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಮೊನ್ನೆ ಕೂಡ ಪ್ರಣಬ್ ಮುಖರ್ಜಿಯವರು ಬಂದಾಗ ಇದನ್ನು ನಾನು ಅವರ ಮುಂದೆ ಹೇಳಿದ್ದೇನೆ. ಈಶ್ವರಪ್ಪನವರೇ, ತಾವೇನು ಹೇಳಿದಿರಿ, ಇವೊತ್ತು ಅವರು dental ಕಂಪ್ಲೀಟ್ ಮಾಡಿದ್ದಾರೆ. ಈಗ ಇಮ್ಮೀಡಿಯೇಟ್ ಆಗಿ ಅವರಿಗೆ ಒಂದು ಉದ್ಯೋಗ ಒದಗಿಸಿಕೊಡಬೇಕೆಂದು ಈಗಾಗಲೇ ಆರ್ಡರ್ ಮಾಡಿದ್ದೇನೆ. ಅವರಿಗೆ ಈಗ ಸ್ವಲ್ಪ ತೊಂದರೆಯಾಗಿರುವುದರಿಂದ ಇಮ್ಮೀಡಿಯೇಟ್ ಆಗಿ ಒಂದು ಲಕ್ಷ ರೂಪಾಯಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನೂ ಕೂಡ ಚೈತನ್ಯ ಅವರ ಮನೆಯವರಿಗೆ ಕೊಡತಕ್ಕಂಥ ಹಣ ಏನಿದೆ ಅದು ಇವತ್ತು ನಾವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಬೇಕು. ಈಗ ತನಿಖೆ ನಿಂತು ಹೋಗಿದೆ. ತಾವು ಮಾತನಾಡಿ ತನಿಖೆ ಮುಂದುವರಿಸಬೇಕು. ನೀವು 25 ಲಕ್ಷ ರೂಪಾಯಿ ಕೊಡುವ ಬಗ್ಗೆ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಿ. ಈ ತನಿಖೆ ನಡೆಸುವುದಕ್ಕೆ ಕೇಂದ್ರ ಸರ್ಕಾರದ ಜೊತೆಯಲ್ಲಿ ತಾವೇ ಒತ್ತಾಯ ಮಾಡಬೇಕು ಮತ್ತು ಮತ್ತೊಮ್ಮೆ ತನಿಖೆ ಆಗಲೇಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಚೈತನ್ಯರವರದ್ದು ಇವತ್ತು ಏನು ನಮಗೆ ಸುದ್ದಿ ಬಂದಿದೆ ಅವರ ಸಾವು ನಿಗೂಢವಾಗಿರುವುದರಿಂದ ಮತ್ತೆ ಇದರ ಬಗ್ಗೆ ಪತ್ತೆ ಹಚ್ಚದೇ ಇದ್ದರೆ ಇದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಕನ್ನಡಿಗರ ಒಂದು ಸ್ವಾಭಿಮಾನದ ಪ್ರಶ್ನೆ ನೀವು ಪ್ರಯತ್ನ ಮಾಡಿದ್ದೀರಿ. ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಇಟ್ಟುಕೊಂಡು ಇದುವರೆಗೂ

ಆ ಚೈತನ್ಯನ ಜೊತೆಯಲ್ಲಿದ್ದಂತಹ ವ್ಯಕ್ತಿಯನ್ನು ಭೇಟಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ಅವರ ಶ್ರೀಮತಿಯವರು ಹೇಳಿದರೆ ಭೇಟಿ ಮಾಡುವುದಕ್ಕೂ ಅವಕಾಶ ಕೊಡಲಿಲ್ಲ. ತಮಗೆ ಎಲ್ಲಾ ವಿವರವೂ ಗೊತ್ತಿದೆ ಎನ್ನುವಂಥಾದ್ದು ಚೈತನ್ಯರವರ ಶ್ರೀಮತಿಯವರ ಅಭಿಪ್ರಾಯ. ಇದುವರೆಗೂ ಅವಕಾಶ ಆಗಲಿಲ್ಲ. ಈ ಎಲ್ಲಾ ಸಂಗತಿಗಳ ಬಗ್ಗೆ ತಾವು ಸ್ವಲ್ಪ ಗಮನ ಕೊಟ್ಟು ಈ ನಿಗೂಢವಾದ ವಿಷಯ ಹೊರಗೆ ಬಂದು ಅವರಿಗೆ ಸರಿಯಾದಂತಹ ಒಂದು ಪರಿಹಾರ ಸಿಕ್ಕಿ ತತ್‌ಕ್ಷಣ ಅವರಿಗೆ ಉದ್ಯೋಗ ಸಿಗುವಂತೆ ಆ ಹೆಣ್ಣು ಮಗಳಿಗೆ ಅನುಕೂಲ ಮಾಡಿಕೊಡುವಂಥಾದ್ದು, ಮತ್ತು ಹೆಚ್ಚಿನ ಪರಿಹಾರ ಕೊಡುವ ಬಗ್ಗೆ ಏನು ಯೋಚನೆ ಮಾಡಿದ್ದೀರಿ ಅದನ್ನು ಮಾಡಿ ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮೊನ್ನೆ ಏರ್‌ಫೋರ್ಸ್‌ನ ಚೀಫ್ ಶ್ರೀ ತ್ಯಾಗಿ ಅವರು ಬಂದಿದ್ದರು. ನಾನು ಪ್ರಣವ್ ಮುಖರ್ಜಿಯವರ ಜೊತೆಯಲ್ಲೂ ಕೂಡ ರಿಕ್ವೆಸ್ಟ್ ಮಾಡಿದ್ದೇನೆ. ತಾವು ಹೇಳಿದ ಹಾಗೆ ಇನ್ನೊಂದು ಸಲ ರಕ್ಷಣಾ ಮಂತ್ರಿಗಳನ್ನು ಭೇಟಿಯಾಗಿ ಇದರ ಬಗ್ಗೆ ತೀವ್ರತರವಾಗಿ ಶೋಧನೆ ಮಾಡತಕ್ಕಂಥ ರಿಕ್ವೆಸ್ಟ್‌ನ್ನು ಕರ್ನಾಟಕ ಸರ್ಕಾರದ ಪರವಾಗಿ ನಾನು ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈಗ ಮಲೆನಾಡು ಅಭಿವೃದ್ಧಿ ಮಂಡಲಿ, ಬಯಲುಸೀಮೆ ಅಭಿವೃದ್ಧಿ ಮಂಡಲಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಈ ಬಗ್ಗೆ ನಾನು ತಮಗೆ ಇಷ್ಟೇ ಹೇಳುವುದು ಇಲ್ಲಾ ಅವುಗಳನ್ನು ಕ್ಲೋಜ್ ಮಾಡಿಬಿಡಿ. ಕಳೆದ 4–5 ವರ್ಷಗಳಿಂದ ಒಂದಲ್ಲ ಒಂದು ಕಾರಣದಿಂದ ಹಣಕಾಸಿನ ತೊಂದರೆಯಿಂದ ಕೇವಲ ಅಲ್ಲಿ ನೌಕರರಿಗೆ ಸಂಬಳ ಕೊಡುತ್ತಿದ್ದೀರಿ, ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಕಟ್ಟಿದ್ದೇವೆಯೇ ಹೊರತು ಏನೂ ಕೆಲಸ ಆಗುತ್ತಿಲ್ಲ. ಕಳೆದ 4 ತಿಂಗಳಲ್ಲಿ ಒಂದೂ ಪ್ರೋಗ್ರೆಸ್ ಆಗುತ್ತಿಲ್ಲ. ಹೋದ ವರ್ಷವೂ ತಾವು ಒಂದು ರೂಪಾಯಿ ಹಣ ಕೂಡ ಬಿಡುಗಡೆ ಮಾಡುವುದಕ್ಕೆ ಆಗಲಿಲ್ಲ. ಇಲ್ಲಾ ಈ ನಿಗಮಗಳನ್ನು ಮುಚ್ಚಿಬಿಡಿ, ಇಲ್ಲಾ ಹಣವನ್ನು ಬಿಡುಗಡೆ ಮಾಡಿ ಅದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಮಲೆನಾಡು ಅಭಿವೃದ್ಧಿ ಮಂಡಲಿ, ಬಯಲುಸೀಮೆ ಅಭಿವೃದ್ಧಿ ಮಂಡಲಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಕಳೆದ 14–15 ತಿಂಗಳಿಂದ ಅಲ್ಲಿ ನೌಕರರಿಗೆ ಸಂಬಳ ಕೊಡುವುದು ಬಿಟ್ಟು ಯಾವುದೇ ಪ್ರೋಗ್ರೆಸ್ ಇಲ್ಲ. ಈ ಸಲ ನಾವು ಬಜೆಟ್ ಏನು ಅಲೋಕೇಶನ್ ಮಾಡಿದ್ದೇವೆ ಅದು ಹಳೆಯ ಬಾಕಿ ತೀರಿಸುವುದಕ್ಕೂ ಆಗುತ್ತಿಲ್ಲ. ಅದಕ್ಕಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ ಇಷ್ಟೊಂದು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದೀರಿ. ಇದರ ಮೂಲಕ ಮಲೆನಾಡು ಪ್ರದೇಶದಲ್ಲಿ, ಬಯಲುಸೀಮೆ ಪ್ರದೇಶದಲ್ಲಿ ಒಳ್ಳೆಯ ಕೆಲಸಗಳು ಆಗುತ್ತಿವೆ. ಎಲ್ಲಾ ಸಿಬ್ಬಂದಿ ಇದ್ದು ಅದಕ್ಕೆ ಬೇಕಾದ ಇನ್‌ಫ್ರಾಸ್ಟ್ರಕ್ಚರ್ಸ್ ಎಲ್ಲಾ ರೆಡಿ ಮಾಡಿ ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ದಯಮಾಡಿ ಹೆಚ್ಚು ಹಣವನ್ನು ಇದಕ್ಕೆ ಬಿಡುಗಡೆ ಮಾಡಿ ಅದು ಕೆಲಸ ಆಗುವಂತೆ ನೋಡಿಕೊಳ್ಳಿ. ನಿಮಗೆ ಹೇಳುವುದಕ್ಕೆ ತೊಂದರೆಯಾಗುತ್ತದೆಯೆಂದು ನನಗೆ ಗೊತ್ತಿದೆ. ಆದರೆ ಇದು ಪ್ರಮುಖವಾದ ವಿಷಯ ಅಲ್ಲವೆ? ಎಲ್ಲ ಶಾಸಕರುಗಳಿಗೂ ಸಂಬಂಧಪಟ್ಟ ವಿಷಯ ಇದು ಹಣ ಬಿಡುಗಡೆ ಮಾಡದಿದ್ದರೆ ನಾವೇನು ಮಾಡುವುದು ಹೇಳಿ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಹಣವನ್ನು ಬಿಡುಗಡೆ ಮಾಡುತ್ತೇವೆ. ಈಗ ನಾವು ಓಟ್ ಅನ್ ಅಕೌಂಟ್ಸ್ ಮೇಲೆ ಇರುವುದು. ಈಗ

ಸಂಪೂರ್ಣ ಬಜೆಟ್ ಪಾಸ್ ಆಗುತ್ತದೆ. ಬಜೆಟ್ ಪಾಸಾದ ತಕ್ಷಣ ಆಗಸ್ಟ್‌ನಲ್ಲಿಯೇ ಬಿಡುಗಡೆ ಮಾಡುತ್ತೇನೆ.

ಉಪಾಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ:

"31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 2 ರಿಂದ 5, 7, 8, 11 ರಿಂದ 15, 19 ರಿಂದ 22, 24 ರಿಂದ 28 ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿರುವ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

(ಅಭಿಯಾಚನೆ ಕ್ರಮಾಂಕ 2 – ಪಶು ಸಂಗೋಪನೆ ಮತ್ತು ಮೀನುಗಾರಿಕೆ)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶು ಸಂಗೋಪನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20999.84 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 634.80 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3 – ಆರ್ಥಿಕ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ ಸಂದಾಯ" ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 556009.07 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9457.15 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4 – ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15064.88 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 5 – ಒಳಾಡಳಿತ ಮತ್ತು ಸಾರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ 118046.76 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7983.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7 – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 102004.83 ಲಕ್ಷ ರೂ.ಗಳಿಗಿಂತೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 51084.63 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8 – ಅರಣ್ಯ ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯ ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 23418.73 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 50.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 36685.89 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1396.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5656.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 80.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13 – ಆಹಾರ ಮತ್ತು ನಾಗರೀಕ ಸರಬರಾಜು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 52926.60 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು

ಬಂಡವಾಳ ಖಾತೆಯಲ್ಲಿ 10.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14 – ಕಂದಾಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 76233.28 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1121.00 ಲಕ್ಷ ರೂ.ಗಳಿಗಿಂತ ಮೀರಧ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 15 – ಮಾಹಿತಿ ತಂತ್ರಜ್ಞಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1068.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2106.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 156066.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27567.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ ಕಾಮಗಾರಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 99625.40 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 112956.41 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21 – ಜಲಸಂಪನ್ಮೂಲ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21758.93 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 319358.04 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 116103.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8801.20 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 24 – ಇಂಧನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 210124.51 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1951.50 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 25 – ಕನ್ನಡ ಮತ್ತು ಸಂಸ್ಕೃತಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4222.17 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 175.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 26 – ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34428.28 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27 – ಕಾನೂನು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15078.87 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3941.19 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

6. ಶಾಸನ ರಚನೆ

ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2005

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, "2005ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :–

"2005ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, "2005ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–1)

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, "2005ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:–

"2005ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:– "2 ಮತ್ತು 3ನೇ ಖಂಡಗಳು, ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ".